ಮೇಲೆ (3), (4) ಮತ್ತು (5)ರಲ್ಲಿ ಓದಲಾದ ಪತ್ರಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿಯಂತ್ರಣದಲ್ಲಿದ್ದ 32 ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಕೆರೆಗಳ ಪುನರುಜ್ಜೀವನಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯಲ್ಲಿ ಮೆ॥ ಎನ್ವಿರಾನ್‌ಮೆಂಟ್ ಸಪೋರ್ಟ್ ಗ್ರೂಪ್ (M/s Environment Support Group) ಮತ್ತು ಶ್ರೀ ಲಿಯೋ ಸಲ್ದಾನಾ (Leo Saldanha) ಇವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 817/2008 ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ 26-11-2010 ರಂದು ನೀಡಿದ ಆದೇಶದಲ್ಲಿ ಬೆಂಗಳೂರು ನಗರದಲ್ಲಿರುವ ಕೆರೆಗಳ ಸಂರಕ್ಷಣೆಯ ಬಗ್ಗೆ ಪ್ರಗತಿಯ ವರದಿಯನ್ನುಪರಿಶೀಲಿಸಲು ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಹಾಗೂ ಕರ್ನಾಟಕ ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಶ್ರೀ ಎನ್. ಕೆ. ಪಾಟೀಲ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಆದೇಶಿಸಿತ್ತು. ಈ ಸಮಿತಿಯು ದಿನಾಂಕ 06-07-2011 ರಂದು ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿತ್ತು. ಈ ವರದಿಯ ಅನುಷ್ಠಾನದ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 22-07-2011 ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಸದರಿ ಸಭೆಯಲ್ಲಿ ಬೆಂಗಳೂರು ನಗರದ ಕೆರೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿಯ ಸಭೆಯನ್ನು ಕರೆದು ಚರ್ಚಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ 18-08-2011ರಂದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಮೇಲೆ (6)ರಲ್ಲಿ ಓದಲಾದ ದಿನಾಂಕ 19-08-2011ರ ಪತ್ರದಲ್ಲಿ ಪಾಲಿಕೆಯ ವಶದಲ್ಲಿರುವ 132 ಕೆರೆಗಳ ಹಾಗೂ ಇನ್ನಿತರೆ 10 ಕೆರೆಗಳ ಪೈಕಿಪಾಲಿಕೆ ವತಿಯಿಂದ ಅಭಿವೃದ್ಧಿಗೊಳಿಸುತ್ತಿರುವ ಕೆರೆಗಳನ್ನು ಹೊರತುಪಡಿಸಿ ಉಳಿದ 88 ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಕೋರಲಾಗಿತ್ತು. ದಿನಾಂಕ 18-08-2011 ರಂದು ನಡೆದ ಸಭೆಯಲ್ಲಿ ನಿರ್ಣಯಿಸಿದಂತ ಪಾಲಿಕೆ ವಶದಲ್ಲಿರುವ 132 ಕೆರೆಗಳು ಹಾಗೂ ಕೆರೆಗಳ ಅಭಿವೃದ್ಧಿ ಪ್ರಾಧಿಕಾರದಿಂದ ಹಸ್ತಾಂತರಿಸುವ ಸಾರಕ್ಕಿ/ಜರಗನಹಳ್ಳಿ ಕೆರೆಗಳ ಪೈಕಿ 55 ಕೆರೆಗಳನ್ನು ಪಾಲಿಕೆಯಿಂದ ಅಭಿವೃದ್ಧಿಪಡಿಸಲು ಉಳಿಸಿಕೊಂಡು ಬಾಕಿ 78 ಜೀವಂತ ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಬಹುದಾಗಿರುತ್ತದೆ. ಹೀಗೆ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗುವ ಕೆರೆಗಳನ್ನು ಹೊರತುಪಡಿಸಿ ಪಾಲಿಕೆಯ ನಿಯಂತ್ರಣದಲ್ಲಿ ಉಳಿಯುವ ಕೆರೆಗಳ ಅಭಿವೃದ್ಧಿಗೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 817/2008 ಮತ್ತು ಇತರೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ

ದಿನಾಂಕ 07-07-201 ರಂದು ನೀಡಿರುವ ಆದೇಶದಲ್ಲಿ ಕೆರೆಗಳ ಅಭಿವೃದ್ಧಿಗೆ ತಗಲುವ ವೆಚ್ಚದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸರ್ಕಾರದಿಂದ ಸಮನಾಗಿ ಹಣವನ್ನು ವಾರ್ಷಿಕ ವೆಚ್ಚದಲ್ಲಿ ಮೀಸಲಿಟ್ಟು, ಕೆರೆಗಳ ಮುಂದುವರೆದ ಕೆಲಸಗಳಿಗಾಗಿ ಹಣವನ್ನು ತ್ರೈಮಾಸಿಕವಲ್ಲಿ ಬಿಡುಗಡೆ ಮಾಡಬೇಕು ಹಾಗೂ ಇದಕ್ಕಾಗಿ ಬೇರೆ ಲೆಕ್ಕ ಶೀರ್ಷಿಕೆಯನ್ನು ಮಾಡಬೇಕು ಎಂದು ತಿಳಿಸಿರುವುದರಿಂದ ಸಾಕಷ್ಟು ಅನುದಾನವನ್ನು ಬಿಡುಗಡೆಗೊಳಿಸುವಂತೆ ಹಾಗೂ ಪಾಲಿಕೆಯವತಿಯಿಂದ ಈಗಾಗಲೇ ಅಭಿವೃದ್ಧಿಗೊಳಿಸಿರುವ, ಅಭಿವೃದ್ಧಿಗೊಳಿಸುತ್ತಿರುವ ಹಾಗೂ ಡಿ.ಪಿ.ಆರ್./ಅಂದಾಜು ಪಟ್ಟಿ ತಯಾರಿಸಿರುವ ಕೆರೆಗಳನ್ನು ಹೊರತುಪಡಿಸಿ ಉಳಿದಿರುವ 78 ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಸಂಬಂಧ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಈ ಪ್ರಸ್ತಾವನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಮೇಲೆ (7)ರಲ್ಲಿ ಓದಲಾದ ದಿನಾಂಕ 19-08-2011ರ ಪತ್ರದಲ್ಲಿ ಪಾಲಿಕೆಗೆ ಸೇರಿದ 78 ಕೆರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸಹಮತಿಸಿರುತ್ತಾರೆ ಹಾಗೂ ಈ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಸಹಾಯಧನ ಒದಗಿಸುವಂತೆ ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪ್ರಸ್ತಾವನೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ 19-08-2011ರ ಪತ್ರದೊಂದಿಗೆ ಲಗತ್ತಿಸಲಾದ ಹಾಗೂ ಈ ಆದೇಶದ ಅನುಬಂಧದೊಂದಿಗೆ ಲಗತ್ತಿಸಲಾದ 78 ಕೆರೆಗಳನ್ನು ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 441 ಎಂಎನ್‌ವೈ 2011, ಬೆಂಗಳೂರು, ದಿನಾಂಕ 25-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ 78 (ಎಪ್ಪತ್ತೆಂಟು) ಕೆರೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 139 ಇಸಿಓ 2008, ದಿನಾಂಕ 19-04-2010ರಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್. ರೇಣುಕಾರಾಧ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಸರ್ಕಾರದ ಆದೇಶ ಸಂಖ್ಯೆ: ನಅಇ 441 ಎಂಎನ್‌ವೈ 2011, ಬೆಂಗಳೂರು, ದಿನಾಂಕ 25-01-2012ಕ್ಕೆ ಅನುಬಂಧ

LIST OF LAKES OF BBMP HANDING OVER TO BDA

Sl. No.	Name of Lake / Taluk	Village Name & Sy. No.	Total Area	
			Ac	Gu
1	Gunjur mouji kere / Bangalore East	Gunjur-301 (P)	59.00	13.00
		Kachamaranahalli-74	4.00	26.00
2	Panathur kere-38 / Bangalore East	Panathur-38	27.00	17.00
3	Gangasetty kere / Bangalore East	K R Pura-58	18.00	32.00
		Devasandra-46	2.00	35.00
4	Nalluralli tank / Bangalore East	Nalluralli-4	20.00	34.00
		Pattandur Agrahara-85	27.00	5.00
5	Siddapura kere / Bangalore East	Siddapura-18	27.00	35.00
6	Panathur kere-48 / Bangalore East	Panathur-48	6.00	30.00
7	Bhoganalli kere / Bangalore East	Ghoganalli-21	12.00	24.00
8	Devara bisenalli kere / Bangalore East	Devarabisenalli-18	13.00	31.00
9	Gunjur Palya kere / Bangalore East	Gunjur-83	36.00	27.00
10	Gunjur kere (Carmelarm) / Bangalore East	Gunjur-95	9.00	17.00
11	K R Puram (BEML) / Bangalore East	Benniganahalli-47	18.00	25.00
		Benniganahalli-55	27.00	14.00
12	Vibhuthipura kere / Bangalore East	Vibhuthipura-175	45.00	18.00
13	Horamavu kere / Bangalore East	Horamavu-83	37.00	14.00
14	Junnasandra kere / Bangalore East	Junnasandra-32	24.00	33.00
15	Chikka bellandur ker / Bangalore East	Chikka bellandur-9	67.00	14.00
16	Horamavu Agara / Bangalore East	Horamavu Agara-77	51.00	34.00
17	Sadaramangala kere / Bangalore East	Sadaramangala kere-61	51.00	4.00
		Kodagehalli-8	1.00	17.00
18	Garudachar Palya kere-1 (Acchanakere)/ Bangalore East	Mahadev pura-31	5.00	36.00
19	Hoodi kere-1 / Bangalore East	Hoodi-79	15.00	10.00
20	Hoodi kere (GIDDANA KERE) / Bangalore East	Hoodi-138	28.00	31.00

21	Garudachar Palya-2 (Goshala) / Bangalore East	Mahadev pura-86	5.00	14.00
22	Chikkabasavanapura kere / Bangalore East	Basavanapura-14	14.00	7.00
23	Bhattralli kere / Bangalore East	Bhattralli-2	18.00	10.00
24	Jimkenalli kere / Bangalore East	Varanasi-47	8.00	24.00
25	Sidram Palya / Bangalore East	Sonnenalli / Seetharama Playa-33	23.00	37.00
26	Pattandur Agrahar / Bangalore East	Pattandur Agrahara-124	16.00	35.00
27	Mahadevapura / Bangalore East	Mahadevapura-187	13.00	11.00
28	Nagareshwara-Nagenahalli Lake / Bangalore East	Nagareshwara Nagenahalli-10	11.00	8.00
29	Kelagina kere / Byrasandra / Bangalore East	Byrasandra-112	12.00	21.00
30	Kadirenapalya kere / Bangalore East	Binnamangala-99	37.00	4.00
31	Pattandur Agrahar / Bangalore East	Pattandur Agrahar-54	12.00	37.00
32	Baiyapanahalli kere / Bangalore East	Baiyappanahalli-61	8.00	9.00
33	Sarakki / Jaraganahalli / Puttenhalli Lake / Bangalore South	Jaraganahalli-7	38.00	16.00
34	Konnappana Agrahar / Bangalore South	Naganathpura (South)-81	5.00	17.00
35	Chikkabegure / Bangalore South	Begur-0168	32.00	19.00
		Singsandra-0086	10.00	26.00
36	Haralakunte Lake (Somasandrakere) / Bangalore South	Haralakunte-0051	16.00	29.00
37	Meenakshi kere / Bangalore South	Meenakshi-38	18.00	32.00
38	Chowdeshwary layout / Bangalore South	Chowdeshwary-18	11.00	18.00
39	Basapura Lake-2 / Bangalore South	Basapura-0066	10.00	29.00
40	Basavanapura Lake / Bangalore South	Basavanapura-0014	7.00	34.00
41	Begur Lake / Bangalore South	Begur-0094	137.00	24.00
42	Chikkammanahalli Lake / Bangalore South	Kammanahalli-0022	5.00	19.00
43	Devarakere Lake / Bangalore South	Bikasipura-0009	7.00	15.00
44	Nyanappanahalli Lake / Bangalore South	Begur-0344	6.00	7.00
45	Gottigere Lake / Bangalore South	Gottigere-0071	37.00	3.00
46	Kalena Agrahara Lake / Bangalore South	Kalena Agrahara-0043	7.00	30.00
47	Subbarayanakere / Bangalore South	Gottigere-0012	5.00	10.00
48	Subedeharanakere / Bangalore South	Begur-0048	6.00	5.00
49	Subramanyapura Lake / Bangalore South	Uttarahalli-0064	18.00	6.00
50	Swaranakunte gudda kere / Bangalore South	Chandrashekarapura-0001	9.00	5.00
51	Yellenhalli Lake / Bangalore South	Yelanahalli-0055	4.00	39.00
52	Annappahalli / Yelachenahalli Lake / Bangalore South	Yelachenahalli-06, Gopinayakanahalli-14	6.00	32.00
53	Kalyani / Kunte (Next to Sai Baga Temple) / Bangalore South	Vasanthapura-021	1.00	8.00
54	Byrasandra kere / Chickpet	Byrasandra-0056	15.00	11.00
55	Anjanapura Lake / Alahalli / Bangalore South	Alahalli-0030 Gollahalli-0003	21.00	25.00
56	Nagarabhavi / Bangalore South	Nagarabhvi-77	17.00	39.00
57	Abbigere kere / Bangalore South / North Addl.	Abbigere-75	26.00	6.00
		Singapur-93	21.00	7.00
58	Chikka Banavara / Bangalore North	Chikka Banavara-3	67.00	38.00
		Somashettyhalli-73	3.00	21.00
		Kere gullada halli-22	26.00	32.00
		Ganigarahalli-11, 15	4.00	14.00
			2.00	30.00
59	Lakshmipura lake / Bangalore North	Lakshmipura-25	10.00	20.00
60	Bellahalli / Bangalore North Addl	Bellahalli-68	18.00	32.00
61	Medi Agrahara / Bangalore North Addl	Medi Agrahara-33	13.00	15.00
62	Shivanahalli / Bangalore North Addl	Shivanahalli-48	14.00	30.00
		Allalasandra-38	3.00	22.00
63	Singapura kere / Bangalore North Addl	Singapura-102	66.00	18.00

64	Singapura kere / Bangalore North Addl	Srinivasapura-2	3.00	14.00
65	Vaderahalli / Bangalore North Addl	Vaderahalli-32	9.00	34.00
66	Kalkere Rampura kere / Bangalore East	Kalkere-162	64.00	25.00
		Rampura-22	3.00	4.00
		Maragondanahalli-71	11.00	35.00
		Huvineane-86	108.00	7.00
67	Chennasandra-2 / Bangalore East	Banasawadi-211	42.00	38.00
68	Dubasipalya / Bangalore South	Valagerchalli-43	23.00	35.00
69	Pattanagere Kenchenhalli / Bangalore South	Pattanagere-43	0.00	31.00
		Kenchenahalli-33	3.00	39.00
70	Ibblur / Bangalore South	Ibbblur-0036	18.00	6.00
71	Gowdanapalya Lake / Bangalore South	Kadirenahalli-33	9.00	30.00
72	Gattagigere Palya / Bangalore South	Somapura-27/53	0.00	37.00
73	Chikkegowdanapalya / Bangalore South	Hemmagipura-92	1.00	33.00
74	Kengeri Lake / Bangalore South	Kengeri-15	27.00	3.00
		Velagerahalli-85	5.00	13.00
75	Varahasandra Lake / Bangalore South	Hemmigepura-004	4.00	11.00
		Varahasandra-0024	13.00	9.00
76	Vishvaneedam Lake / Bangalore North	Herohalli-50	4.00	30.00
77	Mallesandra Gudde kere / Bangalore North	Mallasandra-49	11.00	28.00
		Mallasandra-50	5.00	23.00
78	Sriganda Kaval (Near Rajiv Gandhi Nagar) Bangalore North	Sriganda Kaval-15	6.00	33.00

S. Renukaradhya
Under Secretary to Government
Urban Development Department

P.R. 454

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ನಅಇ 296 ಬೆಂರೂಪ್ರಾ 2009, ಬೆಂಗಳೂರು ದಿನಾಂಕ : 23-01-2012

ವಿಷಯ : ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪರಿಷ್ಕೃತ-I)ಕ್ಕೆ ಸರ್ಕಾರದ ಅಂತಿಮ ಅನುಮೋದನೆ ನೀಡಿರುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 81 ಬೆಂರೂಪ್ರಾ 2008, ಬೆಂಗಳೂರು ದಿನಾಂಕ : 26-07-2008ರ ದಾವಣಗೆರೆ-ಹರಿಹರ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ-I)ಕ್ಕೆ ಆದೇಶದಲ್ಲಿ ಅಂತಿಮ ಅನುಮೋದನೆ ನೀಡಿರುವ ವರದಿಯಲ್ಲಿನ ವಲಯ ನಿಯಮಾವಳಿ ಭಾಗದಲ್ಲಿರುವ "Size of Plots" ಪ್ಯಾರಾದಲ್ಲಿ (ಪುಟ ಸಂಖ್ಯೆ : 135) 36.0 ಚ.ಮೀ. ಎಂದು ನಮೂದಿಸಿರುವುದನ್ನು 54.0 ಚ.ಮೀ. ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 455

ವಸತಿ ಸಚಿವಾಲಯ

ವಿಷಯ : ಕೇಂದ್ರ ಪುರಸ್ಕೃತ ಯೋಜನೆ ನರ್ಮ್ ಯೋಜನೆಯಡಿ ಸಮಗ್ರ ವಸತಿ ಮತ್ತು ಕೊಳಚೆ ಅಭಿವೃದ್ಧಿ ಯೋಜನೆ (IHSDP) ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ : ಕಕೊಅಮ : ಲೆ.ಪ.ಶಾ : Jn NURM-IHSDP ಅನುದಾನ : 2011-12, ದಿನಾಂಕ : 29-11-2012.
2. ಆರ್ಥಿಕ ಇಲಾಖೆ (ವೆಚ್ಚ-3/9) ಹಿಂಬರಹ ಸಂಖ್ಯೆ = FD/660/Exp-9/2011, ದಿನಾಂಕ : 13-01-2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರ ಪತ್ರದಲ್ಲಿ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ (IHSDP) ರಾಜ್ಯಾದ್ಯಂತ ವಿವಿಧ ನಗರ/ಪಟ್ಟಣಗಳಲ್ಲಿ ಮನೆಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಈಗಾಗಲೇ ಬಿಡುಗಡೆಯಾಗಿರುವ ಅನುದಾನಕ್ಕೆ ಸಮಾನಾಂತರವಾಗಿ ಬಿಡುಗಡೆಯಾಗಬೇಕಾದ ಹಂತ-1 ಮತ್ತು ಹಂತ-2ರ ನಗರ/ಪಟ್ಟಣಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಬಾಕಿ ವಂತಿಗೆ ರೂ. 1126.32 ಲಕ್ಷಗಳನ್ನು 2011-12ನೇ ಸಾಲಿನ ಪೂರಕ ಆಯವ್ಯಯದಲ್ಲಿ ನಿಗದಿಪಡಿಸಿ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯ

ಲೆಕ್ಕ ಶೀರ್ಷಿಕೆ 2217-04-191-2-03 (IHSDP) ಅಡಿಯಲ್ಲಿ ಮಂಡಳಿಗೆ ಬಿಡುಗಡೆ ಮಾಡಬೇಕೆಂದು ಆಯುಕ್ತರು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 12 ಕೊಮಂಲೆ 2009, ಬೆಂಗಳೂರು, ದಿನಾಂಕ : 25-01-2012

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕೈಗೊಂಡಿರುವ ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (IHSDP) ಯೋಜನೆಯಡಿಯ ಮನೆಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ವಂತಿಗೆಗೆ ಸಮಾನಾಂತರವಾಗಿ ರಾಜ್ಯ ಸರ್ಕಾರದ ಪಾಲಿನ ಬಾಕಿ ಅನುದಾನವನ್ನು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2217-04-191-2-03 (IHSDP) ಯಡಿ ಪೂರಕ ಅಂದಾಜು-II ರಲ್ಲಿ ಒದಗಿಸಿರುವ ಅನುದಾನ ರೂ. 1126.32 ಲಕ್ಷಗಳನ್ನು (ಹನ್ನೊಂದು ಕೋಟಿ ಇಪ್ಪತ್ತಾರು ಲಕ್ಷದ ಮೂವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಕಾಲಕಾಲಕ್ಕೆ ಕೇಂದ್ರ ಸರ್ಕಾರದಿಂದ ಹೊರಡಿಸುವ ಸೂಚನೆ, ಮಾರ್ಗಸೂಚನೆ, ಕೇಂದ್ರ ಸಿ.ಎಸ್.ಎಂ.ಸಿ. ಸಭೆಯ ನಡವಳಿಯಲ್ಲಿ ನೀಡಿರುವ ಸೂಚನೆ, ಎಸ್.ಎಲ್.ಇ.ಸಿ (IHSDP) ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಜೊತೆಗೆ ಈ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕೆಂದು ಸೂಚಿಸಲಾಗಿದೆ.

1. ಈ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
2. ಫಲಾನುಭವಿಗಳಿಂದ ವಂತಿಕೆಯು ನಿಯಮಿತವಾಗಿ ಪಾವತಿಯಾಗುವಂತೆ ಕ್ರಮ ವಹಿಸತಕ್ಕದ್ದು.
3. ಯೋಜನೆಯ ಅನುಷ್ಠಾನದ ಹಂತದ ಬಗ್ಗೆ ಕಾಲಕಾಲಕ್ಕೆ ವರದಿಗಳನ್ನು ಕೇಂದ್ರ/ರಾಜ್ಯ ಸರ್ಕಾರಕ್ಕೆ ನೀಡತಕ್ಕದ್ದು.
4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
5. ಸರ್ಕಾರಕ್ಕೆ ಆಡಿಟ್ ವರದಿಯನ್ನು ನಿಗದಿತ ಸಮಯಕ್ಕೆ ಸಲ್ಲಿಸತಕ್ಕದ್ದು.
6. ಪ್ರಸಕ್ತ ಆರ್ಥಿಕ ವರ್ಷದಲ್ಲಿ (2011-12) ಬಿಡುಗಡೆಯಾಗಿರುವ ಮೊತ್ತಕ್ಕೆ ನಿಗದಿತ ಅವಧಿಯೊಳಗೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿರುವ ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು, ವಸತಿ ಇಲಾಖೆಯ ಉಪ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ : FD/660/Exp-9/2011, ದಿನಾಂಕ : 13-01-2012 ಸೂಚನೆಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಆರ್. ನಾಗರಾಜ
ಪೀಠಾಧಿಕಾರಿ-4
ವಸತಿ ಇಲಾಖೆ

ಪಿ.ಆರ್. 456

ENERGY SECRETARIAT

Sub: Issue of directions under Section 11 of Electricity Act 2003 to the Generators in the State for Supply of Energy to the State subject to determination of final tariff by Hon'ble Karnataka Electricity Regulatory Commission (KERC).

Read :
1. Letter No. PCKL/A11/22/2007-08/5860, dated 31-12-2011 of Managing Director, Power Company of Karnataka Limited, Bangalore.
2. Letter No. PCKL/A1/22/2007-08/5918, dated 03-01-2012 of Managing Director, Power Company of Karnataka Limited, Bangalore.
3. Letter No. PCKL/A1/19/2009-10/6585, dated 25-01-2012 of Managing Director, Power Company of Karnataka Limited, Bangalore.

Preamble:

1. The State is facing power shortage during 2011-12. There is a deficit between demand and supply in the State. Owing to steep increase over the years in the demand for power supply, the daily consumption of energy has also increased.
2. Compared to previous year, the State has received less rainfall in the catchment areas of the main Hydel reservoirs. As of now, 53% of the State's generation is met from Hydel sources.
3. The State is making concerted efforts to increase generation . The first unit of the M/s UPCL (600 MW) was synchronized on 18th July 2010, the unit was stabilized and COD was achieved in November 2010. 402 MW of RE power was added during 2010-11 and 441 MW of power is expected to be added during 2011-12. Even with the addition of 250 MW from RTPS unit 8 and 60 MW from Kaiga Unit 4 being Karnataka share, the State continues to face deficit.

4. Following issues have also contributed to the widening of the gap between demand and supply :-
   a. As on 31st December 2011 only 5871 MU of Hydro power is left in the major reservoirs. After deducting 10% carry over only 5000 MU is available for balance period of 182 days i.e., up to 30th June 2012.

b. Evacuation line for full load of UPCL Unit II (540 MW) which was expected by June 2012 has been postponed due to delay in MOEF clearance.

c. None of the power plants either from CGS or from KPCL are expected to commission during 2011-12 except Vallur TPP Unit I from which State allocation is meager i.e. 37.17 MW.

d. Karnataka has experienced a reduction in power availability from its share from Central Generating Stations. As against the allocated share of 1700 MW daily, on an average only about 1522 MW is being received resulting in a shortage of about 178 MW per day. This has further disrupted power availability to the State.

e. Recurring problems in coal supply to RTPS units. Therefore generation from all the Units of RTPS is affected.

f. The second unit of 500 MW capacity of Bellary is expected to be commissioned by the forest week of March 2012. But, during the initial period of stabilization full power may not get generated daily.

5. The gap between the present and previous year's consumption is likely to widen in the ensuing summer months upto May 2012.

6. The State Government has been reviewing the power situation on a regular basis. It has implemented a series of measures to ensure effective load management and minimum disruption of power in the State. Presently, the Distribution Companies in the State are supplying 6 hours of 3 phase power supply and 10-11 hours single phase power supply in the rural areas. The availability of power in the designated areas is being closely monitored on feeder basis at the State level.

7. The Government is conscious of the fact that it is necessary to make power available to the consumers in the coming months especially having regard to the fact that there are examinations scheduled as well as the agriculture season till the month of April 2012.

8. The average State consumption in 2012 has increased by 10% as compared to consumption in 2011. The consumption may go upto 200 MU during peak summer months i.e. February 2012 to May 2012.

9. To augment power supply, the State has initiated measures for procuring power on competitive basis in the short term and medium term to meet the load of the summer months. As a result, advance action was initiated for procurement of power thorough competitive bidding process from September 2011 to June 2013 by Power Company of Karnataka Limited on behalf of Distribution companies of Karnataka.

10. As against the LOIs placed for procurement for 780 MW RTC firm power, only 530 MW is available from Karnataka generators. Out of 250 MW from outside sources, only small quantum was made available by SRLDC due to corridor congestion (November 2011-Nil, December 2011-72 MW, January 2012-60 MW, February 2012-Nil and March 2012-105 MW).

11. Even for procurement of peak power, as against LOIs issued for an average of about 438 MW, the quantum being received/cleared due to corridor congestion is also very small (February 2012-49 MW & March 2012-195 MW).

12. In view of non availability of corridor from ER/WR to SR, power flow to Karnataka from outside sources up to end May 2012 is meager.

13. The availability of power through Energy Exchanges is also constrained by corridor congestion. Rates are fluctuating and there is no guarantee that the required power can be obtained through energy exchange. Hence, the State cannot depend on any additional quantum of power from outside sources for the period between February 2012 to May 2012.

14. There is remote possibility of getting any additional quantum of power from outside generators either through bidding process or bilateral transactions due to corridor congestion.

15. In the circumstances, the endeavour of the State is that every possible source of power should be tapped in the coming months. To mitigate the likely power shortages and to maintain regularity and minimize inconvenience to the public is a matter of paramount concern in the coming months.

16. The State Government is of the considered opinion that the prevailing power situation in the State warrants measures to protect the public interest. The State is also aware that the genuine economic interests of the generators are to be borne in mind in view of costs of inputs for power generation.

17. In view of non-availability of corridor for inter-state transmission of power, the only option left is to tap power from Intra-State Generators of around 660 MW.

18. Following are the details of available generation capacity of Private Entrepreneurs in the State of Karnataka.

Generation Source	Net Capacity in MW
Cogeneration without PPA	419
JSWEL Torangallu	Available for export : 250 MW out of 1160 MW a. 650 MW is being scheduled against LoI to BESCOM. b. 260 MW of Captive consumption.

19. At meeting chaired by th Hon'ble Chief Minister, Govt. of Karnataka on 31-12-2011, it was decided to procure the power from the Generators within the State and fix the tentative tariff of Rs. 5.30 per unit obtained against previous tender notification dated 29-10-2011 subject to determination of final tariff by Hon'ble KERC for Generators pumping energy against order issued under Section 11.
20. Section 11 of EA 2003 provides that :
    1. "The Appropriate Government may specify that a generating company shall, in extraordinary circumstances operate and maintain any generating station in accordance with the directions of that Government in the public interest.
    2. The Appropriate Commission may offset the adverse financial impact of the directions referred to in sub-section (1) on any generating company in such manner as it considers appropriate".
21. As a matter of policy, it is in the public interest and the duty of the State to mitigate the acute power crisis in the State. Accordingly, all generators in the State are to run their plants to full exportable capacity and supply all the electricity thus generated to the State Grid, to bridge the demand supply gap. Hence, this order :

Government Order No. EN 2 PPC 2012, Bangalore, Dated: 27th January 2012

In the circumstances explained in the Preamble, and in exercise of the powers conferred under section-II of Electricity Act 2003, the State Government hereby issues the following directions in the public interest with effect from 1st February 2012 and will be in force till 31st May 2012 or until further orders whichever is earlier :-

a. All the Generators in the State of Karnataka shall operate and maintain their generating stations to maximum exportable capacity and shall supply all exportable electricity generated to the State Grid for utilization within the State subject to following conditions :
    i) The tentative tariff for supply of energy by the Generators under section 11 and who do not have Power Purchase Agreement with Electricity Supply Companies shall be Rs. 5.30/unit subject to determination of final tariff by Hon'ble KERC.
    ii) Joint meter readings taken by ESCOMs on 31-01-2012 midnight shall be basis for raising the monthly bills.
    iii) LC will be provided by the ESCOMs to the extent of cost of power allocated.
    iv) Rebate of 2% shall be allowed on the bill amount if payment is made within 5 days from the date of presentation of bill or otherwise 1% shall be allowed if the payments are made within 30 days.
    v) Due date for making payment shall be 30 days from the date of presentation of the bill.
    vi) Surcharge at 1.25% per month shall be payable if the payments are made beyond due date.
    vii) The Jurisdictional Distribution Licensee shall raise the bill for the energy imported by the Generators under section 11.
    viii) Energy pumped by Generators under section 11 shall be allocated amongst ESCOMs as per Govt. Order dated 12-10-2011 in line with CGS allocation and is as follows :

BESCOm	:	49.62%
MESCOM	:	08.33%
CESC	:	10.61%
HESCOM	:	18.18%
GESCOM	:	13.26%

    ix) The Generators shall raise the bills in the above proportion to respective ESCOMs.
b. The above tariff is provisional and is subject to approval of Karnataka Electricity Regulatory Commission (KERC).
c. The above proposal shall not be applicable for the Intra-State Generators who are having valid PPA's with the Distribution Licencees in the State of Karnataka.
d. All State Electricity Supply Companies (ESCOMs) shall submit a Memorandum on the power situation within 15 days from date of this order before the Karnataka Electricity Regulatory Commission (KERC) and request to fix the tariff for supply of energy by the Generators source-wise (i.e. Cogeneration, Biomass, Captive, IPP, etc) under section 11 of Electricity Act 2003.

By Order and in the Name of the Governor of Karnataka

Suresh B. Krishnappanavar

Under Secretary to Government

Energy Department

PR. NO. 457

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ಆಂಜನೇಯ ಪವರ್-ಟೆಕ್ ಪ್ರೈವೇಟ್ ಲಿಮಿಟೆಡ್ ಇವರ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಗೆ ಕಾಲಾವಕಾಶ ವಿಸ್ತರಣೆ ಮಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಡಿಇ 89 ಎನ್‌ಸಿಇ 2002, ದಿನಾಂಕ : 08-05-2002.
2. ಸರ್ಕಾರಿ ಆದೇಶ ಸಂಖ್ಯೆ : ಇಎನ್ 172 ಎನ್‌ಸಿಇ 2010, ದಿನಾಂಕ : 02-07-2010.
3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/SH-83/2011/22, ದಿನಾಂಕ : 05/06-01-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಶ್ರೀ ಆಂಜನೇಯ ಪವರ್-ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಲಿ ಡಿ-54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲ್ಕಂಡ 800 ಕಿಲೋ ವ್ಯಾಟ್ ಸಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ದಿನಾಂಕ : 30-09-2010 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಆಂಜನೇಯ ಪವರ್-ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ಡಿ-54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ ಹಂಚಿಕೆಯಾಗಿರುವ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಕೆಲಸ ಕಾರ್ಯಗಳು ಶೇಕಡ 100 ರಷ್ಟು ಪೂರ್ಣಗೊಂಡಿರುವುದರಿಂದ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ : 31-01-2012 ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 26 ಎನ್‌ಸಿಇ 2012, ಬೆಂಗಳೂರು, ದಿನಾಂಕ : 24-01-2012

ಶ್ರೀ ಆಂಜನೇಯ ಪವರ್-ಟೆಕ್ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಯಚೂರು ಜಿಲ್ಲೆಯ ಸಿಂಧನೂರು ಬಳಿ ಡಿ-54 ಟಿ.ಎಲ್.ಬಿ.ಸಿ. ಕೆನಾಲ್‌ನ 628ನೇ ಚೈನೇಜ್‌ನಲ್ಲಿ ಹಂಚಿಕೆಯಾಗಿರುವ 800 ಕಿಲೋ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಅಂತಿಮವಾಗಿ ಕಾಲಾವಕಾಶವನ್ನು ದಿನಾಂಕ : 31-03-2012 ರವರೆಗೆ ವಿಸ್ತರಿಸಲಾಗಿದೆ.

ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 458

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸಚಿವರ ಸ್ಥಾನಮಾನವನ್ನು ಹೊಂದಿರುವ ಕಾರ್ಯನಿರ್ವಾಹಕ/ಪ್ರಾಧಿಕಾರಗಳಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 41 ಶಿಸನೇ 2002, ದಿನಾಂಕ : 17-06-2002.
2. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 6 ಶಿಸನೇ 2009, ದಿನಾಂಕ : 28-04-2009.
3. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಶಿವಾನೀ 2008, ದಿನಾಂಕ : 22-08-2008.
4. ಸುತ್ತೋಲೆ ಸಂಖ್ಯೆ : ಸಿಆಸುಇ 148 ಶಿಸನೇ 2010, ದಿನಾಂಕ : 26-02-2011.
5. ತಿದ್ದೋಲೆ ಸಂಖ್ಯೆ : ಸಿಆಸುಇ 148 ಶಿಸನೇ 2010, ದಿನಾಂಕ : 26-02-2011.
6. ತಿದ್ದುಪಡಿ ಸಂಖ್ಯೆ : ಸಿಆಸುಇ 148 ಶಿಸನೇ 2010, ದಿನಾಂಕ : 26-04-2011.
7. ತಿದ್ದುಪಡಿ ಸಂಖ್ಯೆ : ಸಿಆಸುಇ 7 ಶಿಸನೇ 2011 ದಿನಾಂಕ :
8. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 41 ಶಾಸನ 2006, ದಿನಾಂಕ : 04-07-2011.

ಪ್ರಸ್ತಾವನೆ :

ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯದ ಸಂಪೂರ್ಣ ಸಾಮರ್ಥ್ಯವನ್ನು ಸಂಪೂರ್ಣ ಸದ್ಬಳಕೆ ಮಾಡುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ವಿವಿಧ ಆಯೋಗ/ಸಮಿತಿ/ಪ್ರಾಧಿಕಾರ/ಮಿಷನ್/ಕಾರ್ಯಪಡೆಗಳನ್ನು ಹೊಸದಾಗಿ ರಚಿಸಿದ್ದು, ಅಧ್ಯಕ್ಷರುಗಳನ್ನು ನೇಮಿಸಿ ಅವರುಗಳಿಗೆ ಸೂಕ್ತ ಸ್ಥಾನಮಾನವನ್ನು ಸಹ ನೀಡಲಾಗಿದೆ. ಈ ಕಾರ್ಯನಿರ್ವಾಹಕರು/ಪ್ರಾಧಿಕಾರಗಳ ವೆಚ್ಚಗಳನ್ನು ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಗಳು ಭರಿಸುತ್ತಿರುವುದರಿಂದ ಈ ಕಾರ್ಯನಿರ್ವಾಹಕರು/ಪ್ರಾಧಿಕಾರಗಳಿಗೆ ನೀಡಬೇಕಾದ ಸೌಲಭ್ಯಗಳ ಬಗ್ಗೆ ಇಲಾಖೆಗಳು ಸ್ಪಷ್ಟೀಕರಣಗಳನ್ನು ಕೋರಿರುವುದರ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕರು/ಪ್ರಾಧಿಕಾರಗಳಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸುವುದು ಅಗತ್ಯವೆಂದು ಮನಗಂಡು ಸಂಬಂಧಪಟ್ಟಂತೆ ಈ ಹಿಂದೆ ಹೊರಡಿಸಲಾಗಿರುವ ಎಲ್ಲಾ ಆದೇಶಗಳನ್ನು ಹಾಗೂ ಸುತ್ತೋಲೆಗಳನ್ನು ಕ್ರೋಢೀಕರಿಸಿ ಒಂದೇ ಆದೇಶವನ್ನು ಈ ಕೆಳಕಂಡಂತೆ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 102 ಶಿಸನೇ 2011, ಬೆಂಗಳೂರು, ದಿನಾಂಕ : 23-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಸಚಿವರ ಸ್ಥಾನಮಾನವನ್ನು ಹೊಂದಿರುವ ಕಾರ್ಯನಿರ್ವಾಹಕ ಅಥವಾ ಪ್ರಾಧಿಕಾರಗಳು/ಆಯೋಗ/ಸಮಿತಿ/ಮಿಷನ್/ಕಾರ್ಯಪಡೆಗಳು ಈ ಕೆಳಕಂಡಂತೆ ಸೌಲಭ್ಯಗಳನ್ನು ಹೊಂದತಕ್ಕದೆಂದು ಆದೇಶಿಸಿದೆ.

1. ವೇತನ ಮತ್ತು ಭತ್ಯೆಗಳು : ಕಾರ್ಯಕಾರಿ ಆದೇಶದ ಮೇರೆಗೆ ಸಚಿವರ : ರಾಜ್ಯ ಸಚಿವರ, ಉಪ ಸಚಿವರ ಸ್ಥಾನಮಾನ ನೀಡಿರುವ ಯಾವುದೇ ಕಾರ್ಯನಿರ್ವಾಹಕ : ಪ್ರಾಧಿಕಾರವು 1956ರ ಕರ್ನಾಟಕ ಸಚಿವರುಗಳ ವೇತನ ಮತ್ತು ಭತ್ಯೆಗಳ ಅಧಿನಿಯಮ ಹಾಗೂ ಸಂಬಂಧಪಟ್ಟ ನಿಯಮಾವಳಿಯನ್ವಯ ವೇತನ, ಭತ್ಯೆ ಇತ್ಯಾದಿಗಳನ್ನು ಪಡೆಯಲು ಅರ್ಹರಿರುತ್ತಾರೆ.
2. ಮನೆ ಬಾಡಿಗೆ : ಅಂತಹ ಕಾರ್ಯನಿರ್ವಾಹಕ : ಪ್ರಾಧಿಕಾರವು ತಮ್ಮ ಅಧಿಕಾರಾವಧಿಯಲ್ಲಿ ಬೆಂಗಳೂರು ನಗರದಲ್ಲಿ ಒಂದು ಸುಸಜ್ಜಿತ ನಿವಾಸವನ್ನು ಹೊಂದಲು ಅಥವಾ ಸುಸಜ್ಜಿತ ನಿವಾಸದ ಬದಲಿಗೆ ಬೆಂಗಳೂರು ನಗರದಲ್ಲಿ ಮಾಸಿಕ ರೂ. 20,000 ಅಥವಾ ಇತರ ನಗರಗಳಲ್ಲಿ ಮಾಸಿಕ ರೂ. 15,000 ಮನೆ ಬಾಡಿಗೆ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಲೋಕೋಪಯೋಗಿ ಇಲಾಖೆಯ ಮೌಲ್ಯಮಾಪನಕ್ಕೆ ಒಳಪಟ್ಟು ಬೆಂಗಳೂರು ನಗರದಲ್ಲಿ ಮಾಸಿಕ ರೂ. 40,000 ಹಾಗೂ ಇತರೆ ನಗರಗಳಲ್ಲಿ ಮಾಸಿಕ ರೂ. 20,000 ಗರಿಷ್ಠ ಬಾಡಿಗೆ ಮನೆಯನ್ನು ಪಡೆಯಬಹುದಾಗಿದೆ.
3. ವಾಹನ ಸೌಕರ್ಯ & ಇಂಧನ ಭತ್ಯೆ : ಕಾರ್ಯನಿರ್ವಾಹಕ : ಪ್ರಾಧಿಕಾರವು ತಮ್ಮ ಅಧಿಕಾರಾವಧಿಯಲ್ಲಿ ಚಾಲಕರ ಸಮೇತ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 68 ಶಿವಾನೀ 2008, ದಿನಾಂಕ : 22-08-2008 ರಲ್ಲಿ ನಿಗದಿಪಡಿಸಿರುವ ರೂ. 11.00 ಲಕ್ಷ ಆರ್ಥಿಕ ಮಿತಿಯೊಳಗೆ ವಾಹನವನ್ನು ಸಂಬಂಧಪಟ್ಟ ಆಡಳಿತ ಇಲಾಖೆಯಿಂದ ಆರ್ಥಿಕ ಇಲಾಖೆಯ ಅನುಮತಿಗೆ/ಸಹಮತಿಗೆ ಒಳಪಟ್ಟು ಖರೀದಿಸಬಹುದು ಹಾಗೂ ಸಿಆಸುಇಲಾಖೆಯಿಂದ ಅಧ್ಯಕ್ಷರುಗಳ ಉಪಯೋಗಕ್ಕಾಗಿ ತಾತ್ಕಾಲಿಕವಾಗಿ ನೀಡಿರುವ ವಾಹನಗಳನ್ನು ಆಡಳಿತ ಇಲಾಖೆಯಿಂದ ಹೊಸ ವಾಹನಗಳನ್ನು ಖರೀದಿಸಿದ ನಂತರ ಅತಿಥಿಗೃಹಕ್ಕೆ ಹಿಂದಿರುಗಿಸತಕ್ಕದ್ದು. ಸದರಿ ಅಧ್ಯಕ್ಷರುಗಳು ಮಾಸಿಕ 550 ಲೀಟರ್‌ಗೆ ಸಮಾನವಾದ ಇಂಧನ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ **ಅಧ್ಯಕ್ಷರುಗಳು ತಮ್ಮ ವಾಹನಗಳಿಗೆ ಕೆಂಪು ದೀಪವನ್ನು ಅಳವಡಿಸುವಂತಿಲ್ಲ.**
4. ಆಪ್ತ ಸಿಬ್ಬಂದಿ : ಈ ಕಾರ್ಯನಿರ್ವಾಹಕ : ಪ್ರಾಧಿಕಾರಗಳು ಈ ಕೆಳಕಂಡಂತೆ ಆಪ್ತ ಸಿಬ್ಬಂದಿಯನ್ನು ಹೊಂದಬಹುದು.

ಅ) ಆಪ್ತ ಕಾರ್ಯದರ್ಶಿ	–	1 ಹುದ್ದೆ
ಆ) 'ಸಿ' ವೃಂದ	–	2 ಹುದ್ದೆಗಳು
ಇ) 'ಡಿ' ವೃಂದ	–	2 ಹುದ್ದೆಗಳು
ಈ) ವಾಹನಚಾಲಕರು	–	1 ಹುದ್ದೆ

ಈ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬತಕ್ಕದ್ದು. ಅಧ್ಯಕ್ಷರುಗಳು ಇಚ್ಛಿಸುವ ವ್ಯಕ್ತಿಗಳನ್ನು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಉದ್ದಿಮೆಗಳು ಅಥವಾ ಕೇಂದ್ರ ಸರ್ಕಾರ ಉದ್ದಿಮೆಗಳು ಅಥವಾ ಸ್ವಾಯತ್ತ ಸಂಸ್ಥೆಗಳು, ನಿಗಮ ಅಥವಾ ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳಿಂದ ನಿಯೋಜನೆ ಮೂಲಕ ಪಡೆಯಬಹುದು. **ಈ ನೇಮಕಾತಿಯು ಅಧ್ಯಕ್ಷರ ಅವಧಿಯೊಂದಿಗೆ ಮುಕ್ತಾಯಗೊಳ್ಳುವುದು.**

ಮೇಲೆ ತಿಳಿಸಿರುವಂತೆ ಆಪ್ತ ಕಾರ್ಯದರ್ಶಿ ಹುದ್ದೆಯನ್ನು ಗ್ರೂಪ್-ಎ ಅಥವಾ ಗ್ರೂಪ್-ಬಿ ಶ್ರೇಣಿಯ ಅಧಿಕಾರಿಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಿಕೊಳ್ಳತಕ್ಕದ್ದು. ಉಳಿದ ಸಿಬ್ಬಂದಿ ಅಂದರೆ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವರ್ಗದ ನೌಕರರನ್ನು ಆಡಳಿತ ಹಾಗೂ ಇನ್ನಿತರ ಇಲಾಖೆಗಳಲ್ಲಿ ಸೂಕ್ತ ಸಿಬ್ಬಂದಿ **ಇಲ್ಲದಿದ್ದ ಪಕ್ಷದಲ್ಲಿ ಗುತ್ತಿಗೆ ಆಧಾರದ ಮೇಲೆ ಅಧ್ಯಕ್ಷರ ಕಾರ್ಯಾವಧಿವರೆಗೆ ಮಾತ್ರ ನೇಮಿಸಿಕೊಳ್ಳತಕ್ಕದ್ದು.**

ಕರ್ನಾಟಕ ರಾಜ್ಯ ಉದ್ದಿಮೆಗಳ ಮಹೋದ್ಯಮದ ಮಾರ್ಗಸೂಚಿಗಳು (ಅಧ್ಯಕ್ಷರಿಗೆ ಆಪ್ತ ಸಿಬ್ಬಂದಿಗಳನ್ನು ನೀಡುವ ಬಗ್ಗೆ) ಅನ್ವಯಿಸುವುದಿಲ್ಲ ಹಾಗೂ ಮೇಲೆ ನಿಗದಿಪಡಿಸುವ ಸಿಬ್ಬಂದಿ ಮಾದರಿಯು ಅನ್ವಯಿಸುತ್ತದೆ.

5. ದೂರವಾಣಿ : ಕಾರ್ಯನಿರ್ವಾಹಕ : ಪ್ರಾಧಿಕಾರದ ಅಧಿಕೃತ ಉಪಯೋಗಕ್ಕಾಗಿ ಒಂದು ನಿವಾಸ ದೂರವಾಣಿಯನ್ನು ಅವರ ಸ್ವಂತ ಗೃಹದಲ್ಲಿ ಅಥವಾ ಬಾಡಿಗೆ ಮೇಲೆ ಪಡೆದ ನಿವಾಸದಲ್ಲಿ ಒದಗಿಸತಕ್ಕದ್ದು.
6. ಪ್ರವಾಸಭತ್ಯೆ ಮತ್ತು ದಿನಭತ್ಯೆ : ಸಚಿವರುಗಳಿಗೆ ಅನ್ವಯಿಸುವ ಪ್ರವಾಸಭತ್ಯೆ ನಿಯಮಾವಳಿಯನ್ನು ಈ ಕಾರ್ಯನಿರ್ವಾಹಕ : ಪ್ರಾಧಿಕಾರಿಗಳಿಗೆ ವಿಸ್ತರಿಸಬಹುದಾಗಿದೆ. ರಾಜ್ಯದ ಹೊರಗಡೆ ಪ್ರವಾಸವು ಸೇರಿದಂತೆ ಮಾಸಿಕ ಪ್ರವಾಸದ ಅವಧಿಯ 15 ದಿನಗಳಿಗೆ ಮೀರತಕ್ಕದ್ದಲ್ಲ. ರಾಜ್ಯದ ಹೊರಗಡೆ ಪ್ರವಾಸವನ್ನು ಅವಶ್ಯವಿದ್ದಲ್ಲಿ ಮಾತ್ರ ಕೈಗೊಳ್ಳತಕ್ಕದ್ದು ಹಾಗೂ ತಿಂಗಳಲ್ಲಿ ಒಂದು ಬಾರಿಗಿಂತ ಹೆಚ್ಚಾಗಿ ಕೈಗೊಳ್ಳತಕ್ಕದ್ದಲ್ಲ.
7. ವೈದ್ಯಕೀಯ ವೆಚ್ಚ : ಕಾರ್ಯನಿರ್ವಾಹಕ : ಪ್ರಾಧಿಕಾರಗಳ ಅಧ್ಯಕ್ಷರುಗಳು ವೈದ್ಯಕೀಯ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.
8. ಇತರೆ : ಈ ಕಾರ್ಯನಿರ್ವಾಹಕ : ಪ್ರಾಧಿಕಾರಗಳು ರಾಜ್ಯದ ಹೊರಗಡೆ ರಾಜ್ಯ ಅತಿಥಿ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ. ಮುಂದುವರೆದು, ಆದ್ಯತಾಪಟ್ಟಿಯಲ್ಲಿ ಈ ಕಾರ್ಯನಿರ್ವಾಹಕ : ಪ್ರಾಧಿಕಾರಗಳ ದರ್ಜೆಯು, ಇವರುಗಳು ಶಾಸಕರಾಗಿದ್ದಲ್ಲಿ "ವಿಧಾನಸಭಾ ಸದಸ್ಯರು" : ವಿಧಾನ ಪರಿಷತ್ತಿನ ಸದಸ್ಯರು" ಅಡಿಯಲ್ಲಿ ಇರತಕ್ಕದ್ದು.
9. ಕಛೇರಿ ಸ್ಥಳಾವಕಾಶ : ವಿಧಾನಸೌಧ, ವಿಕಾಸ ಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಸ್ಥಳಾವಕಾಶ ಲಭ್ಯವಿಲ್ಲದಿದ್ದಲ್ಲಿ ಈ ಕಾರ್ಯನಿರ್ವಾಹಕ : ಪ್ರಾಧಿಕಾರಗಳಿಗೆ ಅಗತ್ಯವಾದ ಕಛೇರಿ ಸ್ಥಳಾವಕಾಶವನ್ನು ಸಂಬಂಧಪಟ್ಟ ಆಡಳಿತ ಇಲಾಖೆಗಳ ವ್ಯಾಪ್ತಿಗೊಳಪಡುವ ಕಛೇರಿ ಕಟ್ಟಡಗಳಲ್ಲಿ ಒದಗಿಸತಕ್ಕದ್ದು, ಹಾಗು ಪೀಠೋಪಕರಣ ಲೇಖನ ಸಾಮಗ್ರಿ ಇನ್ನಿತರ ಯಂತ್ರೋಪಕರಣಗಳನ್ನು ಮತ್ತು ಇತ್ಯಾದಿ ಸೌಲಭ್ಯಗಳನ್ನು ಆಡಳಿತ ಇಲಾಖೆಗಳೇ ಒದಗಿಸತಕ್ಕದ್ದು.

ಈ ಬಗ್ಗೆ ಸಂಪೂರ್ಣ ವೆಚ್ಚವನ್ನು ಸಂಬಂಧಪಟ್ಟ ಮಂಡಳಿ : ನಿಗಮ ಇತ್ಯಾದಿಗಳು ಭರಿಸತಕ್ಕದ್ದು, ಹಾಗೂ ನಷ್ಟದಲ್ಲಿರುವ ಮಂಡಳಿ : ನಿಗಮಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳು ಲಭ್ಯವಿರುವ ವಾರ್ಷಿಕ ಆಯವ್ಯಯದ ಅನುದಾನದಿಂದ ಆರ್ಥಿಕ ಸಹಾಯವನ್ನು ಒದಗಿಸುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕದ್ದು. ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಹೆಚ್ಚುವರಿ ಆಯವ್ಯಯ ಅನುದಾನವನ್ನು ಮಂಜೂರು ಮಾಡಲಾಗುವುದಿಲ್ಲ. ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸಿರುವ ಮಿತವ್ಯಯ ಆದೇಶವನ್ನು ಪಾಲಿಸಲು ಕ್ರಮ ಕೈಗೊಳ್ಳುವುದು. ಹಾಗೂ ಯಾವ ಉದ್ದೇಶಗಳಿಗೆ ಕಾರ್ಯಪಡೆ ರಚನೆಯಾಗಿದೆಯೋ ಆ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ನಿಗದಿಪಡಿಸಿದ ಅವಧಿಯೊಳಗೆ ಗುರಿ ಸಾಧಿಸಲು ಸಂಬಂಧಪಟ್ಟ ಆಡಳಿತ ಇಲಾಖೆಗಳು ಎಲ್ಲಾ ರೀತಿಯ ಸಹಕಾರ ಮಾಹಿತಿ ಹಾಗೂ ಸೌಲಭ್ಯಗಳನ್ನು ಇವುಗಳಿಗೆ ಒದಗಿಸತಕ್ಕದ್ದು.

ಸರ್ಕಾರವು ಈಗಾಗಲೇ ರಚಿಸಲಾಗಿರುವ ಹಾಗೂ ಮುಂದೆ ರಚಿಸಲಿರುವ ಇಂತಹ ಎಲ್ಲಾ ಕಾರ್ಯನಿರ್ವಾಹಕ : ಪ್ರಾಧಿಕಾರಗಳಿಗೆ ಸಚಿವರ ಸ್ಥಾನಮಾನ ನೀಡಿದ ನಂತರ ಮೇಲ್ಕಂಡ ಸೌಲಭ್ಯಗಳು, ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ : ಆಇ 820 ವೆಚ್ಚ-12/2011 ದಿನಾಂಕ : 01-12-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಎಚ್. ಚಂದ್ರಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ (ರಾಜ್ಯ ಶಿಷ್ಟಾಚಾರ)

ಪಿ.ಆರ್. 459

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಸ್.ಎನ್. ಜಯರಾಮ್, ಐ.ಎ.ಎಸ್., ಇವರ ಕಡ್ಡಾಯ ನಿರೀಕ್ಷಣಾ ಅವಧಿಯನ್ನು ಸಕ್ರಮಗೊಳಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 571 ಎಸ್ಎಎಸ್ 2011, ದಿನಾಂಕ : 09-11-2011.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 660 ಎಸ್ಎಎಸ್ 2011, ದಿನಾಂಕ : 31-12-2011.
3. ಶ್ರೀ ಎಸ್.ಎನ್.ಜಯರಾಮ್, ಐ.ಎ.ಎಸ್., ಇವರ ಪತ್ರ ಸಂಖ್ಯೆ : ಕೆಹೆಚ್‌ಬಿ/ಹೆಚ್‌ಸಿ/ಪಿಎಸ್/2011-12, ದಿನಾಂಕ : 04-01-2012.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 09-11-2011ರ ಅಧಿಸೂಚನೆಯಲ್ಲಿ ಶ್ರೀ ಎಸ್.ಎನ್. ಜಯರಾಮ್, ಐ.ಎ.ಎಸ್., ಇವರನ್ನು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಹುದ್ದೆಯಿಂದ ವರ್ಗಾಯಿಸಿ ಆದೇಶಿಸಿದ್ದರ ಮೇರೆಗೆ ಸದರಿಯವರು ದಿನಾಂಕ : 15-11-2011ರ ಅಪರಾಹ್ನ ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಟ್ಟು, ದಿನಾಂಕ : 16-11-2011ರ ಪೂರ್ವಾಹ್ನ ಸಿಆಸು ಇಲಾಖೆಯಲ್ಲಿ ವರದಿ ಮಾಡಿಕೊಂಡು ನೇಮಕಾತಿ ನಿರೀಕ್ಷಣೆಯಲ್ಲಿದ್ದರು. ತದನಂತರ ಮೇಲೆ ಕ್ರಸಂ. (2)ರಲ್ಲಿ ಓದಲಾದ ದಿನಾಂಕ : 31-12-2011ರ ಅಧಿಸೂಚನೆಯಲ್ಲಿ ಶ್ರೀಯುತರನ್ನು ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಹುದ್ದೆಗೆ ನೇಮಿಸಿದ್ದು, ಈ ಆದೇಶದ ಮೇರೆಗೆ ದಿನಾಂಕ : 03-01-2012ರಂದು ವಸತಿ ಇಲಾಖೆಯು ಹೊರಡಿಸಿದ ಮರುನೇಮಕಾತಿ ಆದೇಶದನ್ವಯ ಶ್ರೀ ಎಸ್.ಎನ್.ಜಯರಾಮ್, ಐ.ಎ.ಎಸ್., ಇವರು ದಿನಾಂಕ : 04-01-2012ರ ಪೂರ್ವಾಹ್ನ ಆಯುಕ್ತರು, ಕರ್ನಾಟಕ ಗೃಹ ಮಂಡಳಿ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಎಸ್.ಎನ್. ಜಯರಾಮ್, ಐ.ಎ.ಎಸ್., ಇವರು ದಿನಾಂಕ : 16-11-2011 ರಿಂದ 03-01-2012 ರವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲು ಕೋರಿದ್ದಾರೆ. ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದೆ. ಆದುದರಿಂದ ಈ ಕೆಳಕಂಡ ಆದೇಶ :

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 11 ಎಸ್ಐಎಸ್ 2012, ಬೆಂಗಳೂರು, ದಿನಾಂಕ : 25-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಸ್.ಎನ್. ಜಯರಾಮ್, ಐ.ಎ.ಎಸ್., ಇವರು ದಿನಾಂಕ : 16-11-2011 ರಿಂದ 03-01-2012ರವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸರ್ಕಾರವು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ 8(15)(ಎಫ್)ರ ಮೇರೆಗೆ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ ಸಕ್ರಮಗೊಳಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ/1/ಟಿಎಫ್‌ಪಿ/96, ದಿನಾಂಕ : 10-07-1996ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾದ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಹೆಚ್.ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು-1)

ಪಿ.ಆರ್. 460

ಶಿಕ್ಷಣ ಸಚಿವಾಲಯ

ವಿಷಯ : ಶಿವಮೊಗ್ಗ ನಗರದ ಮೌಲ್ಯಮಾಪನ ಕೇಂದ್ರದ ಎಸ್.ಎಸ್.ಎಲ್.ಸಿ. ಪರೀಕ್ಷಾ ಉತ್ತರ ಪತ್ರಿಕೆಗಳು ಬೆಂಕಿಗೆ ಆಹುತಿಯಾದ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷ್ಯತೆ ತೋರಿದ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ (ಸಿಸಿಎ) ಸೇವಾ ನಿಯಮಾವಳಿಗಳ ನಿಯಮ-13 ರಡಿಯಲ್ಲಿ ಜಂಟಿ ಶಿಸ್ತು ಕ್ರಮ - ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಪತ್ರ ಸಂಖ್ಯೆ: ದಿನಾಂಕ: 16-04-2011.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 28 ಡಿಜಿಪಿ 2011, ದಿನಾಂಕ: 19-04-2011.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 28 ಡಿಜಿಪಿ 2011 ದಿನಾಂಕ: 19-04-2011.
4. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಪತ್ರ ಸಂಖ್ಯೆ: ದಿನಾಂಕ: 16-06-2011.
5. ಕಾರಣ ಕೇಳುವ ನೋಟೀಸು ಸಂಖ್ಯೆ: ಇಡಿ 28 ಡಿಜಿಪಿ 2011, ದಿನಾಂಕ: 12-08-2011.
6. ಶ್ರೀ ಜಿ.ಎಸ್. ಪರಮಶಿವಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ: 02-09-2011.
7. ಶ್ರೀ ಟಿ.ಎನ್. ಕಮಲಾಕರ, ಕ್ಷೇತ್ರ ಶಿಕ್ಷಣಾಧಿಕಾರಿ, ಶಿವಮೊಗ್ಗ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ: 02-09-2011.
8. ಶ್ರೀಮತಿ ಆರ್. ಗೀತಾ, ವಿಷಯ ಪರಿವೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ: 06-09-2011.

9. ಶ್ರೀಮತಿ ಸುಮಂಗಳಾ ಪಿ. ಕುಚಿನಾಡ, ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಇಲಾಖೆ, ಶಿವಮೊಗ್ಗ, ಇವರ ಪ್ರತಿರಕ್ಷಣಾ ಹೇಳಿಕೆ ದಿನಾಂಕ: 21-09-2011.

10. ಸರ್ಕಾರದ ಆದೇಶ ಸಂಖ್ಯೆ:: ಇಡಿ 28 ಡಿಜಿಪಿ 2011 ದಿನಾಂಕ: 31-12-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಶಿವಮೊಗ್ಗ ನಗರದ ಶ್ರೀ ಬಸವೇಶ್ವರ ಸಂಯುಕ್ತ ಪದಪಿ ಪೂರ್ವ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರವಲ್ಲಿ ಪರೀಕ್ಷಾ ಉತ್ತರ ಪತ್ರಿಕೆಗಳು ಬೆಂಕಿಗೆ ಆಹುತಿಯಾದ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷ್ಯತೆ ತೋರಿದ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತಂತೆ ವರದಿಯೊಂದಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

1. ಶ್ರೀ ಜಿ.ಎಸ್. ಪರಮಶಿವಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
2. ಶ್ರೀಮತಿ ಸುಮಂಗಳಾ ಪಿ. ಕುಚಿನಾಡ, ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
3. ಶ್ರೀಮತಿ ಆರ್. ಗೀತಾ, ವಿಷಯ ಪರಿವೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
4. ಶ್ರೀ ಟಿ.ಎನ್. ಕಮಲಾಕರ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
5. ಶ್ರೀಮತಿ ಶಾಂತಕುಮಾರಿ, ಮುಖ್ಯ ಶಿಕ್ಷಕಿ, ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಶಿವಮೊಗ್ಗ.

ಮೇಲ್ಕಂಡ ಅಧಿಕಾರಿಗಳ ಪೈಕಿ, ಕ್ರಮ ಸಂಖ್ಯೆ: 5 ರಲ್ಲಿರುವ ಶ್ರೀಮತಿ ಶಾಂತಕುಮಾರಿ, ಇವರು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯ ಶಿಕ್ಷಕರಾಗಿದ್ದು, ಸದರಿಯವರು ಮೌಲ್ಯಮಾಪನ ಕೇಂದ್ರದ ಸುರಕ್ಷತೆ ವಿಷಯದಲ್ಲಿ ಕ್ಯಾಂಪ್ ಕಸ್ಟೋಡಿಯನ್ ಅನುಮತಿ ಪಡೆಯದೇ ಇಲಾಖೆಯ ಗಮನಕ್ಕೆ ತಾರದೇ ಸ್ವಯಂ ನಿರ್ಧಾರ ತೆಗೆದುಕೊಂಡು ಬೆಂಕಿ ಅನಾಹುತ ಜರುಗಲು ಕಾರಣವಾಗಿದ್ದು, ಇವರ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಸಂಬಂಧಿಸಿದ ಶಿಕ್ಷಣ ಸಂಸ್ಥೆಗೆ ನಿರ್ದೇಶನ ನೀಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ನಿರ್ದೇಶನ ನೀಡಲಾಗಿದೆ.

ಶಿವಮೊಗ್ಗ ನಗರದ ಶ್ರೀ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ಮೌಲ್ಯ ಮಾಪನ ಕೇಂದ್ರದಲ್ಲಿ 2011ರ ಎಸ್.ಎಸ್.ಎಲ್.ಸಿ. ತೃತೀಯ ಭಾಷೆ ಹಿಂದಿ 61 (ಹೆಚ್) ನ ಮೈಸೂರು ಜಿಲ್ಲೆಯ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಲು ಶೇಖರಿಸಿಡಲು ಈ ಉತ್ತರ ಪತ್ರಿಕೆಗಳನ್ನು ಸಂಬಂಧಪಟ್ಟ ಕ್ಯಾಂಪ್ ಕಸ್ಟೋಡಿಯನ್ ಆದ ಶ್ರೀಮತಿ ಸುಮಂಗಲಾ ಪಿ. ಕುಚಿನಾಡ ಶಿಕ್ಷಣಾಧಿಕಾರಿ. ಉಪ ನಿರ್ದೇಶಕರ ಕಛೇರಿ ಶಿವಮೊಗ್ಗ ಇವರು ದಿನಾಂಕ: 13-04-2011 ರಂದು ರಾತ್ರಿ 8-30ಕ್ಕೆ ಸ್ವೀಕರಿಸಿ ಶೇಖರಣೆ ಮಾಡಿದ್ದು ಈ ಮೌಲ್ಯಮಾಪನ ಕೇಂದ್ರದ ಸುರಕ್ಷತೆ ಜವಾಬ್ದಾರಿಯನ್ನು ಸದರಿಯವರಿಗೆ ವಹಿಸಲಾಗಿದ್ದರೂ ಸಹ ಶ್ರೀಮತಿ ಸುಮಂಗಲಾ ಪಿ. ಕುಚಿನಾಡ ಇವರು ಗೌಪ್ಯ ಸಾಮಾಗ್ರಿಗಳನ್ನು ಸಂಗ್ರಹಿಸುವ ಮುನ್ನ ಯೋಗ್ಯ ಕೊಠಡಿಯನ್ನು ಆಯ್ಕೆ ಮಾಡದೇ ಮೈಸೂರು ಜಿಲ್ಲೆಯಿಂದ ಗೌಪ್ಯ ವಸ್ತುಗಳು ಶಿವಮೊಗ್ಗಕ್ಕೆ ಬರುವ ತನಕ ಕೊಠಡಿ ಪರಿಶೀಲನೆ ಮಾಡದೇ ಕರ್ತವ್ಯ ಲೋಪವೆಸಗಿರುತ್ತಾರೆಂದು ವರದಿ ಮಾಡಿರುವುದನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತ ದೃಷ್ಟಿಯಿಂದ ಹಾಗೂ ಪರೀಕ್ಷಾ ಕೇಂದ್ರದ ಸುರಕ್ಷತೆಯಲ್ಲಿನ ಲೋಪ ದೋಷಗಳ ಹಿನ್ನೆಲೆಯಲ್ಲಿ ಸಾಕಷ್ಟು ಮುಂಜಾಗ್ರತೆವಹಿಸದೆ ಇರುವ ಅಧಿಕಾರಿ/ನೌಕರರನ್ನು ಶಿಸ್ತು ಕ್ರಮಕ್ಕೆ ಒಳಪಡಿಸಬೇಕಾಗುವುದು ಅತ್ಯವಶ್ಯವೆಂದು ನಿರ್ಧರಿಸಿ, ಈ ಪ್ರಕರಣದಲ್ಲಿ ಶ್ರೀಮತಿ ಸುಮಂಗಲಾ ಪಿ. ಕುಚಿನಾಡ, ಕ್ಯಾಂಪ್ ಕಸ್ಟೋಡಿಯನ್, ಶಿಕ್ಷಣಾಧಿಕಾರಿ ಉಪನಿರ್ದೇಶಕರ ಕಛೇರಿ, ಶಿವಮೊಗ್ಗ, ಇವರ ಕರ್ತವ್ಯ ನಿರ್ಲಕ್ಷ್ಯತನ, ಬೇಜವಾಬ್ದಾರಿತನ, ಕರ್ತವ್ಯ ಲೋಪದಿಂದ ಈ ಘಟನೆ ಜರುಗಿದ್ದು ಈ ಘಟನೆಗೆ ಸದರಿಯವರು ಜವಾಬ್ದಾರರೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಇವರ ಮೇಲೆ ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957 ರ ನಿಯಮ -10(1)ಡಿ ಹಾಗೂ 10(3) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇವರು ಈ ಪ್ರಕರಣವಲ್ಲಿ ಕರ್ತವ್ಯ ನಿರ್ಲಕ್ಷ್ಯತೆ ತೋರಿದ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳ ನಿಯಮ-II ಮತ್ತು 13 ರಡಿಯಲ್ಲಿ ಜಂಟಿ ಶಿಸ್ತುಕ್ರಮ ಕೈಗೊಳ್ಳಲು ಕರಡು ದೋಷಾರೋಪಣಾ ಪಟ್ಟಿಯನ್ನು ಅನುಬಂಧ - I ರಿಂದ 4 ನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

1. ಶ್ರೀ ಜಿ.ಎಸ್. ಪರಮಶಿವಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
2. ಶ್ರೀಮತಿ ಸುಮಂಗಳಾ ಪಿ. ಕುಚಿನಾಡ, ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
3. ಶ್ರೀಮತಿ ಆರ್. ಗೀತಾ, ವಿಷಯ ಪರಿವೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
4. ಶ್ರೀ ಟಿ.ಎನ್. ಕಮಲಾಕರ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇವರ ಪ್ರಸ್ತಾವನೆಯನ್ನು ಆಧರಿಸಿ ಪ್ರಕರಣದ ಗಂಭೀರತೆಯ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಆರೋಪಿತರೆಂದು ಗುರುತಿಸಲಾಗಿರುವ ಒಬ್ಬ ಉಪ ನಿರ್ದೇಶಕರು ಸೇರಿದಂತೆ ಒಟ್ಟು 04 ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ-II ಮತ್ತು 13 ರಡಿ ಜಂಟಿ ಶಿಸ್ತುಕ್ರಮ ಜರುಗಿಸಲು ಕಾರಣ ಕೇಳುವ ನೋಟೀಸುಗಳನ್ನು ಜಾರಿಗೊಳಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (06) ರಿಂದ (09) ರವರೆಗೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದು ತಮ್ಮನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿದ್ದಾರೆ.

ಈ ಮಧ್ಯೆ ಶ್ರೀಮತಿ ಸುಮಂಗಲ ಪಿ. ಕುಚಿನಾಡ, ಹಿಂದಿನ ಶಿಕ್ಷಣಾಧಿಕಾರಿ, ಇವರು ತಮ್ಮ ಅಮಾನತ್ತು ಅವಧಿ ನಾಲ್ಕು ತಿಂಗಳಿಗೂ ಹೆಚ್ಚುಕಾಲ ಮೀರಿರುವುದರಿಂದ ನಿಯಮಾನುಸಾರ ಪ್ರಕರಣವನ್ನು ಪುನರ್ ಪರಿಶೀಲಿಸಿ ತಮ್ಮನ್ನು ಸೇವೆಗೆ ಪುನರ್ ಸ್ಥಾಪಿಸುವಂತೆ ಸರ್ಕಾರದಲ್ಲಿ ಮನವಿ ಸಲ್ಲಿಸಿದ್ದನ್ನು ಪರಿಗಣಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ (10) ರಲ್ಲಿ ಸದರಿಯವರ ವಿರುದ್ಧ ಶಿಸ್ತು ಕ್ರಮವನ್ನು ಕಾಯ್ದಿರಿಸಿ, ಸೇವೆಗೆ ಪುನರ್ ಸ್ಥಾಪಿಸಿ ಅವರನ್ನು ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿಕ್ಕಮಗಳೂರು ಇಲ್ಲಿ ಖಾಲಿ ಇರುವ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿತ್ತು.

ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಗಳು ಸಲ್ಲಿಸಿರುವ ತಮ್ಮ ಪ್ರತಿರಕ್ಷಣಾ ಹೇಳಿಕೆಗಳಲ್ಲಿ ಅವರುಗಳ ಮೇಲಿನ ಆರೋಪಗಳನ್ನು ಅಲ್ಲಗಳೆದಿರುವುದರಿಂದ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ವಿಚಾರಣೆ ಮಾಡುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ

ಸೇವಾ (ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ-II ಹಾಗೂ 13 ರ ಅಡಿಯಲ್ಲಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಕ ಮಾಡಲು ಸೂಕ್ತವೆಂದು ನಿರ್ಧರಿಸಿ ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 28 ಡಿಜಿಪಿ 2011, ಬೆಂಗಳೂರು, ದಿನಾಂಕ: 24-01-2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ, ಶಿವಮೊಗ್ಗ ನಗರದ ಶ್ರೀ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕೇಂದ್ರದಲ್ಲಿ ಪರೀಕ್ಷಾ ಉತ್ತರ ಪತ್ರಿಕೆಗಳು ಬೆಂಕಿಗೆ ಆಹುತಿಯಾದ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷ್ಯತೆ ತೋರಿದ ಈ ಕೆಳಕಂಡ ಅಧಿಕಾರಿಗಳ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ-II ಮತ್ತು 13 ರಡಿ ಇಲಾಖಾ ವಿಚಾರಣೆ ನಡೆಸಲು ನಿಯಮ-II (2) ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಶ್ರೀ ವಸಂತ ಹೆಚ್. ಮುಳಸಾವಳಗಿ, ನಿವೃತ್ತ ಸಿವಿಲ್ ನ್ಯಾಯಾಧೀಶರು, (ಹಿರಿಯ ವಿಭಾಗ) ಜೆ.2-ಜಿ-201, ಎನ್.ಜಿ.ವಿ. ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು, ಇವರನ್ನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯನ್ನಾಗಿಯೂ ಹಾಗೂ ನಿಯಮ-II (5) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ವಿ. ಪದ್ಮನಾಭ, ಉಪ ನಿರ್ದೇಶಕರು (ಕೆ.ಎಸ್.ಕ್ಯೂ.ಎ.ಓ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಿಸಿ ಆದೇಶಿಸಿದೆ.

1. ಶ್ರೀ ಜಿ.ಎಸ್. ಪರಮಶಿವಪ್ಪ, ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
2. ಶ್ರೀಮತಿ ಸುಮಂಗಳಾ ಪಿ. ಕುಚಿನಾಡ, ಶಿಕ್ಷಣಾಧಿಕಾರಿ, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
3. ಶ್ರೀಮತಿ ಆರ್. ಗೀತಾ ವಿಷಯ ಪರಿವೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.
4. ಶ್ರೀ ಟಿ.ಎನ್. ಕಮಲಾಕರ, ಕ್ಷೇತ್ರ ಶಿಕ್ಷಣಾಧಿಕಾರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ.

ವಿಚಾರಣೆ ನಡೆಸಲು ಸ್ಥಳಾವಕಾಶ ಹಾಗೂ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸೇವೆಯನ್ನು ವಿಚಾರಣಾಧಿಕಾರಿಗೆ ಒದಗಿಸಲು ಹಾಗೂ ವಿಚಾರಣಾಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿದ ನಂತರ ಅವರಿಗೆ ಸಂಭಾವನೆಯನ್ನು ಮತ್ತು ಸಾರಿಗೆ ಭತ್ಯೆಯನ್ನು ಸೇರಿದಂತೆ ಒಟ್ಟು ರೂ. 15,000/- (ರೂ. ಹದಿನೈದು ಸಾವಿರ ಮಾತ್ರ) ಮಂಜೂರು ಮಾಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಸೂಚಿಸಿದೆ.

ವಿಚಾರಣಾಧಿಕಾರಿಗಳು ಪ್ರತಿ ಆರೋಪದ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಸ್ಪಷ್ಟ ನಿರ್ಣಯಗಳನ್ನೊಳಗೊಂಡ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 2 ತಿಂಗಳೊಳಗಾಗಿ ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಆಡಳಿತ)

ಪಿ.ಆರ್. ನಂ. 461

ಶಿಕ್ಷಣ ಸಚಿವಾಲಯ

ವಿಷಯ : ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಗೆ 2011-12ನೇ ಸಾಲಿನ ಮುಂದುವರಿಕಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ 3ನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಇಡಿ 13 ಹೆಚ್‌ಪಿಟಿ 2011, ದಿನಾಂಕ: 02-04-2011/09-12-2011.
2. ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ/02/ಬಿಎಲ್‌ಡಿ/2011, ದಿನಾಂಕ: 28-12-2011.

ಪ್ರಸ್ತಾವನೆ:

ಮೇಲೆ 1ರಲ್ಲಿ ಓದಲಾದ ಆದೇಶದಲ್ಲಿ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಗೆ 2011-12ನೇ ಸಾಲಿನ ರಾಜ್ಯ ವಲಯದ ಮುಂದುವರಿಕಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಯಡಿ ಮುಂದುವರೆಯುತ್ತಿರುವ ಯೋಜನಾ ಕಾರ್ಯಕ್ರಮಗಳನ್ನು 2011-12ನೇ ಸಾಲಿಗೆ ಮುಂದುವರೆಸಿ, ಅನುಮತಿ ಆದೇಶ ನೀಡಿದ್ದು, 2011-12ನೇ ಸಾಲಿನ ಅಕ್ಟೋಬರ್ 2011ರ ಮಾಹೆಯವರೆಗೆ ಯೋಜನೆಯಡಿ ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಲಾದ ಆಯವ್ಯಯ ಹಾಗೂ ಭರಿಸಲಾದ ಖರ್ಚಿನ ವಿವರ ಹಾಗೂ ಕ್ರೋಢೀಕೃತ ಬಳಕೆ ಪ್ರಮಾಣ ಪತ್ರ ಸಲ್ಲಿಸಿದ್ದು, ಬಾಕಿ ಅನುದಾನ ಬಿಡುಗಡೆ ಮಾಡಲು ಕೋರಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 13 ಹೆಚ್‌ಪಿಟಿ 2011 ದಿನಾಂಕ: 24-01-2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ರಾಜ್ಯ ವಲಯದ ಯೋಜನಾ ಕಾರ್ಯಕ್ರಮಗಳಿಗೆ 3ನೇ ತ್ರೈಮಾಸಿಕ ಕಂತಿನಲ್ಲಿ ಪ್ರಚಲಿತ ನಿಯಮಗಳನ್ನು ಪಾಲಿಸುವ ಷರತ್ತುಗಳೊಂದಿಗೆ ತಾಂತ್ರಿಕ ಶಾಲೆಗಳು ಕಟ್ಟಡಗಳು ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಲೆಕ್ಕ ಶೀರ್ಷಿಕೆ 2203-00-800-0-06-59 ರಡಿ ಬಾಕಿ ಉಳಿದ ರೂ. 45.00 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರಿಗೆ ಅನುಮತಿ ನೀಡಿದೆ. ಗಜೇಂದ್ರಗಡ ಸರ್ಕಾರಿ ಪಾಲಿಟೆಕ್ನಿಕ್ ಮಹಿಳಾ ಹಾಸ್ಟೆಲ್‌ಗೆ ನಿವೇಶನ ಖರೀದಿಗೆ ಅನುದಾನವನ್ನು ಈ ಅನುದಾನದಲ್ಲಿಯೇ ಭರಿಸಲು ಸೂಚಿಸಿದೆ. ಪ್ರಚಲಿತ ನಿಯಮಗಳೆಲ್ಲವನ್ನೂ ಚಾಚೂ ತಪ್ಪದೇ ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 843-ವೆಚ್ಚ-8 2011, ದಿನಾಂಕ: 07-12-2011 ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. ನಂ. 462

ಶಿಕ್ಷಣ ಸಚಿವಾಲಯ

ವಿಷಯ : 2011-12ನೇ ಸಾಲಿನ ವಾರ್ಷಿಕ ಯೋಜನೆಯಡಿ ರಾಜ್ಯ ಸರ್ಕಾರದಿಂದ One Time ACA ರಡಡಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಸಂದಾಯವಾದ ಬಗ್ಗೆ.

ಓದಲಾಗಿದೆ : 1. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 26 ಎಫ್‌ಆರ್‌ಓ 2011, ದಿನಾಂಕ: 30-11-2011.

ಪ್ರಸ್ತಾವನೆ:

ಮೇಲೆ 1ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು 2011-12ನೇ ಸಾಲಿನ ವಾರ್ಷಿಕ ಯೋಜನೆಯಡಿ ರಾಜ್ಯ ಸರ್ಕಾರದಿಂದ One Time ACA ರಡಡಿಯಲ್ಲಿ ಸಲ್ಲಿಸಲಾದ ಸರ್ಕಾರಿ ಪಾಲಿಟೆಕ್ನಿಕ್ ಅಪ್‌ಗ್ರೇಡೇಷನ್‌ಗೆ ರೂ. 20.00 ಕೋಟಿಯ ಪ್ರಸ್ತಾವನೆಯನ್ನು ಅನುಮೋದಿಸಿದ್ದು, ಕೇಂದ್ರ ಸರ್ಕಾರದಿಂದ ರೂ. 6.00 ಕೋಟಿ ಅನುದಾನ ಸಂದಾಯ ಮಾಡಲು ಅಂದರೆ, ಒಟ್ಟಾರೆಯ ಶೇಕಡ 30ರಷ್ಟು ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಲು ಆರ್ಥಿಕ ಮಂತ್ರಾಲಯ, ಭಾರತ ಸರ್ಕಾರ, ಮಂಜೂರಾತಿ ನೀಡಿದೆಯೆಂದು ತಿಳಿಸಿದ್ದಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 69 ಹೆಚ್‌ಪಿಸಿ 2011 ಬೆಂಗಳೂರು, ದಿನಾಂಕ: 16-01-2012

2011-12ನೇ ಸಾಲಿನ ವಾರ್ಷಿಕ ಯೋಜನೆಯಡಿ ರಾಜ್ಯ ಸರ್ಕಾರದಿಂದ One Time ACA ರಡಡಿಯಲ್ಲಿ ಸಲ್ಲಿಸಲಾದ ಅನುಬಂಧ ಲಗತ್ತಿಸಿದ ಸರ್ಕಾರಿ ಪಾಲಿಟೆಕ್ನಿಕ್‌ಗಳ ಬಲವರ್ಧನಾ ಪ್ರಸ್ತಾವನೆಯನ್ನು ಅನುಮೋದಿಸಿದೆ. ಈ ಸಂಬಂಧ ಸರ್ಕಾರಿ ಪಾಲಿಟೆಕ್ನಿಕ್ ಅಪ್‌ಗ್ರೇಡೇಷನ್ One Time ACA ಲೆಕ್ಕಶೀರ್ಷಿಕೆ 2203-00-105-0-09 ರಡಿ ಕೇಂದ್ರದ ಪಾಲು ಶೇಕಡ 30ರಷ್ಟು ಅಂದರೆ ರೂ. 6.00 ಕೋಟಿಗಳನ್ನು (ರೂ. ಆರು ಕೋಟಿ) ಒದಗಿಸಿದ್ದು. ಇದನ್ನು ಕೆಳಕಂಡ ಷರತ್ತುಗಳನ್ನು ಪಾಲಿಸಿ, ಬಿಡುಗಡೆ ಮಾಡಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರಿಗೆ ಅನುಮತಿ ನೀಡಿದೆ.

ಷರತ್ತುಗಳು:

1. ಕೆ.ಟಿ.ಪಿ.ಪಿ. ಮತ್ತು ಇತರೇ ಪ್ರಚಲಿತ ಖರೀದಿ ನಿಯಮಗಳನ್ನು ಚಾಚೂತಪ್ಪದೇ ಪಾಲಿಸುವುದು.
2. ಪ್ರಕ್ರಿಯೆಯನ್ನು 2012 ಮಾರ್ಚ್ 15 ರೊಳಗಾಗಿ ನಿಯಮಾನುಸಾರ ಮುಗಿಸಿ, ವೆಚ್ಚವನ್ನು ಈ ಅವಧಿಯೊಳಗಾಗಿ ಮುಗಿಸುವುದು.
3. ಅನುಮೋದಿತ ಕ್ರಿಯಾ ಯೋಜನೆಗೆ ಬದಲಾವಣೆ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ಪ್ರತ್ಯೇಕವಾಗಿ ಸರ್ಕಾರದಿಂದ ಪಡೆಯುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 950 ವೆಚ್ಚ-8 2011, ದಿನಾಂಕ: 12-01-2012ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ANNEXURE FOR G.O. NO. ED 69 HPC 2011, DATED: 16-01-2012

PROJECT PROPOSAL FOR GOVERNMENT POLYTECHNIC UPGRADATION

INTRODUCTION

1.1 Karnataka has adopted the 10+3 pattern of education for Diploma and 10+2+4 for Engineering (Degree) in the State. The Department of Technical Education, Government of Karnataka, which was established in the year 1959, with the vision to provide modern need based quality technical education and to offer well trained profession human resource to the industries, business and community. Importance is given for up gradation of syllabus periodically to meet the modern technology. The Department administers 289 Polytechnics in the State which includes 81 Government Polytechnics, 43 Private Aided Polytechnics and 165 Private Polytechnics and the examination is conducted under Board of Technical Examination in the State, which offer education to about 2.29 lakhs students studying at Diploma Level. Similarly, the Department administers 187 Engineering colleges which includes 10 Government Engineering Colleges 11 Private Aided Engineering Colleges, 05 Evening Engineering Colleges and 159 Private Engineering Colleges under Vishveswaraiah Technological University in the State, which offer education to about 1.76 lakhs students studying at Engineering Degree Level.

Admission for Diploma is made more accessible to students of all regions by establishing nodal centres at District level. Admissions for Engineering Courses are done by Karnataka Examination Authority (KEA) and Comed-K.

1.2 **REQUIREMENT OF FUNDS:**

Prior to 2007-08 there were only 38 Govt. Polytechnics. These 38 Govt. Polytechnics were established from the year 1941 onwrds. These Polytechnics have all infrastructure facilities which became old and require construction/repairs of buildings and latest equipments, books and furniture's. The total additional fund required for construction of workshop building, repair of polytechnic and hostel building, purchase of equipments, books and furniture's is estimated at 50.00 Crores. The details are given below.

Sl. No.	Name of the Polytechnic	Repair of Building		Construction Of workshop	Purchase of			Total
		Poly Technic	Hostel		Equipments	Furniture	Books	
1	GRICP, Bangalore	50.00	0.00	0.00	25.00	10.00	10.00	95.00
2	Govt. Polytechnic for Women Bangalore	25.00	25.00	0.00	25.00	10.00	10.00	95.00
3	S.J (Govt.) Polytechnic, Bangalore	25.00	25.00	0.00	25.00	10.00	10.00	95.00
4	Govt. Film & TV Institute Hesaraghatta	50.00	0.00	0.00	25.00	10.00	10.00	95.00
5.	Govt. Polytechnic, Belgaum	25.00	25.00	0.00	25.00	10.00	10.00	95.00
6	Govt. Polytechnic, Bijapur	25.00	25.00	0.00	25.00	10.00	10.00	95.00
7	Govt. Polytechnic, Chamarajanagar	25.00	25.00	0.00	25.00	10.00	10.00	95.00
8	Govt. Polytechnic, Bagepalli	50.00	0.00	50.00	25.00	10.00	10.00	145.00
9	DACG (Govt.) Polytechnic, Chikkamagalur	25.00	25.00	0.00	25.00	10.00	10.00	95.00
10	DRR Govt. Polytechnic, Davanagere	25.00	25.00	0.00	25.00	10.00	10.00	95.00
11	Govt. Polytechnic, Gulbarga	25.00	25.00	0.00	25.00	10.00	10.00	95.00
12	Govt. Polytechnic, Karwar	25.00	25.00	0.00	25.00	10.00	10.00	95.00
13	Govt. Polytechnic, Chintamani	25.00	25.00	0.00	25.00	10.00	10.00	95.00
14	Govt. Polytechnic, Kustagi	50.00	0.00	50.00	25.00	10.00	10.00	145.00
15	Govt. Polytechnic, K.R. Pet	25.00	25.00	0.00	25.00	10.00	10.00	95.00
16	Karnataka (Govt.) Polytechnic, Mangalore	25.00	25.00	0.00	25.00	10.00	10.00	95.00
17	CPC (Govt.) Polytechnic, Mysore	25.00	25.00	0.00	25.00	10.00	10.00	95.00
18	Govt. Polytechnic, Raichur	25.00	25.00	0.00	25.00	10.00	10.00	95.00
19	Govt. Polytechnic, Channapatna	25.00	25.00	0.00	25.00	10.00	10.00	95.00
20	Govt. Polytechnic, Tumkur	25.00	30.00	0.00	20.00	10.00	10.00	95.00
	Total							**2000.00**

BENEFITS:

- Equipping the Polytechnics with latest equipments/instruments, books and furniture's.
- By repairs/renovation of Old Govt. Polytechnic and Hostel buildings, students have better learning atmosphere in the Institute.
- Construction of workshop buildings wherever workshop building are not in existence.

ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

PR No. 463

I–F-2-A (O)

ಶಿಕ್ಷಣ ಸಚಿವಾಲಯ

ವಿಷಯ : ಸರ್ಕಾರಿ ಪಾಲಿಟೆಕ್ನಿಕ್ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಆರ್ಥಿಕ ಇಲಾಖೆ ಪತ್ರ ಸಂಖ್ಯೆ: ಆಇ 02 ಬಿಎಸ್‌ಜಿ 2011 ದಿನಾಂಕ: 04-01-2012.

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ 57 ಸರ್ಕಾರಿ ಪಾಲಿಟೆಕ್ನಿಕ್ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಆರ್ಥಿಕ ಇಲಾಖೆಯು ಪೂರಕ ಅಂದಾಜಿನಲ್ಲಿ ಹಣ ಬಿಡುಗಡೆ ಮಾಡಿ ಮೇಲೆ ಓದಲಾದ ಪತ್ರದಲ್ಲಿ ಅನುದಾನವನ್ನು ಬಳಸಿಕೊಳ್ಳಲು ಅನುಮತಿ ನೀಡಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 21 ಹೆಚ್‌ಪಿಟಿ 2011 ಬೆಂಗಳೂರು, ದಿನಾಂಕ: 23-01-2012

ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ 57 ಸರ್ಕಾರಿ ಪಾಲಿಟೆಕ್ನಿಕ್ ಮಹಿಳಾ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಲೆಕ್ಕಶೀರ್ಷಿಕೆ 4202-02-104-1-05-386 (ಯೋಜನೆ) ರಡಿ ರೂ. 880.00 ಲಕ್ಷಗಳನ್ನು (ಎಂಟುನೂರ ಎಂಬತ್ತು ಲಕ್ಷಗಳು) ಪಾಲಿಟೆಕ್ನಿಕ್‌ವಾರು ಹಣ ಮಂಜೂರಾಗಿರುವ ಮೊತ್ತವನ್ನು ಖಚಿತಪಡಿಸಿಕೊಂಡು ಬಿಡುಗಡೆ ಮಾಡಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪ್ರಚಲಿತ ನಿಯಮಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದೆ. ಈ ಬಗ್ಗೆ ಕಾಲೇಜುವಾರು ಬಳಕೆಯಾಗಿರುವ ಅನುದಾನಕ್ಕೆ ಉಪಯೋಗತಾ ಪತ್ರ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಅ.ಟಿ. ಸಂಖ್ಯೆ ಆಇ 844 ವೆಚ್ಚ-8 2011 ದಿನಾಂಕ: 7-1-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 464

ಶಿಕ್ಷಣ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಇಡಿ 119 ಯೋಯೋಕ 2011 ಬೆಂಗಳೂರು, ದಿನಾಂಕ: 24-01-2012

ವಿಷಯ : ಕಿತ್ತೂರು ರಾಣಿ ಚನ್ನಮ್ಮ ವಸತಿ ಸೈನಿಕ ಶಾಲೆಗೆ 2011-12ನೇ ಸಾಲಿನಲ್ಲಿ ಒದಗಿಸಲಾದ ಆಯವ್ಯಯದಲ್ಲಿ ಅನುದಾನ ಬಿಡುಗಡೆ ಬಗ್ಗೆ ಅನುಮೋದನೆಯ ಸೇರ್ಪಡೆ ಆದೇಶ ಕುರಿತು.

ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಇಡಿ:119:ಯೋಯೋಕ 2011, ದಿನಾಂಕ: 12-12-2011.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿನ ಆದೇಶ ಭಾಗದಲ್ಲಿ ಕಂಡಿಕೆ 6ರ ನಂತರ ಈ ಕೆಳಕಂಡ 6(A) ಸೇರಿಸಿ ಓದಿಕೊಳ್ಳುವುದು ಲೆಕ್ಕಶೀರ್ಷಿಕೆ 2202-02-110-3-03-101 (ಯೋಜನೇತರ)ರಡಿ ರೂ. 58.75 ಲಕ್ಷ (ಐವತ್ತೆಂಟು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಈ ಕೆಳಕಂಡ ಕಾರ್ಯಕ್ರಮಗಳಿಗೆ ಅವುಗಳ ಮುಂದೆ ತೋರಿಸಿರುವಂತೆ ಬಿಡುಗಡೆ ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

1.	ಬಾಕಿ ವಿದ್ಯಾರ್ಥಿವೇತನಗಳಿಗೆ	–	ರೂ. 12.385 ಲಕ್ಷ
2.	ವಿವಿಧ ಕಾಮಗಾರಿಗಳಿಗೆ/ದುರಸ್ಥಿ/ಸೇರ್ಪಡೆ ಮತ್ತು ಮಾರ್ಪಾಡು	–	ರೂ. 46.365 ಲಕ್ಷ
	ಒಟ್ಟು	–	**ರೂ. 58.750 ಲಕ್ಷ**

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 465

ಕಂದಾಯ ಸಚಿವಾಲಯ

ವಿಷಯ : ಕಾವೇರಿ ಯೋಜನೆ ನಿರ್ವಹಣೆಯ ಗುತ್ತಿಗೆದಾರರಾದ ಮೆ॥ ಇಸಿಐಎಲ್, ಮೆ॥ ಸಿಎಂಎಸ್ ಕಂಪ್ಯೂಟರ್ಸ್ ಪ್ರೈ.ಲಿ. ಮತ್ತು ಸಿ-ಡಾಕ್, ಪುಣೆ ರವರ ಗುತ್ತಿಗೆ ಅವಧಿಯನ್ನು ಮುಂದುವರಿಸುವ ಬಗ್ಗೆ ಹಾಗೂ ಸೇವಾ ಪೂರೈಕೆದಾರರಿಗೆ ನೀಡುವ ದರಗಳನ್ನು ಪರಿಷ್ಕರಿಸುವ ಕುರಿತು-ಆದೇಶ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಕಂಇ 79 ಮುನೋಮು 2011 ದಿನಾಂಕ: 18-8-2011
2) ತಾಂತ್ರಿಕ ಸಲಹಾ ಸಮಿತಿ ಸಭೆ ದಿನಾಂಕ: 15-9-2011
3) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ:ಸಿಐಎಂಪಿ 09/2007-08 ದಿನಾಂಕ: 29-10-2011, 31-10-2011 ಮತ್ತು 14-12-2011.
4) ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 1011 ವೆಚ್ಚ-12/11 ದಿನಾಂಕ: 02-12-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ನೂತನ ಕಾವೇರಿ ಯೋಜನೆಯ ಹಾರ್ಡ್‌ವೇರ್ ಟೆಂಡರನ್ನು ಪ್ರಕಟಪಡಿಸಿ ನೂತನ ಗುತ್ತಿಗೆದಾರರನ್ನು ಆಯ್ಕೆ ಮಾಡಿಕೊಳ್ಳುವವರೆಗೆ ಪ್ರಸ್ತುತ ಗುತ್ತಿಗೆದಾರರ ಅವಧಿಯನ್ನು ಮುಂದುವರೆಸುವುದು ಅತ್ಯವಶ್ಯಕವಿರುತ್ತದೆಂದು, ಗುತ್ತಿಗೆ

ಅವಧಿಯನ್ನು ಮುಂದುವರೆಸಲ್ಪಡದಿದ್ದರೆ ಸಾರ್ವಜನಿಕ ಸೇವೆಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಮೇಲೆ ದಿನಾಂಕ: 01-04-2011 ರಿಂದ 15-10-2011ರವರೆಗೆ ಮೆ॥ಇಸಿಐಎಲ್, ಮೆ॥ಸಿಎಂಎಸ್ ಕಂಪ್ಯೂಟರ್ಸ್ ಪ್ರೈ.ಲಿ. ಮತ್ತು ಸಿ-ಡಾಕ್, ಪುಣೆ ರವರ ಗುತ್ತಿಗೆ ಅವಧಿಯನ್ನು ದಿನಾಂಕ: 15-10-2011ರ ವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿತ್ತು. ಸದರಿ ಯೋಜನೆಯ ಗುತ್ತಿಗೆ ಅವಧಿಯು ದಿನಾಂಕ: 15-10-2011 ರಂದು ಮುಕ್ತಾಯಗೊಂಡಿರುತ್ತದೆ.

ಮೇಲೆ ಓದಲಾದ (2)ರ ಸಭೆಯ ನಡವಳಿಯಂತೆ, ಮೇಲೆ ಓದಲಾದ (3)ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ದಿನಾಂಕ 15-9-2011 ರಂದು ಜರುಗಿದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ನೂತನ ಕಾವೇರಿ ಯೋಜನೆಯ ಹಾರ್ಡ್‌ಮೇರ್ ಪೂರೈಕೆಗೆ ಸಂಬಂಧಿಸಿದ ಆರ್‌ಎಫ್‌ಪಿಯಲ್ಲಿ ಬದಲಾವಣೆ ಮಾಡಬೇಕಾಗಿರುವ ಬಿಸಿನೆಸ್ ಮಾಡೆಲ್ ಬಗ್ಗೆ ಹಾಗೂ ಇತರ ವಿಷಯಗಳ ಬಗ್ಗೆ ಚರ್ಚಿಸಿ ಅಂತಿಮವಾಗಿ ಆರ್‌ಎಫ್‌ಪಿಯು ಅನುಮೋದಿಸಲ್ಪಟ್ಟ ನಂತರ ಉತ್ಸುಕ ಬಿಡ್‌ದಾರರಿಂದ ಬಿಡ್ ಆಹ್ವಾನಿಸಿ ಟೆಂಡರ್ ಪ್ರಕಟಿಸಿ, ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ ನೂತನ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಹಾಗೂ ಆಯ್ಕೆಗೊಂಡ ನೂತನ ಗುತ್ತಿಗೆದಾರರು ನೂತನ ಹಾರ್ಡ್‌ವೇರ್ ಪೂರೈಸಿ ಯೋಜನೆಯ ಸಂಪೂರ್ಣ ನಿರ್ವಹಣೆಯನ್ನು ವಹಿಸಿಕೊಳ್ಳಲು ಕನಿಷ್ಠವೆಂದರೂ 9 ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ. ಅಲ್ಲಿಯವರೆಗೆ ಪ್ರಸ್ತುತ ಕಾವೇರಿ ಯೋಜನೆಯ ಗುತ್ತಿಗೆ ಅವಧಿಯನ್ನು ವಿಸ್ತರಿಸಬೇಕಾಗುತ್ತದೆ. ಮೆ॥ಇಸಿಐಎಲ್ ಹಾಗೂ ಮೆ॥ಸಿಎಂಎಸ್ ಕಂಪ್ಯೂಟರ್ಸ್ ಪ್ರೈ.ಲಿ. ರವರು ಪತ್ರಗಳನ್ನು ಸಲ್ಲಿಸಿ ಪ್ರಸ್ತುತ ಕಾವೇರಿ ಯೋಜನೆಗಾಗಿ ಉಪಯೋಗಿಸಲ್ಪಡುತ್ತಿರುವ ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಯುಪಿಎಸ್, ಜನರೇಟರ್ ಇತ್ಯಾದಿಗಳು ಸತತ 8 ವರ್ಷಕ್ಕೂ ಹೆಚ್ಚು ಅವಧಿಯ ಬಳಕೆಯಿಂದ ಕಾರ್ಯಕ್ಷಮತೆ ಕಳೆದುಕೊಂಡಿದ್ದು ಅವುಗಳನ್ನು ನಿರ್ವಹಿಸಲು ಸಾಧ್ಯವಿಲ್ಲದಿರುವ ಕಾರಣ, ಸೇವಾ ಪೂರೈಕೆಯನ್ನು ಮುಂದಿನ 9 ತಿಂಗಳಿಗೆ ಮುಂದುವರೆಸಲು ಹೊಸ ಐಟಿ ಮೂಲಸೌಕರ್ಯಗಳಾದ ಪ್ರಿಂಟರ್, ಸ್ಕ್ಯಾನರ್, ಯು.ಪಿ.ಎಸ್. ಜನರೇಟರ್ ಇತ್ಯಾದಿಗಳಿಗೆ ಬಂಡವಾಳ ಹೂಡಬೇಕಾಗಿದೆ ಹಾಗೂ ಈ ಮೂಲಸೌಕರ್ಯಗಳು 9 ತಿಂಗಳ ನಂತರ ಇಲಾಖೆಯ ಆಸ್ತಿಯಾಗಲಿದೆ ಎಂದು ಸದರಿ ಸಂಸ್ಥೆಯವರೊಂದಿಗೆ ದಿನಾಂಕ: 17-10-2011 ಮತ್ತು 18-10-2011 ರಂದು ನಡೆಸಿದ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 1011 ವೆಚ್ಚ-12/11 ದಿನಾಂಕ: 02-12-2011ರಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ದಿನಾಂಕ: 16-10-2011 ರಿಂದ 15-7-2012 ರ ವರೆಗೆ 9 ತಿಂಗಳಿಗೆ ಕಾವೇರಿ ಯೋಜನೆಯ ನಿರ್ವಹಣಾ ಕಾರ್ಯವನ್ನು ಬೆಂಗಳೂರು ನಗರ ಜಿಲ್ಲೆಗೆ ರೂ. 18/-ರ ದರದಲ್ಲಿ ಹಾಗೂ ಇತರೆ ಜಿಲ್ಲೆಗಳಲ್ಲಿ ರೂ. 28/-ರ ದರದಲ್ಲಿ ಮೆ॥ಇಸಿಐಎಲ್ ಮತ್ತು ಮೆ॥ಸಿಎಂಎಸ್ ಕಂಪ್ಯೂಟರ್ಸ್ ಪ್ರೈ.ಲಿ., ಸಂಸ್ಥೆಗಳಿಂದ ನೇರವಾಗಿ ಪಡೆಯಲು ಹಾಗೂ ಮೆ॥ಸಿ-ಡಾಕ್, ಪುಣೆ ಇವರ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ಕಂದಾಯ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿ ಆರ್ಥಿಕ ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ದಿನಾಂಕ: 7-12-2011 ರಂದು ಇ-ಆಡಳಿತ ಇಲಾಕೆಯ, ಎನ್‌ಐಸಿ ಅಧಿಕಾರಿಗಳು ಮತ್ತು ಬಾಹ್ಯ ತಜ್ಞರನ್ನು ಒಳಗೊಂಡ ಸದಸ್ಯರ ಸಮಿತಿಯು ಸಭೆ ಸೇರಿ ಕೂಲಂಕಷವಾಗಿ ಪರಿಶೀಲಿಸಿ ಪರಿಷ್ಕೃತ ಲೆಕ್ಕಾಚಾರ ಮಾಡಿದ ಪ್ರಕಾರ ಪ್ರತಿ ವ್ಯವಹರಣೆಗೆ ಮಾರಾಟಗಾರರಿಗೆ 9 ತಿಂಗಳಿಗೆ ಈ ಕೆಳಕಾಣಿಸಿದ ದರಗಳಂತೆ ಪಾವತಿಸಬೇಕಾಗಿರುತ್ತದೆ ಎಂದು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಸಮಿತಿಗೆ ಶಿಫಾರಸ್ಸು ಮಾಡಿರುವುದು ಯುಕ್ತವಾಗಿದೆ ಎಂದು ಸಮಿತಿಯು ತೀರ್ಮಾನಿಸಿರುತ್ತದೆ.

ವರ್ಷ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಜಿಲ್ಲೆ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಹೊರತುಪಡಿಸಿದ ಜಿಲ್ಲೆಗಳು	ಇಸಿಐಎಲ್ ನಿರ್ವಹಿಸುವ ಜಿಲ್ಲೆಗಳು
16ನೇ ಅಕ್ಟೋಬರ್, 2011 ರಿಂದ 15ನೇ ಜುಲೈ, 2012	ರೂ. 18/-	ರೂ. 27.50	ರೂ. 28/-

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 213 ಮುನೋಮು 2011, ಬೆಂಗಳೂರು, ದಿನಾಂಕ: 13-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನೂತನ ಕಾವೇರಿ ಯೋಜನೆಯ ಹಾರ್ಡ್‌ವೇರ್ ಪೂರೈಕೆಗೆ ನೂತನ ಗುತ್ತಿಗೆದಾರರನ್ನು ಆಯ್ಕೆ ಮಾಡಿ ಅನುಷ್ಠಾನಗೊಳಿಸಲು ಕಾಲಾವಕಾಶಬೇಕಾಗಿರುವುದರಿಂದ ಪ್ರಸ್ತುತ ಗುತ್ತಿಗೆದಾರರಾದ ಮೆ॥ ಇಸಿಐಎಲ್, ಮೆ॥ಸಿಎಂಎಸ್ ಕಂಪ್ಯೂಟರ್ಸ್ ಲಿಮಿಟೆಡ್ ಇವರಿಗೆ ಈ ಕೆಳಕಾಣಿಸಿದ ದರ ಪರಿಷ್ಕರಣೆಯೊಂದಿಗೆ ದಿನಾಂಕ: 16-10-2011 ರಿಂದ 15-07-2012ರ ವರೆಗೆ ಒಂಭತ್ತು (9) ತಿಂಗಳ ಅವಧಿಗೆ ಮೆ॥ಸಿ-ಡಾಕ್, ಪುಣೆ ಮೆ॥ ಇಸಿಐಎಲ್ ಮತ್ತು ಮೆ॥ ಸಿಎಂಎಸ್ ಕಂಪ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳ ಗುತ್ತಿಗೆ ಅವಧಿಯನ್ನು ವಿಸ್ತರಿಸಿ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಸರ್ಕಾರವು ಆದೇಶಿಸಿದೆ.

ಪರಿಷ್ಕೃತ ದರ:

ವರ್ಷ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಜಿಲ್ಲೆ	ಸಿಎಂಎಸ್ ಕಂಪ್ಯೂಟರ್ಸ್ ನಿರ್ವಹಿಸುವ ಬೆಂಗಳೂರು ಹೊರತುಪಡಿಸಿದ ಜಿಲ್ಲೆಗಳು	ಇಸಿಐಎಲ್ ನಿರ್ವಹಿಸುವ ಜಿಲ್ಲೆಗಳು
16ನೇ ಅಕ್ಟೋಬರ್, 2011 ರಿಂದ 15ನೇ ಜುಲೈ, 2012	ರೂ. 18/-	ರೂ. 27.50	ರೂ. 28/-

ಷರತ್ತುಗಳು:

(1) ಮೆ॥ ಇಸಿಐಎಲ್, ಮೆ॥ಸಿಎಂಎಸ್ ಕಂಪ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಮೆ॥ ಸಿ-ಡಾಕ್, ಪುಣೆ ಇವರೊಂದಿಗಿನ ಗುತ್ತಿಗೆ ಅವಧಿಯನ್ನು ದಿನಾಂಕ: 15-07-2012ರ ನಂತರ ಯಾವುದೇ ಕಾರಣಕ್ಕೂ ಮುಂದುವರಿಸಲಾಗುವುದಿಲ್ಲ.

(2) ಅಷ್ಟರಲ್ಲಿ ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆ ನೀಡಲು ಶೀಘ್ರ ಕ್ರಮ ತೆಗೆದುಕೊಳ್ಳುವುದು ಮತ್ತು ಉತ್ತಮ ಗುಣಮಟ್ಟದ ಸೇವೆಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಆಡಳಿತ ಇಲಾಖೆಯು ದೃಢಪಡಿಸುವುದು.

(3) ಗುತ್ತಿಗೆದಾರರು ಪೂರೈಸುವ ನೂತನ ಹಾರ್ಡ್‌ವೇರ್‌ಗಳನ್ನು ಮುಂದುವರೆಸಲ್ಪಡುವ ಗುತ್ತಿಗೆ ಅವಧಿ ಮುಗಿದ ನಂತರ ಇಲಾಖೆಯ ಸುಪರ್ದಿಗೆ ಬಿಟ್ಟುಕೊಡತಕ್ಕದ್ದು.

(4) ಮುಂದುವರೆಸಲ್ಪಡುವ ಗುತ್ತಿಗೆ ಅವಧಿಯಲ್ಲಿ ಉಪ ನೋಂದಣಿ ಕಛೇರಿಗಳಲ್ಲಿರುವ ಹಾರ್ಡ್‌ವೇರ್‌ಗಳನ್ನು ಸುಸ್ಥಿತಿಯಲ್ಲಿ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರುವಂತೆ ನಿರ್ವಹಿಸತಕ್ಕದ್ದು.

(5)ಪೂರೈಸಲ್ಪಡುವ ಹಾರ್ಡ್‌ವೇರ್‌ಗಳ ಸ್ಪೆಸಿಫಿಕೇಶನ್‌ಗಳು ಇಲಾಖೆಯು ಸೂಚಿಸುವ ಸ್ಪೆಸಿಫಿಕೇಶನ್‌ಗಳಂತೆ ಇರತಕ್ಕದ್ದು.

(6) ಮುಂದುವರೆಸಲ್ಪಡುವ ಗುತ್ತಿಗೆ ಅವಧಿಯಲ್ಲಿ ಆಪರೇಟರ್ ಹಾಗೂ ಇಂಜಿನಿಯರ್‌ರವರುಗಳ ಸೇವೆಯು ಸಮರ್ಪಕ ಹಾಗೂ ತೃಪ್ತಿದಾಯಕವಾಗಿರತಕ್ಕದ್ದು.

(7) ಮುಂದುವರೆಸಲ್ಪಡುವ ಗುತ್ತಿಗೆ ಅವಧಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 79 ಮುನೋಮು 2011 ದಿನಾಂಕ: 08–08–2011 ರಲ್ಲಿರುವ ಎಲ್ಲಾ ಷರತ್ತುಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಇ 1011 ವೆಚ್ಚ–12/11 ದಿನಾಂಕ: 02–12–2011ರ ಅನ್ವಯ ಮತ್ತು ಈ ಸಂಬಂಧಿತ ವೆಚ್ಚವನ್ನು 2011–12ನೇ ಸಾಲಿನ ಇಲಾಖೆಯ ಲೆಕ್ಕ ಶೀರ್ಷಿಕೆ 2030–03–001–2–04 Charges of Supply of Registered Documents-051 General Expenses ಅಡಿಯಲ್ಲಿ ಭರಿಸಲು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 650 ವೆಚ್ಚ–7/2011 ದಿನಾಂಕ: 2–12–2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. 466

ಕಂದಾಯ ಸಚಿವಾಲಯ

ವಿಷಯ : ಕೊಪ್ಪಳ ತಾಲ್ಲೂಕಿನ ನರೇಗಲ್ ಗ್ರಾಮದಲ್ಲಿ ಆಸರೆ ಮನೆಗಳ ಬಡಾವಣೆಯಲ್ಲಿ ಚರಂಡಿ ಸಂಪರ್ಕ ಕಲ್ಪಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಪ್ರಸ್ತಾವನೆ :

ಕೊಪ್ಪಳ ತಾಲ್ಲೂಕಿನ ನರೇಗಲ್ ಗ್ರಾಮದಲ್ಲಿ ವಿಪ್ರೋ ಕಂಪನಿಯವರು 428 ಆಸರೆ ಮನೆಗಳನ್ನು ನಿರ್ಮಾಣಗೊಳಿಸಿ ಸದರಿ ಮನೆಗಳ ಸ್ನಾನ ಮತ್ತು ಶೌಚಾಲಯ ಸಂಪರ್ಕಗಳನ್ನು ಗುಂಡಿಯಲ್ಲಿ ಜೋಡಿಸಿರುತ್ತಾರೆ. ಈ ಗುಂಡಿಗಳು ಸ್ವಲ್ಪ ದಿನಗಳ ನಂತರ ತುಂಬಿಕೊಂಡು ವಾತಾವರಣ ಮಲೀನವಾಗುವ ಸಾಧ್ಯತೆಯರುತ್ತದೆ. ಆದ್ದರಿಂದ ಈ ಬಡಾವಣೆಯಲ್ಲಿ ಚರಂಡಿ ಸಂಪರ್ಕ ಕಲ್ಪಿಸಲು ರೂ. 10 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 365 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ: 12–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ತಾಲ್ಲೂಕಿನ ನರೇಗಲ್ ಗ್ರಾಮದ ಆಸರೆ ಬಡಾವಣೆಯಲ್ಲಿ ಚರಂಡಿ ಸಂಪರ್ಕ ಕಲ್ಪಿಸಲು ರೂ. 10.00 (ರೂ. ಹತ್ತು ಲಕ್ಷಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲು ಸರ್ಕಾರ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235–00–111–0–02 "Public Contributions to the Calamity Relief" ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್–8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಸಂಬಂಧಿಸಿದ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿಕೊಳ್ಳಲು ಆದೇಶಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಯವರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಪಿ.ಆರ್. 467

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಸ್.ಆರ್. ಕೃಷ್ಣಯ್ಯ, ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು

ಓದಲಾಗಿದೆ:
1) ಮಾನ್ಯ ಕಂದಾಯ ಸಚಿವರ ಟಿಪ್ಪಣಿ ಸಂಖ್ಯೆ:ಕಂ.ಸ/ಗೃಹ ಕಛೇರಿ/153/2011, ದಿನಾಂಕ: 04.03.2011.
2) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 09 ಎಡಿಇ 2011, ದಿನಾಂಕ: 07.03.2011
3) ಕರ್ನಾಟಕ ನ್ಯಾಯ ಮಂಡಳಿ, ಮಧ್ಯಂತರ ಆದೇಶ ದಿ: 09.03.2011
4) ಜಿಲ್ಲಾಧಿಕಾರಿಗಳಿಗೆ ಪತ್ರ ದಿನಾಂಕ: 04.07.2011
5) ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ:ರಾಜಿಕ/ಸಿಬ್ಬಂದಿ/ಸಿಆರ್/72/2011-12, ದಿನಾಂಕ: 27.07.2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ.(1)ರ ಮಾನ್ಯ ಕಂದಾಯ ಸಚಿವರ ಟಿಪ್ಪಣಿಯಲ್ಲಿ ಶ್ರೀ ಸಿ.ಪಿ. ಯೋಗೇಶ್ವರ, ಅಧ್ಯಕ್ಷರು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ಎಸ್.ಆರ್. ಕೃಷ್ಣಯ್ಯ, ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು ಇವರು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಪಟ್ಟಾ ಜಮೀನುಗಳು ಹಾಗೂ ನದಿ ದಡದಲ್ಲಿ ಇರುವ ಮರಳನ್ನು ಗಣಿ ಉದ್ದಿಮೆದಾರರ ಲಾಬಿಗೆ ಮಣಿದು ಅಕ್ರಮವಾಗಿ ಲಾರಿಗಳಲ್ಲಿ ಬೋಟು ಹಾಗೂ ಇಟಾಚಿ, ಜೆಸಿಪಿ ಯಂತ್ರಗಳಿಂದ ಮಣ್ಣಿನಿಂದ ಮರಳನ್ನು ಫಿಲ್ಟರ್ ಮಾಡಿ ಸಾಗಣೆ ಮಾಡುತ್ತಿದ್ದರೂ ಸಹ ಇವರು ಯಾವುದೇ ರೀತಿಯ ಕಾನೂನು ಕ್ರಮಕೈಗೊಳ್ಳದೇ ಮರಳು ದಂದೆ ಮಾಡುತ್ತಿರುವವರ ಜೊತೆಗೆ ಶಾಮೀಲಾಗಿರುವುದರಿಂದ ತಾಲ್ಲೂಕಿನಲ್ಲಿ ಅಂತರ್ಜಲ ಬತ್ತಿ ಹೋಗಿ ಕುಡಿಯುವ ನೀರಿಗೂ ಸಹ ಹಾಹಕಾರ ಉಂಟಾಗಿರುವುದಾಗಿ ಹಾಗೂ ಶ್ರೀ ನರಸಿಂಹಸ್ವಾಮಿ ದೇವಾಲಯಕ್ಕೆ ಹೊಸ ಹುಂಡಿ ಖರೀದಿಯಲ್ಲಿ ಇಲಾಖಾ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಹುಂಡಿ ಖರೀದಿಸಿ, ಹಣ ದುರುಪಯೋಗ ಮಾಡಿರುತ್ತಾರೆ. ಮತ್ತು ಚನ್ನಪಟ್ಟಣ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ 10,000 ಬೋಗಸ್ ಮತದಾರರಿದ್ದು, ಈ ವಿಷಯವನ್ನು ಅವರ ಗಮನಕ್ಕೆ ತಂದರೂ ಸಹ ಅವರು ಹೆಸರನ್ನು ತೆಗೆದು ಹಾಕಲು ನಿರ್ಲಕ್ಷ್ಯತನ ತೋರಿಸಿರುವುದರಿಂದ ಹಾಗೂ ಇವರ ವಿರುದ್ಧ ಪದೇ ಪದೇ ಸಾರ್ವಜನಿಕರಿಂದಲೂ ದೂರುಗಳು ಬರುತ್ತಿರುವುದರಿಂದ ಇವರನ್ನು ಕೂಡಲೇ ಕರ್ತವ್ಯದಿಂದ ಅಮಾನತ್ತುಗೊಳಿಸುವಂತೆ ಕೋರಿರುತ್ತಾರೆ ಎಂದು ತಿಳಿಸುತ್ತಾ, ಸದರಿ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ ಹಾಗೂ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಜರೂರು ವಿಚಾರಣೆಗೊಳಪಡಿಸುವುದು ಎಂದು ಆದೇಶಿಸಿದ್ದರು.

ಶ್ರೀ ಎಸ್.ಆರ್. ಕೃಷ್ಣಯ್ಯ, ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇವರು ಕಛೇರಿಯ ಆಡಳಿತವನ್ನು ಪರಿಣಾಮಕಾರಿಯಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸದೇ ಇರುವುದು ಅಲ್ಲದೇ ಅಧಿಕಾರದ ಹಾಗೂ ಸಾರ್ವಜನಿಕ ಹಣದ ದುರುಪಯೋಗದಂತಹ ಆಪಾದನೆಗಳನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಸದರಿಯವರ ಇಲಾಖಾ ವಿಚಾರಣೆ ಕಾಯ್ದಿರಿಸಿ ಮೇಲೆ ಓದಲಾದ ಕ್ರ.ಸಂ. (2) ರ ದಿನಾಂಕದ ಆದೇಶದಲ್ಲಿ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. ಸದರಿ ಅಧಿಕಾರಿ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 1143/2011ಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಮೇಲೆ ಓದಲಾದ ಕ್ರ.ಸಂ.(3) ರ ದಿನಾಂಕ: 09.03.2011 ರ ಮಧ್ಯಂತರ ಆದೇಶದಲ್ಲಿ ಅಮಾನತ್ತಿನ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ನಂತರ, ಸದರಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದನ್ವಯ, ಇವರ ಅಮಾನತ್ತನ್ನು ತೆರವುಗೊಳಿಸಿ ದಿನಾಂಕ: 09.05.2011ರ ಆದೇಶದಲ್ಲಿ ಸದರಿಯವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಿ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (4) ರಲ್ಲಿ ದಿನಾಂಕ: 04.07.2011 ರ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಇವರಿಗೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ದೋಷಾರೋಪಣಾ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (5) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಶ್ರೀ ಎಸ್.ಆರ್. ಕೃಷ್ಣಯ್ಯ, ತಹಶೀಲ್ದಾರ್ ಇವರು ಕಾರ್ಯ ನಿರ್ವಹಿಸುತ್ತಿದ್ದ ಅವಧಿ ದಿ: 13.07.2009 ರಿಂದ 07.03.2011 ರವರೆಗೆ ಆಗಿದ್ದು ದೂರುಗಳ ದಾಖಲೆಗಳನ್ನು ಚನ್ನಪಟ್ಟಣ ತಾಲ್ಲೂಕು ಕಛೇರಿಯಿಂದ ಪಡೆದು ಪರಿಶೀಲಿಸಿ ಸದರಿಯವರ ವಿರುದ್ಧ ಮಾಡಲಾದ ಸಾರ್ವಜನಿಕ ದೂರಿನ ವಿಚಾರದಲ್ಲಿ ಪರಿಶೀಲಿಸಲಾಗಿ ಪೂರಕವಾದ ದೂರುಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೆ, ಕಡತದಲ್ಲಿರುವ ದೂರು ಅರ್ಜಿಯಲ್ಲಿ ಸ್ಪಷ್ಟವಾಗಿ ಯಾವ ಗ್ರಾಮಗಳಲ್ಲಿ ಯಾವ ದಿನಾಂಕಗಳಲ್ಲಿ ಲೋಪದೋಷಗಳು ಎಂಬುದು ಸ್ಪಷ್ಟವಾಗಿರುವುದಿಲ್ಲವಿರುವುದರಿಂದ ದಾಖಲೆಗಳು ಅಥವಾ ಸಾಕ್ಷಿದಾರರು ಇಲ್ಲದಿರುವ ಸಂದರ್ಭದಲ್ಲಿ ಇಲಾಖಾ ವಿಚಾರಣೆಯನ್ನು ಕಾನೂನು ಬದ್ಧವಾಗಿ ನಡೆಸಲು ಸಾಧ್ಯವಿಲ್ಲವೆಂಬ ವರದಿಯನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಸರ್ಕಾರವು ಜಿಲ್ಲಾಧಿಕಾರಿಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಇವರ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂ: ಆರ್‌ಡಿ 09 ಎಡಿಇ 2011, ಬೆಂಗಳೂರು, ದಿನಾಂಕ: 16-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಸ್.ಆರ್. ಕೃಷ್ಣಯ್ಯ, ಹಿಂದಿನ ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ, ಪ್ರಸ್ತುತ ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ಇವರ ವಿರುದ್ಧ ಹೂಡಲಾದ ವಿಚಾರಣೆಯನ್ನು ಕೈಬಿಡಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 468

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ವಾಟರ್ ಟ್ಯಾಂಕರ್ ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಪಾವತಿಸುವ ಬಗ್ಗೆ

ಓದಲಾಗಿದೆ: 1. ಬಳ್ಳಾರಿ ಜಿಲ್ಲಾಧಿಕಾರಿಗಳ ಪತ್ರ ಸಂ: ಪ್ರ.ವಿ. 51/2009-10, ದಿನಾಂಕ: 30-09-2011.
2. ಗದಗ ಜಿಲ್ಲಾಧಿಕಾರಿಗಳ ಪತ್ರ ಸಂ: ಪುನರ್ವಸತಿ ಸಿ.ಆರ್. 57/2011-12, ದಿನಾಂಕ: 18-10-2011

ಪ್ರಸ್ತಾವನೆ :

ಬಳ್ಳಾರಿ ಮತ್ತು ಗದಗ ಜಿಲ್ಲಾಧಿಕಾರಿಗಳು ಮೇಲೆ ಓದಲಾದ (1) ರಿಂದ (2)ರವರೆಗಿನ ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುತ್‌ಚ್ಛಕ್ತಿ ವ್ಯತ್ಯಯ ಉಂಟಾದ ಬಳ್ಳಾರಿ ಜಿಲ್ಲೆಯ, ಮಾಗಳ, ಹಚ್ಚೊಳಿ ಮತ್ತು ಹೊನ್ನರಳ್ಳಿ ಹಾಗೂ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಅಮರಗೋಳ ಗ್ರಾಮಗಳಲ್ಲಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಬಳ್ಳಾರಿ ಜಿಲ್ಲಾಧಿಕಾರಿಗಳು ರೂ. 2,15,250/-, ಗದಗ ಜಿಲ್ಲಾಧಿಕಾರಿಗಳು, ರೂ. 1,07,525/- ಒಟ್ಟು ರೂ. 3,22,775/-ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 12.01.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಬಳ್ಳಾರಿ ಮತ್ತು ಗದಗ ಜಿಲ್ಲಾಧಿಕಾರಿಗಳಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ)
1	ಬಳ್ಳಾರಿ	2,15,250/-
2	ಗದಗ	1,07,525/-
	ಒಟ್ಟು	**3,22,775/-**

(ರೂಪಾಯಿ ಮೂರು ಲಕ್ಷದ ಇಪ್ಪತ್ತೆರಡು ಸಾವಿರದ ಏಳುನೂರ ಎಪ್ಪತ್ತೈದು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 'Public Contributions to the Calamity Relief' ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್-8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು ಬಿಡುಗಡೆ ಮಾಡಿರುವ ಹಣವನ್ನು ಹೇಗೆ ಉಪಯೋಗಿಸಲಾಗಿದೆ ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. & ಸೇವೆಗಳು-2)

ಪಿ.ಆರ್. 469

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಆಸುಇ 275 ಆಸೇಇ 2011, ಬೆಂಗಳೂರು, ದಿನಾಂಕ: 29-12-2011

ಕೆ.ಎ.ಎಸ್. ಸಮೂಹ-ಎ (ಆಯ್ಕೆ ಶ್ರೇಣಿ) ವೃಂದಕ್ಕೆ ಕೆಲವು ಹುದ್ದೆಗಳನ್ನು ತಾತ್ಕಾಲಿಕವಾಗಿ ಸೇರ್ಪಡೆಗೊಳಿಸಿ (Temporary Addition) ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 275 ಆಸೇಇ 2011, ದಿನಾಂಕ: 18.08.2011ರ ಆದೇಶ ಭಾಗದ ಕ್ರಮ ಸಂಖ್ಯೆ: 04 ಮತ್ತು 07 ರಲ್ಲಿನ ಹುದ್ದೆಗಳಿಗೆ ಸಂಬಂಧಿಸಿದಂತೆ Table ನ ಕಾಲಂ 3 ರಲ್ಲಿ ನಮೂದಾಗಿರುವ ಪದನಾಮವನ್ನು ತಿದ್ದಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

ಕ್ರ.ಸಂ.	18.08.2011ರ ಆದೇಶದಲ್ಲಿ ನಮೂದಾಗಿರುವ ಪದನಾಮ	ಈಗ ತಿದ್ದಿ ಓದಿಕೊಳ್ಳಬೇಕಾದ ಉನ್ನತೀಕರಿಸಿರುವ ಹುದ್ದೆಯ ಪದನಾಮ
1	2	3
4	ಸರ್ಕಾರದ ಉಪ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು	ಸರ್ಕಾರದ ಜಂಟಿ ಕಾರ್ಯದರ್ಶಿ, ಯೋಜನಾ ಇಲಾಖೆ, ಬೆಂಗಳೂರು
7	ಮಾನ್ಯ ಮುಖ್ಯಮಂತ್ರಿಯವರ ಉಪ ಕಾರ್ಯದರ್ಶಿ, ಬೆಂಗಳೂರು	ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ, ಬೆಂಗಳೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವಡಗಾವೆ ಬಸವರಾಜ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಸೇವೆಗಳು-2)

ಪಿ.ಆರ್. 470

ಶಿಕ್ಷಣ ಸಚಿವಾಲಯ

ವಿಷಯ : ಶ್ರೀ ಎಂ.ಸಿ. ಕೃಷ್ಣಮೂರ್ತಿ, ಸಿವಿಲ್ ವಿಭಾಗದ ಉಪನ್ಯಾಸಕರು, ತಾಂತ್ರಿಕ ಶಿಕ್ಷಣ ಇಲಾಖೆ (ಅನಧಿಕೃತ ಗೈರು ಹಾಜರಾತಿಯಲ್ಲಿರುವ) ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಓದಲಾಗಿದೆ:
(1) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 15 ಡಿಇಕ್ಯೂ (1) 2007/2778 ದಿನಾಂಕ: 03/31-1-2008.
(2) ಸರ್ಕಾರದ ನೋಟೀಸ್ ಸಂಖ್ಯೆ:: ಇಡಿ 36 ಡಿಟಿಇ 2008, ದಿನಾಂಕ: 08-04-2008.
(3) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 13 ಡಿಇಕ್ಯೂ (1) 2005/5453 ದಿನಾಂಕ: 6/10-3-2010.
(4) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಟಿಇ 18 ಡಿಇಕ್ಯೂ (1) 2007/1543 ದಿನಾಂಕ: 20/23-7-2010.

ಪ್ರಸ್ತಾವನೆ :

ಶ್ರೀ ಎಂ.ಸಿ. ಕೃಷ್ಣಮೂರ್ತಿ, ಇವರು ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಖಾಲಿ ಇರುವ ಸಿವಿಲ್ ವಿಭಾಗದ ಉಪನ್ಯಾಸಕರ ಹುದ್ದೆಗೆ ದಿನಾಂಕ: 21-9-1987ರಂದು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿರುತ್ತಾರೆ. ನಂತರ ಇವರ ಸೇವೆಯನ್ನು ದಿನಾಂಕ: 20-2-1991ರಿಂದ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿರುತ್ತದೆ. ಸದರಿ ಉಪನ್ಯಾಸಕರು ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಇವರು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡಿಮೆ ನೀಡಿ ಅಕ್ರಮವಾಗಿ ಹಣ ವಸೂಲಿ ಮಾಡುವುದರೊಂದಿಗೆ ವಿದ್ಯಾರ್ಥಿಗಳಿಗೆ ಅನ್ಯಾಯ ಎಸಗಿದ್ದಾರೆ ಎಂಬ ಬಗ್ಗೆ ಸಿಬ್ಬಂದಿಗಳಿಂದ ಬಂದ ಮನವಿಯ ಮೇರೆಗೆ ಪ್ರಾಥಮಿಕ ತನಿಖೆಯನ್ನು ನಡೆಸಿ ಸದರಿ ತನಿಖಾ ವರದಿಯ ಆಧಾರದ ಮೇಲೆ ಶ್ರೀ ಎಂ.ಸಿ. ಕೃಷ್ಣಮೂರ್ತಿ, ಸಿವಿಲ್ ವಿಭಾಗದ ಉಪನ್ಯಾಸಕರು ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 62 ಡಿಟಿಇ 2005 ದಿನಾಂಕ: 15-2-2006ರಂದು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಗಳು ನಿಯಮ 10(1)ಡಿ ರನ್ವಯ ದಿನಾಂಕ: 26-11-2005 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತಿನಲ್ಲಿಡಲಾಗಿತ್ತು.

ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ನಡೆಸಲು ತುಂಬಾ ಕಾಲಾವಕಾಶ ಬೇಕಾಗಿದ್ದುದರಿಂದ ಮತ್ತು ಅವರ ಅಮಾನತ್ತಿನ ಅವಧಿಯು 06 ತಿಂಗಳು ಪೂರ್ಣಗೊಂಡಿದ್ದರಿಂದ ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸರ್ಕಾರದ ಆದೇಶ ಸಂಖ್ಯೆ: ಇಡಿ 62 ಡಿಟಿಇ 2005 ದಿನಾಂಕ: 15-5-2006ರಲ್ಲಿ ಅಮಾನತ್ತನ್ನು ರದ್ದುಗೊಳಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿಗೆ ಸ್ಥಳನಿಯುಕ್ತಿಗೊಳಿಸಲಾಗಿತ್ತು. ಆದರೆ ಶ್ರೀ ಎಂ.ಸಿ. ಕೃಷ್ಣಮೂರ್ತಿ ಇವರು ಸ್ಥಳ ನಿಯುಕ್ತಿಗೊಳಿಸಲಾದ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿಗೆ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

ಶ್ರೀ ಎಂ.ಸಿ. ಕೃಷ್ಣಮೂರ್ತಿ, ಉಪನ್ಯಾಸಕರು ಅವರ ಅಮಾನತ್ತನ್ನು ರದ್ದುಪಡಿಸಿ ಕರ್ತವ್ಯಕ್ಕೆ ಸ್ಥಳನಿಯುಕ್ತಿಗೊಳಿಸಲಾದ ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿಗೆ ದೀರ್ಘಕಾಲದವರೆಗೆ ಕರ್ತವ್ಯಕ್ಕೆ ಹಾಜರಾಗದೆ ಅನಧಿಕೃತ ಗೈರು ಹಾಜರಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11ರ ಉಪಬಂಧಗಳಿಗನುಸಾರವಾಗಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರದಲ್ಲಿ ತೀರ್ಮಾನಿಸಿ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನೋಟೀಸ್‌ನ ಮೂಲಕ ಜಾರಿ ಮಾಡಿ 15 ದಿನಗಳೊಳಗಾಗಿ ವಿವರಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ ಸದರಿಯವರು ಯಾವುದೇ ವಿವರಣೆಯನ್ನು ಸಲ್ಲಿಸಿರುವುದಿಲ್ಲ ಮತ್ತು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಆದುದರಿಂದ, ಅವರ ಅನಧಿಕೃತ ಗೈರು ಹಾಜರಾತಿಯ ಬಗ್ಗೆ ದಿನಾಂಕ: 28-4-2010ರಂದು ವಿಜಯ ಕರ್ನಾಟಕ ಮತ್ತು ಕನ್ನಡಪ್ರಭ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ದಿನಾಂಕ: 8-4-2010ರಂದು ಜಾರಿ ಮಾಡಲಾದ ದೋಷಾರೋಪಣಾ ಪಟ್ಟಿಗೆ ಇದುವರೆವಿಗೂ ನೀವು ಯಾವುದೇ ಪ್ರತಿಕ್ರಿಯೆ ನೀಡದೆ ಇರುವುದರಿಂದ ಈ ನೋಟೀಸ್ ಪ್ರಕಟಣೆಯಾದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ನಿಮ್ಮ ರಕ್ಷಣಾತ್ಮಕ ಹೇಳಿಕೆಯನ್ನು ಲಿಖಿತ ಮೂಲಕ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ ಏಕಪಕ್ಷೀಯವಾಗಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿತ್ತು. ಆದರೂ ಸಹ ಸದರಿ ಉಪನ್ಯಾಸಕರು ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ.

ಆದುದರಿಂದ ಶ್ರೀ ಎಂ.ಸಿ. ಕೃಷ್ಣಮೂರ್ತಿ, ಸಿವಿಲ್ ವಿಭಾಗದ ಉಪನ್ಯಾಸಕರು (ಅನಧಿಕೃತ ಗೈರು ಹಾಜರಾತಿಯಲ್ಲಿರುವ) ಇವರು ದೀರ್ಘಕಾಲದಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವುದರಿಂದ ಸರ್ಕಾರಿ ಸೇವೆಯಲ್ಲಿ ಮುಂದುವರೆಯಲು ಅನರ್ಹರು ಎಂದು ಪರಿಗಣಿಸಿ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 89 ಡಿಟಿಇ 2011, ಬೆಂಗಳೂರು, ದಿನಾಂಕ: 25ನೇ ಜನವರಿ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಸಿ. ಕೃಷ್ಣಮೂರ್ತಿ, ಸಿವಿಲ್ ವಿಭಾಗದ ಉಪನ್ಯಾಸಕರು (ಅನಧಿಕೃತ ಗೈರು ಹಾಜರಾತಿಯಲ್ಲಿರುವ) ಮತ್ತು ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ ಇಲ್ಲಿಗೆ ವರ್ಗಾವಣೆ ಆದೇಶದಲ್ಲಿರುವ ಇವರು ದೀರ್ಘಕಾಲದಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವುದರಿಂದ ಇವರು ಸರ್ಕಾರಿ ಸೇವೆಯಲ್ಲಿ ಮುಂದುವರೆಯಲು ಅನರ್ಹರು ಎಂದು ಸರ್ಕಾರವು ಪರಿಗಣಿಸಿ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಗಳು ನಿಯಮ 8ರ ಉಪನಿಯಮ 8ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎನ್. ಜಗದೀಶ್

ಪಿ.ಆರ್. 471

ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಸಹಕಾರ ಸಚಿವಾಲಯ

ವಿಷಯ : 2011-12ನೇ ಸಾಲಿನ ಆಯವ್ಯಯದಲ್ಲಿ ಯೋಜನೇತರ ಶೀರ್ಷಿಕೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ನಿಗದಿಪಡಿಸಿರುವ ಬಾಕಿ ಮೊತ್ತ ರೂ. 25.00 ಲಕ್ಷಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸಹಕಾರ ಸಂಘಗಳ ಅಪರ ನಿಬಂಧಕರವರ ಪತ್ರ ಸಂಖ್ಯೆ: ಅನಿ-ಕೈಸಸಂ-2-105-ಅಪ್ರ-2011-12, ದಿನಾಂಕ: 26.09.2011.
2. ಸರ್ಕಾರದ ಆದೇಶ ಸಂಖ್ಯೆ:: ಸಇ 23 ಸಂಮಾಸ 2011, ದಿನಾಂಕ: 16.12.2011.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿನ ಪತ್ರದಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಪ್ರಾರಂಭವಾದಾಗಿನಿಂದಲೂ ರಾಜ್ಯದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ಸಹಕಾರ ತರಬೇತಿ ಮತ್ತು ಶಿಕ್ಷಣ ಪ್ರಚಾರ ಮತ್ತು ಪ್ರಸಿದ್ಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರ ಎಂ.ಓ.ಯು ಗೆ ಸಹಿ ಮಾಡಿರುವುದರಿಂದ ಹಾಗೂ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 57(2-ಎ)ಕ್ಕೆ ತಿದ್ದುಪಡಿ ಜಾರಿಯಾದಲ್ಲಿ ಶೇಕಡಾ 2ರಷ್ಟು ಸಹಕಾರ ಶಿಕ್ಷಣ ನಿಧಿಯನ್ನು ಸಹಕಾರ ಮಹಾಮಂಡಳಕ್ಕೆ ಹಂಚಿಕೆ ಮಾಡದೇ ಇರುವ ಸಾಧ್ಯತೆ ಇರುವುದರಿಂದ, ಕೃಷಿ ಪತ್ತಿನ ಕ್ಷೇತ್ರದಿಂದ ಸಂಗ್ರಹವಾಗುತ್ತಿದ್ದ ಸುಮಾರು ರೂ. 1.61 ಕೋಟಿ ಸಹಕಾರ ಶಿಕ್ಷಣ ನಿಧಿ ಕೊರತೆ ಉಂಟಾಗುತ್ತದೆಂದೂ, ಈ ರೂ. 1.61 ಕೋಟಿಗಳ ಕೊರತೆಯನ್ನು ತುಂಬಲು ಸಹಾಯಧನ ಮಂಜೂರು ಮಾಡುವುದು ಸೂಕ್ತವಾಗಿರುವುದರಿಂದ, ಸಹಕಾರ ತರಬೇತಿ ಮತ್ತು ಶಿಕ್ಷಣ ಶೀರ್ಷಿಕೆಯಡಿಯಲ್ಲಿ 2011-12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ. 75.00 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ 2425-00-003-0-02-101ರಡಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಕ್ಕೆ ಬಿಡುಗಡೆ ಮಾಡುವಂತೆ ಕೋರಿದ್ದು, ಮೇಲೆ ಓದಲಾದ (2)ರಲ್ಲಿನ ಆದೇಶದಲ್ಲಿ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಬಾಕಿ ಇರುವ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡಲು ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 23 ಸಂಮಾಸ 2011, ಬೆಂಗಳೂರು, ದಿನಾಂಕ: 24-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ 2011-12ನೇ ಸಾಲಿನ ಆಯವ್ಯಯದಲ್ಲಿ ಯೋಜನೇತರ ಲೆಕ್ಕಶೀರ್ಷಿಕೆ 2425-00-003-0-02 ಸಹಕಾರ ಮತ್ತು ಶಿಕ್ಷಣ -101- ಸಹಾಯಾನುದಾನ (ಯೋಜನೇತರ) ಅಡಿಯಲ್ಲಿ ಒದಗಿಸಿರುವ ಅನುದಾನ ರೂ. 75.00 ಲಕ್ಷಗಳಲ್ಲಿ ಬಿಡುಗಡೆ ಮಾಡಲು ಬಾಕಿ ಇರುವ ರೂ. 25.00 ಲಕ್ಷಗಳ (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತಕ್ಕೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ಹಣವನ್ನು ಡ್ರಾ ಮಾಡುವ ಹಣ ಸಂದಾಯ ರಸೀದಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಸಹಿ ಮತ್ತು ಸಹಕಾರ ಸಂಘಗಳ ನಿಬಂದಕರು, ಕರ್ನಾಟಕ ರಾಜ್ಯ ಬೆಂಗಳೂರು ರವರ ಮೇಲು ಸಹಿ ಪಡೆದು ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ: FD-1-TFP-2011, Dated: 28.09.2011 ರನ್ವಯ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ II ವೆಚ್ಚ-2/2012, ದಿನಾಂಕ: 16.01.2012ರನ್ವಯ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 472

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಕಸಂವಾಪ್ರ 1401 ಕಸಧ 2011, ಬೆಂಗಳೂರು ದಿನಾಂಕ : 23-01-2012

ವಿಷಯ : ಬರಪೀಡಿತ ಜಿಲ್ಲೆಗಳಲ್ಲಿ ಉತ್ಸವಗಳನ್ನು ಆಚರಿಸದೇ ಇರುವ ಬಗ್ಗೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ರಾಜ್ಯಾದ್ಯಂತ ಉತ್ಸವಗಳನ್ನು ಆಚರಿಸಲಾಗುತ್ತಿದೆ. ಇವುಗಳಲ್ಲಿ ಪ್ರತಿಷ್ಠಿತ ಬೃಹತ್ ಉತ್ಸವಗಳಾದ ಹಂಪಿ ಉತ್ಸವ ಹಾಗೂ ಕದಂಬೋತ್ಸವ, ಹೊಯ್ಸಳ ಉತ್ಸವ, ಚಾಲುಕ್ಯ ಉತ್ಸವ, ಲಕ್ಕುಂಡಿ ಉತ್ಸವ, ಕಿತ್ತೂರು ಉತ್ಸವ, ಧಾರವಾಡ ಉತ್ಸವ, ಬಸವ ಉತ್ಸವ, ಕನಕಗಿರಿ, ಆನೆಗುಂದಿ ಹಾಗೂ ಇತರೆ ಜಿಲ್ಲಾ ಉತ್ಸವಗಳು ಸೇರಿವೆ. 2011ನೇ ಸಾಲಿನಲ್ಲಿ ರಾಜ್ಯದಲ್ಲಿ ಮಳೆಯ ಅಭಾವದಿಂದಾಗಿ ರಾಜ್ಯದ 99 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಇಂತಹ ಜಿಲ್ಲೆಗಳಲ್ಲಿ ಉತ್ಸವ, ವೈಭವ ಮತ್ತು ಸಂಭ್ರಮದಂತಹ ಕಾರ್ಯಕ್ರಮಗಳನ್ನು ಸರ್ಕಾರದ ವತಿಯಿಂದ ಆಚರಿಸುವುದು ಸೂಕ್ತವಲ್ಲವೆಂದು ಸರ್ಕಾರವು ನಿರ್ಣಯಿಸಿದೆ. ಈ ಬರಪೀಡಿತ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ 2011-12ನೇ ಸಾಲಿನಲ್ಲಿ ಇಂತಹ ಉತ್ಸವಗಳನ್ನು ಈ ವರ್ಷ ಆಚರಿಸುವುದನ್ನು ತಕ್ಷಣದಿಂದ ಕೈಬಿಡುವಂತೆ ಈ ಮೂಲಕ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಹೆಚ್.ವಿ. ರಾಮಚಂದ್ರರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ಪಿ.ಆರ್. 473

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಸಚಿವಾಲಯ

ವಿಷಯ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ವಿಶೇಷ ಆರ್ಥಿಕ ಅಧಿಕಾರ ನೀಡುವ ಬಗ್ಗೆ-ಆದೇಶ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 2 ಟಿಎಫ್‌ಪಿ 2010, ದಿನಾಂಕ : 30-04-2010.

2. ಅ.ಸ.ಪತ್ರ ಸಂಖ್ಯೆ : ಕಸನಿ/29/ಲೆಕ್ಕ-4/2009-10, ದಿನಾಂಕ : 22-08-2009.

3. ದಿನಾಂಕ : 22-11-2011 ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 30-04-2010ರ ಆದೇಶದಲ್ಲಿ ಸರ್ಕಾರದ ಇಲಾಖೆಯ ಇಲಾಖಾ ಮುಖ್ಯಸ್ಥರುಗಳಿಗೆ ಹಾಗೂ ವಿವಿಧ ಮಟ್ಟದ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರವನ್ನು ಪರಿಷ್ಕರಿಸಿ ಪ್ರತ್ಯಾಯೋಜಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರೋತ್ಸಾಹ ನೀಡುವ ಇಲಾಖೆಯಾಗಿದ್ದು, ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಂಘ ಸಂಸ್ಥೆಗಳಿಗೆ, ಸಾಹಿತ್ಯಿಕ ಸಂಸ್ಥೆಗಳಿಗೆ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ನಡೆಸಲು ಹೆಚ್ಚಿನ ಆರ್ಥಿಕ ಅಧಿಕಾರ ನೀಡುವಂತೆ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ವಿಷಯದ ಬಗ್ಗೆ ದಿನಾಂಕ : 22-11-2011 ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 112 ಕಸನಿ 2009, ಬೆಂಗಳೂರು, ದಿನಾಂಕ : 23-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರು/ನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಸಹಾಯಕ ನಿರ್ದೇಶಕರುಗಳಿಗೆ ಅನುಬಂಧದಲ್ಲಿ ಸೂಚಿಸಿದಂತೆ ವಿಶೇಷ ಆರ್ಥಿಕ ಅಧಿಕಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ : ಆಇ/519/ವೆಚ್ಚ-7/2011, ದಿನಾಂಕ : 28-12-2011 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಉಪ ಕಾರ್ಯದರ್ಶಿ

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ದಿನಾಂಕ 23-01-2012ರ ಸರ್ಕಾರಿ ಆದೇಶ ಸಂಖ್ಯೆ ಕಸಂವಾಪ್ರ 112 ಕಸನಿ 2009ರ

ಅನುಬಂಧ

ಕ್ರಮ ಸಂಖ್ಯೆ	ವಿಶೇಷ ಆರ್ಥಿಕ ಅಧಿಕಾರದ ವಿಷಯಗಳು	ಪ್ರತ್ಯಾಯೋಜಿಸಿದ ಅಧಿಕಾರ	
		ಆಯುಕ್ತರು/ನಿರ್ದೇಶಕರು	ಸಹಾಯಕ ನಿರ್ದೇಶಕರು
1.	ನೋಂದಾಯಿತ ಸಂಘ ಸಂಸ್ಥೆಗಳಿಗೆ ಸಾಹಿತ್ಯ ಸಾಂಸ್ಕೃತಿಕ ಹಾಗೂ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಹಾಯಧನ	ಪ್ರತಿಯೊಂದು ನೋಂದಾಯಿತ ಸಂಸ್ಥೆಗೆ ಪ್ರತಿ ಕಾರ್ಯಕ್ರಮಕ್ಕೆ ರೂ. 1.00 ಲಕ್ಷ ಗರಿಷ್ಠ ಹಾಗೂ ಮಾಸಿಕ ರೂ. 50.00 ಲಕ್ಷ ಮೀರದಂತೆ ಬಿಡುಗಡೆ ಮಡುವುದು.	ಪ್ರತಿಯೊಂದು ನೋಂದಾಯಿತ ಸಂಸ್ಥೆಗೆ/ಪ್ರತಿ ಕಾರ್ಯಕ್ರಮಕ್ಕೆ ರೂ. 10,000/- ಗರಿಷ್ಠ ಹಾಗೂ ಮಾಸಿಕ ರೂ. 1.00ಲಕ್ಷ ಮೀರದಂತೆ ಬಿಡುಗಡೆ ಮಾಡುವುದು.
2.	ಸರ್ಕಾರದಿಂದ ರಚಿಸಲಾದ ಟ್ರಸ್ಟ್‌ಗಳಿಗೆ ಅನುದಾನ (ಕ್ರಿಯಾ ಯೋಜನೆಯಲ್ಲಿ ಸೇರಿದ್ದಲ್ಲಿ)	ಕ್ರಿಯಾ ಯೋಜನೆಗೆ ಆಯುಕ್ತರಿಂದ ಅನುಮೋದನೆ ಪಡೆದಿದ್ದಲ್ಲಿ ಒಟ್ಟು ಅನುದಾನವನ್ನು ಎರಡು ಕಂತುಗಳಲ್ಲಿ ಹಣ ಬಳಕೆ ಪ್ರಮಾಣ ಪತ್ರ, ಲೆಕ್ಕ ಪರಿಶೋಧಕರ ವರದಿ ಪಡೆಯುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡುವುದು.	---
3.	ನೋಂದಾಯಿತ ಸಂಘ ಸಂಸ್ಥೆಗಳಿಗೆ ಸಾಂಸ್ಕೃತಿಕ/ಬಯಲು ರಂಗಮಂದಿರ ನಿರ್ಮಾಣಕ್ಕೆ ಸಹಾಯಧನ	ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ಪಡೆದು ರೂ. 5.00ಲಕ್ಷಗಳವರೆಗೆ ಸಹಾಯಧನ ಬಿಡುಗಡೆ ಮಾಡುವುದು.	---
4.	ಪರಿಶಿಷ್ಟ ಜಾತಿ ಉಪಯೋಜನೆ/ಪರಿಶಿಷ್ಟ ಪಂಗಡ ಉಪಯೋಜನೆಯಡಿ ನೋಂದಾಯಿತ ಸಂಘ ಸಂಸ್ಥೆಗಳಿಗೆ ಸಾಹಿತ್ಯ ಸಾಂಸ್ಕೃತಿಕ ಹಾಗೂ ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಹಾಯಧನ	ಪ್ರತಿಯೊಂದು ಸಂಸ್ಥೆಗೆ/ಪ್ರತಿ ಕಾರ್ಯಕ್ರಮಕ್ಕೆ ಗರಿಷ್ಠ ರೂ. 1.00 ಲಕ್ಷ ಹಾಗೂ ಮಾಸಿಕ ರೂ. 50.00 ಲಕ್ಷಕ್ಕೆ ಮೀರದಂತೆ ಬಿಡುಗಡೆ ಮಾಡುವುದು.	ಪ್ರತಿಯೊಂದು ಸಂಸ್ಥೆಗೆ/ಪ್ರತಿ ಕಾರ್ಯಕ್ರಮಕ್ಕೆ ಗರಿಷ್ಠ ರೂ. 10,000/- ಹಾಗೂ ಮಾಸಿಕ ರೂ. 1.00ಲಕ್ಷಕ್ಕೆ ಮೀರದಂತೆ ಬಿಡುಗಡೆ ಮಾಡುವುದು.

5.	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸಂಘ ಸಂಸ್ಥೆಗಳಿಗೆ, ಸಾಂಸ್ಕೃತಿಕ ಹಾಗೂ ಬಯಲು ರಂಗಮಂದಿರ ನಿರ್ಮಾಣಕ್ಕೆ ಸಹಾಯಧನ	ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ಪಡೆದು ರೂ. 5.00 ಲಕ್ಷಗಳವರೆಗೆ ಬಿಡುಗಡೆ ಮಾಡುವುದು.	---
6.	ಅಕಾಡೆಮಿಗಳಿಗೆ ಅನುದಾನ (ಕ್ರಿಯಾಯೋಜನೆಯಲ್ಲಿ ಸೇರಿದ್ದಲ್ಲಿ)	ಆಯವ್ಯಯ ಅವಕಾಶದ ಮಿತಿಯೊಳಗೆ ಒಟ್ಟು ಅನುದಾನವನ್ನು 2 ಕಂತಿನಲ್ಲಿ ಹಣ ಬಳಕೆ ಪ್ರಮಾಣ ಪತ್ರ, ಲೆಕ್ಕಪರಿಶೋಧಕರ ವರದಿ ಪಡೆಯುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡುವುದು.	---
7.	ಪ್ರಾಯೋಜಿತ ಕಾರ್ಯಕ್ರಮಗಳು, ಯುವ ಸೌರಭ, ಚಿಗುರು, ಕಾವ್ಯ, ಕಾವೇರಿ ಮನೆಯಂಗಳದಲ್ಲಿ ಮಾತುಕತೆ ಇತ್ಯಾದಿ ಸರ್ಕಾರಿ ಕಾರ್ಯಕ್ರಮಗಳಿಗೆ ಅನುದಾನ	ಆಯವ್ಯಯ ಅವಕಾಶದ ಮಿತಿಯೊಳಗೆ ಪ್ರತಿಯೊಂದು ಕಾರ್ಯಕ್ರಮಕ್ಕೆ ರೂ. 10,00 ಲಕ್ಷಗಳವರೆಗೆ ಬಿಡುಗಡೆ ಮಾಡುವುದು.	ಪ್ರತಿಯೊಂದು ಅನುಮೋದಿತ ಕಾರ್ಯಕ್ರಮಕ್ಕೆ ರೂ. 50,000/– ಮೀರದಂತೆ ಬಿಡುಗಡೆ ಮಾಡುವುದು.
8.	ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಜಿಲ್ಲಾ ರಂಗಮಂದಿರಗಳ ದುರಸ್ತಿ/ನಿರ್ವಹಣೆ ಇತ್ಯಾದಿ	ಪ್ರತಿ ರಂಗಮಂದಿರ/ಭವನ/ ಕಲಾಕ್ಷೇತ್ರಗಳಿಗೆ ರೂ. 20.00 ಲಕ್ಷ ಮೀರದಂತೆ ಅನುದಾನ ಬಿಡುಗಡೆ ಮಾಡುವುದು.	---
9.	ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ	ಪ್ರತಿ ಹಸ್ತ ಪ್ರತಿ ಮುದ್ರಣಕ್ಕೆ ರೂ. 50,000/– ಮೀರದಂತೆ ಅನುದಾನ ಬಿಡುಗಡೆ ಮಾಡುವುದು.	---
10.	ಸಂಘ ಸಂಸ್ಥೆಗಳು, ಉತ್ಸವ ಸಮಿತಿಗಳು ಹಮ್ಮಿಕೊಳ್ಳುವ ಸಾಂಸ್ಕೃತಿಕ, ಸಾಹಿತ್ಯ, ನಾಟಕ ಇತ್ಯಾದಿ ಕಾರ್ಯಕ್ರಮಗಳಿಗೆ ತಂಡಗಳ ಪ್ರಾಯೋಜನೆ	ಪ್ರತಿ ಕಾರ್ಯಕ್ರಮಕ್ಕೆ 5 ವಿವಿಧ ತಂಡಗಳನ್ನು ಗರಿಷ್ಠ ರೂ. 1.00 ಲಕ್ಷ ಆರ್ಥಿಕ ಮಿತಿಯೊಳಗೆ ಪ್ರಾಯೋಜಿಸುವುದು.	---
11.	ಇಲಾಖಾ ಪ್ರಕಟಣೆಗಳು, ಕಿರುಹೊತ್ತಿಗೆಗಳು ಮುದ್ರಣ, ಪ್ರಕಟಿತ ಸೃಜನೇತರ ಕೃತಿಗಳಿಗೆ ಸಹಾಯಧನ	ಸರ್ಕಾರದ ಆದೇಶ ಸಂಖ್ಯೆ : ಆಇ 1 ಟಿಎಫ್‌ಪಿ 2010, ದಿನಾಂಕ : 30–04–2010ರ ಕ್ರಮ ಸಂಖ್ಯೆ 19(1) ಮತ್ತು (11) ರಲ್ಲಿರುವಂತೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.	---

ಷರತ್ತುಗಳು :–

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರನ್ವಯ ಹಾಗೂ ಸಂಬಂಧಪಟ್ಟ ನಿಯಮಗಳನ್ನು ಪಾಲಿಸುವುದು.
2. ಅನುದಾನದ ಲಭ್ಯತೆ ಆರ್ಥಿಕ ಅಧಿಕಾರ ಮಿತಿ ಮತ್ತು ಆರ್ಥಿಕ ಮಿತವ್ಯಯ ಆದೇಶ ಇವುಗಳನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
3. ಸರ್ಕಾರೇತರ ಸಂಸ್ಥೆಗಳಿಗೆ ಅನುದಾನದ ಬಿಡುಗಡೆ ಮಾಡುವಾಗ ಹಣದ ಸದುಪಯೋಗ ಆಗುವಂತೆ ನೋಡಿಕೊಳ್ಳುವುದು ಹಾಗೂ ಅನುದಾನ ಸದ್ಬಳಕೆಯಾಗಿರುವ ಬಗ್ಗೆ ಸರಿಯಾದ ಲೆಕ್ಕಪತ್ರಗಳನ್ನು ಇಡುವುದರ ಜೊತೆಗೆ ಲೆಕ್ಕಪರಿಶೋಧನೆ ಮಾಡತಕ್ಕದ್ದು.

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಉಪ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಪಿ.ಆರ್. 474

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಕೆಹೆಚ್‌ಎಸ್‌ಡಿಆರ್‌ಪಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ವೇತನ ಶ್ರೇಣಿ ರೂ. 20025–28275 ಯನ್ನು ಹೊಂದಿರುವ ಅಧಿಕಾರಿಗಳಿಗೆ ನಿವಾಸಕ್ಕೆ ದೂರವಾಣಿ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಎಸ್‌ಪಿಸಿ/ಓಎಸ್‌ಡಿ–3/2000–01, ದಿನಾಂಕ : 04–11–2000.

2. ಸರ್ಕಾರದ ತಿದ್ದೋಲೆ ಸಂಖ್ಯೆ : ಆ.ಇ4 ಬಿ.ಇ.ಎಂ. 2007, ದಿನಾಂಕ : 10–09–2007.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಕರ್ತವ್ಯಾಧಿಕಾರಿಗಳಿಗೆ ನಿವಾಸಕ್ಕೆ ದೂರವಾಣಿ ಸೌಲಭ್ಯವನ್ನು ಎಸ್‌ಟಿಡಿ ಕರೆಗಳನ್ನು ಹೊರತುಪಡಿಸಿ ಒದಗಿಸುವ ಬಗ್ಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ತಿದ್ದೋಲೆಯನ್ವಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ವೇತನ ಶ್ರೇಣಿ (ರೂ. 20025–28275) ಯನ್ನು ಹೊಂದಿರುವ ಸರ್ಕಾರಿ ಅಧಿಕಾರಿಗಳು ಕಛೇರಿಯ ಹಾಗೂ ನಿವಾಸದ ದೂರವಾಣಿಗಳನ್ನು ಹೊಂದಲು ಅರ್ಹರಾಗಿರುತ್ತಾರೆಂದು ಮಾರ್ಪಡಿಸಿದೆ.

ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕ್ರಮಾಧಿಕಾರಿಗಳಿಗೆ ಇದೇ ರೀತಿಯ ಸೌಲಭ್ಯವನ್ನು ಒದಗಿಸುವ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕೆಹೆಚ್‌ಎಸ್‌ಡಿಆರ್‌ಪಿ/ಸಿಎಓ/10/ದೂರವಾಣಿ/11-12, ಬೆಂಗಳೂರು, ದಿನಾಂಕ : 05-01-2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ವೇತನ ಶ್ರೇಣಿ ರೂ. 20025-28275 ಹಾಗೂ ಅದಕ್ಕಿಂತ ಮೇಲ್ಪಟ್ಟ ವೇತನ ಶ್ರೇಣಿಯನ್ನು ಹೊಂದಿರುವ ಸರ್ಕಾರಿ ಅಧಿಕಾರಿಗಳು ಮತ್ತು ಯೋಜನೆಯ ಎಲ್ಲಾ ಕಾರ್ಯಕ್ರಮಾಧಿಕಾರಿಗಳ ನಿವಾಸದ ದೂರವಾಣಿ ವೆಚ್ಚ ಮತ್ತು ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ವೆಚ್ಚವೂ ಸೇರಿದಂತೆ ಮಾಸಿಕ ಗರಿಷ್ಠ ವೆಚ್ಚ ರೂ. 1200-00 ಗಳಿಗೆ ಸೀಮಿತಗೊಳಿಸಿ ಯೋಜನೆಯಿಂದ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಎನ್. ರಮೇಶ್
ಸರ್ಕಾರದ ಉಪ ಕಾರ್ಯದರ್ಶಿ (ಪ್ರ)
ಕೆಹೆಚ್‌ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿ.ಆರ್. 475

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ಕೊಪ್ಪ ಅರಣ್ಯ ವಿಭಾಗದಿಂದ ಹೂಬಿಟ್ಟ ಮತ್ತು ಒಣ ಬೊಂಬುಗಳನ್ನು ಕಡಿತಲೆ ಮಾಡಿ ಸಾಗಾಣಿಕೆ ಮಾಡಲು ಕಾಲಾವಕಾಶ ವಿಸ್ತರಿಸುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಅಪಜೀ 16 ಎಫ್‌ಡಿಪಿ 2008, ದಿನಾಂಕ: 03/12/2008.
2. ಸರ್ಕಾರದ ಪತ್ರ ಸಂಖ್ಯೆ: ಅಪಜೀ 16 ಎಫ್‌ಡಿಪಿ 2008, ದಿನಾಂಕ: 18/01/2010.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಪತ್ರ ಸಂಖ್ಯೆ: ಎ7/ಬಿಎಂಜಿ/ಸಿಆರ್-103:2010-11, ದಿನಾಂಕ: 11/12-1-2012.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ: ಮೈಸೂರು ಕಾಗದ ಕಾರ್ಖಾನೆಗೆ 80,000 ಮೆಟ್ರಿಕ್ ಟನ್ ಹೂಬಿಟ್ಟ ಮತ್ತು ಒಣಗಿದ ಬೊಂಬುಗಳನ್ನು ಪ್ರತಿ ಮೆಟ್ರಿಕ್ ಟನ್‌ಗೆ ರೂ. 300-00 ಸೀನಿಯರೇಜ್ ದರದಲ್ಲಿ ಒದಗಿಸಲು ಆದೇಶ ಮಾಡಲಾಗಿತ್ತು. ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಪತ್ರದಲ್ಲಿ ಹೂಬಿಟ್ಟ ಮತ್ತು ಒಣಗಿದ ಬೊಂಬುಗಳನ್ನು ಲಭ್ಯತೆಯ ಆಧಾರದ ಮೇಲೆ ಕಟಾವು ಮಾಡಿ ಒದಗಿಸಲು ಕಾಲಾವಕಾಶವನ್ನು ಮೇ 2011ರವರೆಗೆ ವಿಸ್ತರಿಸಲಾಗಿತ್ತು. ಮೇಲೆ (3) ರಲ್ಲಿ ಓದಲಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಪತ್ರಗಳಲ್ಲಿ ಈವರೆವಿಗೆ 7,775 ಮೆಟ್ರಿಕ್ ಟನ್ ಕಟಾವಣೆ ಮತ್ತು ಸಾಗಾಣಿಕೆ ಮಾಡಲಾಗಿದ್ದು ಉಳಿಕೆ 72,225 ಮೆಟ್ರಿಕ್ ಟನ್ (ಎಪ್ಪತ್ತೆರಡು ಸಾವಿರದ ಇನ್ನೂರ ಇಪ್ಪತ್ತೈದು ಮಾತ್ರ) ಒಣ ಬೊಂಬುಗಳ ಸಂಗ್ರಹಣೆ ಕಾಮಗಾರಿಯನ್ನು ಪೂರ್ಣಗೊಳಿಸಲು ಈ ಕೆಳಕಂಡಂತೆ ಕಾಲಾವಕಾಶವನ್ನು ದಿನಾಂಕ: 30/06/2012ರ ವರೆಗೆ ವಿಸ್ತರಿಸುವಂತೆ ಕೋರಿರುತ್ತಾರೆ.

ಮಾರ್ಚ್ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ.50 ರಷ್ಟು

ಮೇ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ. 25 ರಷ್ಟು

ಜೂನ್ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ.25 ರಷ್ಟು

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 96 ಎಫ್‌ಡಿಪಿ 2011 ಬೆಂಗಳೂರು, ದಿನಾಂಕ: 21/01/2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2010-11ನೇ ಸಾಲಿನಲ್ಲಿ ಮೆ: ಮೈಸೂರು ಕಾಗದ ಕಾರ್ಖಾನೆಗೆ 80,000 ಮೆಟ್ರಿಕ್ ಟನ್ ಒಣಗಿದ ಮತ್ತು ಹೂ ಬಿಟ್ಟ ಬೊಂಬುಗಳ ಹಂಚಿಕೆ ಮಾಡಿದ್ದು ಅದರಲ್ಲಿ ಬಾಕಿ ಇರುವ 72,225.00 (ಎಪ್ಪತ್ತೆರಡು ಸಾವಿರದ ಇನ್ನೂರ ಇಪ್ಪತ್ತೈದು) ಮೆಟ್ರಿಕ್ ಟನ್ ಒಣ ಬೊಂಬು ಸಂಗ್ರಹಣೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿ ಮಾಡಿದಂತಹ ಅವಧಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕೋರಿಕೆಯ ಮೇರೆಗೆ ಈ ಕೆಳಕಂಡಂತೆ ವಿಸ್ತರಿಸಿದೆ.

ಮಾರ್ಚ್ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ.50 ರಷ್ಟು

ಮೇ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ.25 ರಷ್ಟು

ಜೂನ್ 2012ರ ಅಂತ್ಯದವರೆಗೆ ಬಾಕಿ ಉಳಿದ ಸಂಗ್ರಹಣೆಯ ಶೇ.25 ರಷ್ಟು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಆರ್. ಅನಂತರಾಮು
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. 476

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ನಾಗಠಾಣ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010, ದಿನಾಂಕ: 28/09/2011.

2. ದಿನಾಂಕ: 18/01/2011 ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/265, ದಿನಾಂಕ: 18/01/2012.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ.350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ.264.00 ಲಕ್ಷಗಳ ಅಂದಾಜುಮೊತ್ತದ ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ನಾಗಠಾಣ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಏರಿ, ತೂಬು ಹಾಗೂ ಕೋಡಿ ದುರಸ್ತಿ, ನಾಲೆಗಳ ಮತ್ತು ಉಪಕಾಲುವೆಗಳ ದುರಸ್ತಿ ಔಟ್‌ಲೆಟ್ ಹಾಗೂ ಸಿ.ಡಿ. ಕಾಮಗಾರಿ ಇತ್ಯಾದಿಗಳನ್ನು ಕೈಗೊಳ್ಳಲು ಅವಕಾಶ ಮಾಡಿದೆ.

ಲೆಕ್ಕಶೀರ್ಷಿಕೆ "4702-00-101-1-12-059-XIII ನೇ ಹಣಕಾಸು ಆಯೋಗದ ಅನುದಾನದಡಿ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ. 264.00 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011 (ತಾಂತ್ರಿಕ) (3) ಬೆಂಗಳೂರು, ದಿನಾಂಕ: 27ನೇ ಜನವರಿ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ನಾಗಠಾಣ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ರೂ. 264.00 ಲಕ್ಷ (ರೂ. ಇನ್ನೂರ ಅರವತ್ತನಾಲ್ಕು ಲಕ್ಷ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವಿಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಈ ಕಾಮಗಾರಿಯ ಅಂದಾಜನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿ ಪಡೆಯುವುದು.
3. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
4. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
5. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
6. ಒಂದುವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
7. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
8. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
9. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
10. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
11. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
12. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 477

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಬರಟಗಿ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010, ದಿನಾಂಕ: 28/09/2011.

2. ದಿನಾಂಕ: 18/01/2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/265, ದಿನಾಂಕ: 18/01/2012.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ. 350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ. 235.00 ಲಕ್ಷಗಳ ಅಂದಾಜುಮೊತ್ತದ ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಬರಟಗಿ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಏರಿ, ತೂಬು ಹಾಗೂ ಕೋಡಿ ದುರಸ್ತಿ, ನಾಲೆಗಳ ಮತ್ತು ಉಪಕಾಲುವೆಗಳ ದುರಸ್ತಿ ಜೌಟ್‌ಲೆಟ್ ಹಾಗೂ ಸಿ.ಡಿ. ಕಾಮಗಾರಿ ಇತ್ಯಾದಿಗಳನ್ನು ಕೈಗೊಳ್ಳಲು ಅವಕಾಶ ಮಾಡಿದೆ.

ಲೆಕ್ಕಶೀರ್ಷಿಕೆ "4702-00-101-1-12-059- XIII ನೇ ಹಣಕಾಸು ಆಯೋಗದ ಅನುದಾನದಡಿ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ. 235.50 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011 (ತಾಂತ್ರಿಕ) (2) ಬೆಂಗಳೂರು, ದಿನಾಂಕ: 23ನೇ ಜನವರಿ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಬರಟಗಿ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ರೂ.235.50 ಲಕ್ಷ (ರೂ. ಇನ್ನೂರ ಮೂವತ್ತೈದು ಲಕ್ಷ ಐವತ್ತು ಸಾವಿರ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಈ ಕಾಮಗಾರಿಯ ಅಂದಾಜನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿ ಪಡೆಯುವುದು.
3. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
4. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
5. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
6. ಒಂದುವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
7. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
8. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆ ದುಕೊಳ್ಳತಕ್ಕದ್ದು.
9. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
10. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
11. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
12. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 478

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಚಿತ್ತವಾಡಗಿ ಮಧ್ಯಮ ನೀರಾವರಿ ಸುಧಾರಣೆ ಕಾಮಗಾರಿಯ ಅಂದಾಜಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸನೀಇ 108 ಮಸಾವಿ 2010, ದಿನಾಂಕ: 28/09/2011.

2. ದಿನಾಂಕ: 18/01/2011ರ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ(ಉ)ವಲಯ/ಬಿಜೆಪಿ/ಎಇ-6/2011-12/265, ದಿನಾಂಕ: 18/01/2012.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹದಿಮೂರನೇ ಹಣಕಾಸು ಆಯೋಗದಡಿ ರೂ. 350.00 ಕೋಟಿ ಅಂದಾಜು ವೆಚ್ಚದ 631 ಕಾಮಗಾರಿಗಳ ಅನುಷ್ಠಾನಕ್ಕೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ರೂ. 407.00 ಲಕ್ಷಗಳ ಅಂದಾಜುಮೊತ್ತದ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಚಿತ್ತವಾಡಗಿ ಮಧ್ಯಮ ನೀರಾವರಿ ಸುಧಾರಣೆ ಕಾಮಗಾರಿಯು ಸೇರಿರುತ್ತದೆ. ಈ ಕಾಮಗಾರಿಯ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2011-12ನೇ ಸಾಲಿಗೆ ಮುಂದುವರೆಸಿರುವ 2010-11ನೇ ಸಾಲಿನ ದರಪಟ್ಟಿಯ ದರಗಳನ್ನಳವಡಿಸಿ ತಯಾರಿಸಲಾಗಿದೆ. ಇದರಲ್ಲಿ ಕೆರೆಯ ಏರಿ ದುರಸ್ತಿ, ಎಡದಂಡೆ ಹಾಗೂ ಬಲದಂಡೆ ನಾಲೆಗಳ ದುರಸ್ತಿ, ಉಪಕಾಲುವೆಗಳ ಮತ್ತು ಅಡ್ಡಮೋರಿಗಳ ದುರಸ್ತಿ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿದೆ. ಈ ಕಾಮಗಾರಿಯ ಅಂದಾಜಿಗೆ ದಿನಾಂಕ: 12/10/2011 ರಂದು ನಡೆದಿರುವ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಕೆಲವು ಷರಾಗಳೊಂದಿಗೆ ತೀರುವಳಿ ನೀಡಲಾಗಿದೆ.

ಲೆಕ್ಕಶೀರ್ಷಿಕೆ "4702-00-101-1-12-059- XIII ನೇ ಹಣಕಾಸು ಆಯೋಗದ ಅನುದಾನದಡಿ ಕೃಷಿಗೆ ನೇರವಾಗಿ ಸಂಬಂಧಿಸಿದ ಕೆರೆ ನೀರಾವರಿ ಯೋಜನೆಗಳ ಜೀರ್ಣೋದ್ಧಾರ-ಇತರ ಖರ್ಚುಗಳು" ರಡಿ ರೂ. 407.00 ಲಕ್ಷಗಳ ಅಂದಾಜುಮೊತ್ತದ ಈ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಗಣಿಸಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 117 ಮಸಾವಿ 2011 (ತಾಂತ್ರಿಕ) (1) ಬೆಂಗಳೂರು, ದಿನಾಂಕ: 27ನೇ ಜನವರಿ 2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಚಿತ್ತವಾಡಗಿ ಮಧ್ಯಮ ನೀರಾವರಿ ಸುಧಾರಣೆ ಕಾಮಗಾರಿಯ ರೂ.407.00 ಲಕ್ಷ (ರೂ. ನಾಲ್ಕು ನೂರ ಏಳು ಲಕ್ಷ ಮಾತ್ರ) ಮೊತ್ತದ ಅಂದಾಜು ಪಟ್ಟಿಗೆ ಹದಿಮೂರನೇ ಹಣಕಾಸು ಆಯೋಗದ ಅನುದಾನದಡಿ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಫಲಶೃತಿಗಳನ್ನು ಹಾಗೂ ಕಾಮಗಾರಿಯ ವಿವಿಧ ಹಂತಗಳ ವೀಡಿಯೋ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು.
2. ಈ ಕಾಮಗಾರಿಯ ಅಂದಾಜನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ ಸಭೆಯಲ್ಲಿ ಮಂಡಿಸಿ ತೀರುವಳಿ ಪಡೆಯುವುದು.
3. ಅಂದಾಜಿಗೆ ತೀರುವಳಿ ನೀಡುವಾಗ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯು ಗಮನಿಸಿರುವ ಅಂಶಗಳಂತೆ ಕ್ರಮ ಕೈಗೊಳ್ಳತಕ್ಕದ್ದು.
4. ಯೋಜನೆಯ ಅನುಷ್ಠಾನ ಕುರಿತು 3ನೇ ವ್ಯಕ್ತಿ/ಸಂಸ್ಥೆಯ ತಪಾಸಣೆಗೆ ಒಳಪಡಿಸಿ, ವರದಿಯನ್ನು ಪಡೆಯುವುದು.
5. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
6. ಒಂದುವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
7. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
8. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆ ದುಕೊಳ್ಳತಕ್ಕದ್ದು.
9. ಕಾಮಗಾರಿ ಪೂರ್ಣಗೊಂಡ ಕೂಡಲೇ ಪೂರ್ಣತಾ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
10. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
11. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
12. ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 479

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಎಂ.ಎಸ್.ಜಯರಾಂ, ಜಂಟಿ ನಿರ್ದೇಶಕರು, ರಾಜ್ಯ ಲೆಕ್ಕಪತ್ರ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆ - ವಿಚಾರಣಾಧಿಕಾರಿಗಳಾದ ನ್ಯಾಯಮೂರ್ತಿ ಫ.ನಿ.ಗುಡ್ಡಾಕಾರ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರಿಗೆ ಸಂಭಾವನೆ ಪಾವತಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ 114 ರಾಲೆಪ 2008 ದಿನಾಂಕ:03-09-2011.
2) ವಿಚಾರಣಾಧಿಕಾರಿಗಳ ಮನವಿ ಮತ್ತು ವಿಚಾರಣಾ ವರದಿ ದಿನಾಂಕ:20-12-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಶ್ರೀ ಎಂ.ಎಸ್. ಜಯರಾಂ, ಜಂಟಿ ನಿಯಂತ್ರಕರು ಇವರು ಬೆಳಗಾವಿ ಜಿಲ್ಲಾ ಪಂಚಾಯತ್‌ನಲ್ಲಿ ಮುಖ್ಯ ಲೆಕ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ವಿವಿಧ ಯೋಜನೆಗಳಡಿ ಅಭಿವೃದ್ಧಿ ಕಾರ್ಯಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲು ಅನಗತ್ಯ ವಿಳಂಬ ಮಾಡುವ ಮೂಲಕ ಅಭಿವೃದ್ಧಿ ಕಾರ್ಯಗಳು ಕುಂಟಿತಗೊಳ್ಳಲು ಕಾರಣರಾದ; ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ಹಾಗೂ ಕರ್ನಾಟಕ (ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ) ಕಾಯ್ದೆ 1999ರ ವಿಧಿ ವಿಧಾನಗಳನ್ನು ಪಾಲಿಸದೆ ಇದ್ದ ಪ್ರಯುಕ್ತ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳಲು ಕಾರಣರಾದ ಆರೋಪಕ್ಕೆ ಸಂಬಂಧಪಟ್ಟಂತೆ ಇಲಾಖಾ ವಿಚಾರಣೆ ನಡೆಸಲು ನ್ಯಾಯಮೂರ್ತಿ ಫ.ನಿ. ಗುಡ್ಡಾಕಾರ, ನಿವೃತ್ತ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿದ್ದು ಅವರು ವಿಚಾರಣೆ ನಡೆಸಿ ಮೇಲೆ (2)ರಲ್ಲಿ ಓದಲಾದ ದಿನಾಂಕ 20-12-2011ರಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ ಈ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳು ಅರ್ಜಿ ಸಲ್ಲಿಸಿ ರೂ. 15,000/-ಗಳ ಸಂಭಾವನೆಯನ್ನು ಪಾವತಿಸುವಂತೆ ಕೋರಿರುತ್ತಾರೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 26 ಸೇಇವಿ 2011, ದಿನಾಂಕ26-7-2011ರಂತೆ ಪ್ರತಿ ಇಲಾಖಾ ವಿಚಾರಣೆಗೆ ರೂ.15,000/-ಗಳ ಸಂಭಾವನೆಯನ್ನು (ವಾಹನ ಭತ್ಯೆಯೂ ಸೇರಿರುತ್ತದೆ) ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ವಿಚಾರಣಾಧಿಕಾರಿಗಳ ಸಂಭಾವನೆ ಪಾವತಿಸಲು ಕೆಳಕಂಡ ಆದೇಶ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 114 ರಾಲೆಪ 2008, ಬೆಂಗಳೂರು, ದಿನಾಂಕ: 23 ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ವಿಚಾರಣಾಧಿಕಾರಿಗಳಾದ ಶ್ರೀ ಫ.ನಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರು ಶ್ರೀ ಎಂ.ಎಸ್. ಜಯರಾಂ, ಜಂಟಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ವಿಚಾರಣೆಯ ಸಂಭಾವನೆಯಾಗಿ ರೂ.15,000/- (ಹದಿನೈದು ಸಾವಿರ ರೂಪಾಯಿಗಳು ಮಾತ್ರ) (ವಾಹನ ಭತ್ಯೆಯೂ ಸೇರಿರುತ್ತದೆ)ಗಳನ್ನು ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಸದರಿ ಮೊತ್ತವನ್ನು ರಾಜ್ಯ ಲೆಕ್ಕಪತ್ರ ಇಲಾಖೆ ಶೀರ್ಷಿಕೆ 2054-00-098-0-01, 015 ಪೂರಕ ವೆಚ್ಚಗಳು ಇದರಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಲ್.ರಮೇಶ
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಪಿ.ಆರ್.481

INFRASTRUCTURE DEVELOPMENT SECRETARIAT

Sub : Project Management Services for Construction of Gulbarga Airport-Fees to iDeck

Read :
1. G.O. No. IDD 85 DIA 2008, Dated:12-8-2009.
2. Letter No. iDeck/2011-2012/886, Dated:16-9-2011.
3. G.O. No. IDD 85 DIA 2008, Dated:9-11-2011.
4. Govt. Notification No.FD 1121/Exp-12/11, Dated:27-12-2011.
5. Letter No. iDeCK/2011-12/875B, Dated:30-09-2011 of the President(Projects), iDeCK.
6. Letter No.iDeCK/2011-12/1322B, Dated:30-12-2011 of the President (Projects), iDeCK

Preamble:

In G.O. read at (1) above, Government has accorded approval for the scope of services and sanction for payment of fees to iDeck for project management and Consultancy services for Gulbarga Airport Development Project at the rate not exceeding of Rs.3,00,000 per month (exclusive of applicable service tax) for the project for a period of twelve months.

2. In letter read at (2) above, iDeck has stated that construction of Airport has been started only in April/May, 2011 and iDeck has deployed their engineers at site from 01-06-2011 for supervision and sent invoice for Rs9,92,700/- towards fees payable to iDeck for project management and consultancy services for the period June 2011 to August 2011 for the construction of Gulbarga Airport and requested for release of Rs.9,92,700/-

3. In G.O. read at (3) above, an amount of Rs.9,92,700/- has been released to iDeCK for the period of June 2011 to August 2011.

4. In Government Notification read at (4) above, exemption for procuring the services of iDeCK under the provisions of 4(g) of the KTPP Act 1999, for a period from January 2012 to August 2012 has been given.

5. In letters read at (5 & 6) above, the President (projects), iDeck had sent invoices for Rs.3,30,900/- and Rs.9,92,700/- towards payment of fees to iDeCK for project management and consultancy services for the months September 2011, to December 2011.

6. The proposal has been examined in detail and hence this order.

Government Order No. IDD 85 DIA 2008 Bangalore, Dated: 28th January 2012.

Under the circumstances explained in the preamble, Sanction is accorded for release of Rs.13,23,600/- (Rupees Thirteen lakhs twenty three thousand six hundred only) towards fees to iDeck for project Management and Consultancy Services for the Gulbarga Airport Project for the period September 2011 to December 2011.

2. This amount shall be met under the Head of Account "5465-01-190-1-05 (Plan)-133 Special Development Plan" out of the provision of Rs.80.00 Crores during 2011-12.

3. The Chief Financial Officer, iDeCK, Bangalore is authorized to draw the above amount on a pyees receipt duly countersinged by the under secretary to Government, Infrastructure Development, Bangalore.

4. This order issues in accordance with the financial powers delegated to Principal Secretaries/Secretaries to Government vide G.O. No. FD 1 TFP 2008, dated 16-05-2008 and Finance Department Notification No.: FD 1121/Exp-12/11, dated:27-12-2011.

By Order and in the name of the Governor of Karnataka,

S.J.SAMPATH KUMAR

Deputy Secretary to Government

Infrastructure Development Department

PR.482

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಯೋಇ : 309 : ಪಿಟಿಪಿ : 94, ದಿನಾಂಕ:07-08-1995.
2. ಸರ್ಕಾರದ ಆದೇಶ ಸಂಖ್ಯೆ:ಯೋಇ : 108 : ಯೋವಿವಿ : 09, ದಿನಾಂಕ:14-12-2009.
3. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ:ರಾಕಾ/ನಾನಿ/937/2011, ದಿ:17-12-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈಗಾಗಲೇ ಮೇಲೆ ಓದಲಾದ (2)ರಲ್ಲಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಓದಲಾದ (3) ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಶಿಫಾರಸ್ಸಿನ ಮೇರೆಗೆ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಯೋಇ 108 ಯೋವಿವಿ 2009, ಬೆಂಗಳೂರು, ದಿನಾಂಕ: 28ನೇ ಜನವರಿ 2012.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ದಿನಾಂಕ 14-12-2009ರಲ್ಲಿನ ಆದೇಶದಲ್ಲಿ ಮಾಡಲಾದ ನಾಮನಿರ್ದೇಶನವನ್ನು ರದ್ದುಪಡಿಸಿ ಈ ಕೆಳಕಂಡ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕ್.

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1.	ಶ್ರೀ ಯಲ್ಲನಗೌಡ ಎನ್.ಪಾಟೀಲ, ಸಾ:ದಾಸನೂರ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಸಾಮಾನ್ಯ
2.	ಶ್ರೀ ಪರಮೇಶ್ವರ ಮುದಕಯ್ಯ ಚಿಕ್ಕಮಠ ಸಾ:ರಾಮನಾಳ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಸಾಮಾನ್ಯ
3.	ಶ್ರೀ ಧನಪಾಲ, ಬ.ಭೆಟದೂರ, ಸಾ:ದುಮ್ಮವಾಡ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಅ.ಸಂ.
4.	ಶ್ರೀ ಬಸವರಾಜ ಎಂ.ಬಾವಕರ, ಸಾ:ದೇವಿಕೊಪ್ಪ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಬಿ.ಸಿ.ಎಂ.
5.	ಶ್ರೀ ಗದಿಗೆಪ್ಪ ಕಬನೂರು, ಸಾ:ಬಿ.ಹುಲಿಕಟ್ಟಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಎಸ್.ಟಿ.
6.	ಶ್ರೀಮತಿ ರತ್ನವ್ವ ರಾಮು ಲಮಾಣಿ, ಸಾ:ಈಚನಹಳ್ಳಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ	ಮಹಿಳೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ.ಮುಳಕೂರ

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್.483

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ವಾಟರ್ ಟ್ಯಾಂಕರ್ ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಪಾವತಿಸುವ ಬಗ್ಗೆ.

ಓದಲಾಗಿದೆ : ಬಿಜಾಪುರ ಜಿಲ್ಲಾಧಿಕಾರಿಗಳ ಪತ್ರ ಸಂ: ಆರ್‌ಬಿ/ಸಿಎಎಲ್/ಸಿಆರ್-8/2011-12, ದಿನಾಂಕ: 13-12-2011, 02-11-2011 ಮತ್ತು 23-11-2011.

ಪ್ರಸ್ತಾವನೆ :

ಬಿಜಾಪುರ ಜಿಲ್ಲಾಧಿಕಾರಿಗಳು ಮೇಲೆ ಓದಲಾದ ಪತ್ರಗಳಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಬಿಜಾಪುರ ಜಿಲ್ಲೆಯ ದಸೂರ, ದಶ್ಯಾಳ, ಕೋಟ್ಯಾಳ, ಉಮರಜ, ತಗ್ಗಿಹಳ್ಳಿ, ಮತ್ತು ವೀಭೂತಿ ಗ್ರಾಮಗಳಲ್ಲಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದಿದ್ದು, ಸದರಿ ಜನರೇಟರ್ ಬಾಡಿಗೆ ಬಾಬ್ತು ರೂ. 15,31,743/- ಗಳನ್ನು ಬಿಡುಗಡೆ ಮಾಡುವಂತೆ ಬಿಜಾಪುರ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 400 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ 24-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ಜಿಲ್ಲಾಧಿಕಾರಿಗಳು, ಬಿಜಾಪುರ ಜಿಲ್ಲೆ ಇವರಿಗೆ ಈ ಕೆಳಗಿನಂತೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ	ಗ್ರಾಮ	ಜನರೇಟರ್ ಬಾಬ್ತು (ರೂ.ಗಳಲ್ಲಿ)
1	ದಸೂರ	3,02,710/-
2	ದಶ್ಯಾಳ	3,74,924/-
3	ಕೋಟ್ಯಾಳ	1,80,000/-
4	ಉಮರಜ	3,03,065/-
5	ತಗ್ಗಿಹಳ್ಳಿ	94,124/-
6	ವಿಭೂತಿಹಳ್ಳಿ	2,76,920/-
	ಒಟ್ಟು	15,31,743/-

(ರೂಪಾಯಿ ಹದಿನೈದು ಲಕ್ಷದ ಮೂವತ್ತೊಂದು ಸಾವಿರದ ಏಳುನೂರ ನಲವತ್ತಾ ಮೂರು ಮಾತ್ರ)

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 'Public Contributions to the Calamity Relief' ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯೀಸ್ ರಸೀದಿ (ಸಿಟಿಎಸ್-8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು. ಬಿಡುಗಡೆ ಮಾಡಿರುವ ಹಣವನ್ನು ಹೇಗೆ ಉಪಯೋಗಿಸಲಾಗಿದೆ. ಮತ್ತು ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಎಂ. ಆನಂದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 484 ಕಂದಾಯ ಇಲಾಖೆ

(ವಿ.ನಿ. & ಸೇವೆಗಳು-2)

ಕಂದಾಯ ಸಚಿವಾಲಯ

ವಿಷಯ : ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಕೋಶದ ವಾಹನ ಸಂ: ಕೆಎ 01 ಜಿಎ 9900 ರ ದುರಸ್ತಿ ಬಗ್ಗೆ.

ಓದಲಾಗಿದೆ : ಶ್ರೀ ಮೂಕಾಂಬಿಕಾ ಆಟೋ ಗ್ಯಾರೇಜ್ ಮತ್ತು ಸರ್ವೀಸ್ ಸ್ಟೇಷನ್ ಇವರ ಬಿಲ್ ಸಂ: 166 ದಿನಾಂಕ: 24-12-2011.

ಪ್ರಸ್ತಾವನೆ :

ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಕೋಶದ ಅಧಿಕೃತ ವಾಹನ ಸಂ: 01 ಜಿಎ 9900 ದ ರಿಪ್ಲೇಸ್‌ಮೆಂಟ್ ಕೆಳಕಂಡಂತೆ ದುರಸ್ತಿ ಮಾಡಿಸಿಕೊಂಡ ಬಾಬ್ತು ರೂ. 4,590/- ಮೊಬಲಗನ್ನು ವೆಚ್ಚ ಪಾವತಿ ಮಾಡಲು ಶ್ರೀ ಮೂಕಾಂಬಿಕಾ ಆಟೋ ಗ್ಯಾರೇಜ್ ಮತ್ತು ಸರ್ವೀಸ್ ಸ್ಟೇಷನ್, ಬೆಂಗಳೂರು ಇವರು ಬಿಲ್ ಸಲ್ಲಿಸಿರುತ್ತಾರೆ.

1	Replacement Engine Oil & Oild Filters	200-00
2	Full Servicing & Greecing	400-00
3	Four Wheel Break Adjustment & Break Pad Replacement	400-00
4	Engine Oil	1260-00
5	Oil Filter	380-00

6	Coolent	240–00
7	Gear Box Oil	280–00
8	Break Pad	1430–00
9	Labour Charges	1000–00
	Total	4590–00

ಆದ್ದರಿಂದ, ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 41 ಇಟಿಸಿ 2011, ಬೆಂಗಳೂರು, ದಿನಾಂಕ 15–10–2011

ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಕೋಶದ ಅಧಿಕೃತ ವಾಹನ ಸಂ: 01 ಜಿಎ 9900 ಗೆ ಪ್ರಸ್ತಾವನೆಯಲ್ಲಿ ತಿಳಿಸಿರುವ ಸರ್ವೀಸಿಂಗ್ ಮಾಡಿಸಿದ ಬಾಬ್ತು ಒಟ್ಟು ರೂ. 4590/– (ರೂಪಾಯಿ ನಾಲ್ಕು ಸಾವಿರದ ಐದು ನೂರ ತೊಂಬತ್ತು ಮಾತ್ರ) ಗಳನ್ನು ಶ್ರೀ ಮೂಕಾಂಬಿಕಾ ಆಟೋ ಗ್ಯಾರೇಜ್ ಮತ್ತು ಸರ್ವೀಸ್ ಸ್ಟೇಷನ್ಸ್, ಬೆಂಗಳೂರು ಇವರಿಗೆ ಪಾವತಿ ಮಾಡಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2245–80–101–0–00–0–059 ಇತರೇ ಖರ್ಚು (ಯೋಜನೇತರ) ಇದರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ವಿ.ನಿ. & ಸೇವೆಗಳು–2)

ಪಿ.ಆರ್. 485

ಕಂದಾಯ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಆರ್‌ಡಿ: 38: ಎಲ್‌ಜಿಆರ್ : 2011, ಬೆಂಗಳೂರು, ದಿನಾಂಕ : 27–1–2012

ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿ., ಇವರಿಗೆ ಕೊಪ್ಪಳ ತಾಲ್ಲೂಕಿನ ಗಿಣಿಗೇರಾ ಗ್ರಾಮದ ಸ.ನಂ. /181/ಎ, 181/ಬಿ, 182ಸಿ ಮತ್ತು 182 ರಲ್ಲಿಯ ಒಟ್ಟು 2–16ಎಕರೆ ಜಮೀನನ್ನು ಮಂಜೂರು ಮಾಡಿರುವ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/8/ಎಲ್‌ಜಿಆರ್/2009, ದಿ: 23–11–2010ರ ಆದೇಶದ ಕ್ರಮ ಸಂಖ್ಯೆ: (1)ರ ಕೆಳಭಾಗದಲ್ಲಿ ಈ ಕೆಳಕಂಡ ಷರತ್ತನ್ನು ಅಳವಡಿಸಿ ಓದಿಕೊಳ್ಳತಕ್ಕದ್ದು.

1. ಆರ್.ಯು.ಬಿ. ನಿರ್ಮಿಸಿ ಜಿಲ್ಲೆಗೆ ಬರುವಂತಹ ಗಣ್ಯ ವ್ಯಕ್ತಿಗಳಿಗೆ ಯಾವುದೇ ತೊಂದರೆಯಾಗದಂತೆ ಮತ್ತು ಗಣ್ಯ ವ್ಯಕ್ತಿಗಳ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸತಕ್ಕದ್ದು.
2. ಹಾಲಿ ಇರುವಂತಹ ಹೆಲಿಪ್ಯಾಡನ್ನು ದಕ್ಷಿಣ ಭಾಗಕ್ಕೆ ಸ್ಥಳಾಂತರಿಸುವುದು.
3. ಈ ಹಿಂದೆ ಪ್ರಸ್ತಾಪಿಸಿರುವ 5.50 ಮೀಟರ್‌ನಿಂದ ರೋಡ್ ಅಂಡರ್ ಬ್ರಿಡ್ಜ್ ಅನ್ನು 11.00 ಮೀಟರ್‌ಗೆ ವಿಸ್ತರಿಸುವುದು.
4. ಈಗಾಗಲೇ ಆದೇಶದಲ್ಲಿ ಸೂಚಿಸಿರುವಂತೆ ಮಾರುಕಟ್ಟೆ ಬೆಲೆ ಪ್ರತಿ ಎಕರೆಗೆ ರೂ. 20,00,000/– ಬೆಲೆ ನಿಗಧಿಪಡಿಸತಕ್ಕದ್ದು.
5. ಮೇಲಿನ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯೇ ಭರಿಸತಕ್ಕದ್ದು.
6. ಮೇಲಿನ ನಿಭಂದನೆಗಳೊಂದಿಗೆ ದಿನಾಂಕ: 23–11–2010 ರಲ್ಲಿ ವಿಧಿಸಿರುವ ನಿಭಂದನೆಗಳು. ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ಭೂ ಮಂಜೂರಾತಿ–3)

ಪಿ.ಆರ್. 486

ಒಳಾಡಳಿತ ಸಚಿವಾಲಯ

ವಿಷಯ : ಒಳಾಡಳಿತ ಇಲಾಖೆಗೆ ಹೊಸದಾಗಿ ಮಂಜೂರು ಮಾಡಿರುವ ಉಪ ಕಾರ್ಯದರ್ಶಿಯವರು ನಿರ್ವಹಿಸಬೇಕಾದ ವಿಷಯ/ಕಾರ್ಯಭಾರ ಹಂಚಿಕೆಯ ಕುರಿತು.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 224 ಸಅಸೇ 2011, ದಿನಾಂಕ: 02–01–2012.

2) ಸರ್ಕಾರದ ಆದೇಶ ಸಂಖ್ಯೆ: ಒಇ 12 ಪಿಸಿಎನ್ 2011, ದಿನಾಂಕ: 14–07–2011.

3) ಸರ್ಕಾರದ ಅಪರ ಕಾರ್ಯದರ್ಶಿ (ಪೊಲೀಸ್ ಸೇವೆಗಳು) ಇವರ ಟಿಪ್ಪಣಿ ಸಂಖ್ಯೆ: ಒಇ 1543/ಅಪರ ಕಾ/2012, ದಿನಾಂಕ: 12–07–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಅಧಿಸೂಚನೆ ದಿನಾಂಕ: 02–01–2012 ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಒಳಾಡಳಿತ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ, ಟಿ.ಕೃಷ್ಣಮೂರ್ತಿಯವರಿಗೆ ಉಪ ಕಾರ್ಯದರ್ಶಿ ಹುದ್ದೆಗೆ ಪದ್ಞೋನತಿ ನೀಡಿ ಒಳಾಡಳಿತ ಇಲಾಖೆಯಲ್ಲಿಯೇ ಮುಂದುವರಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶ ದಿನಾಂಕ: 14-07-2011 ರನ್ನು ಭಾಗಶಃ ಮಾರ್ಪಡಿಸಿ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಇವರಿಗೆ ಹಂಚಿಕೆ ಮಾಡಿದ ಸೆರಮನೆ ಮತ್ತು ಸಿಸಿಮಾ ಶಾಖೆಯ ಕಾರ್ಯವಿಷಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಜಂಟಿ ಕಾರ್ಯದರ್ಶಿ ಕಾನೂನು ಮತ್ತು ಸುವ್ಯವಸ್ಥೆಯವರಿಗೆ ಮರು ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಓದಲಾದ (3)ರ ಟಿಪ್ಪಣಿಯಲ್ಲಿ ಪ್ರಸ್ತುತ ಉಪಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಹುದ್ದೆಯಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇಲಾಖೆ ಸೈನಿಕ ಕಲ್ಯಾಣ ಇಲಾಖೆ ಮತ್ತು ಗೃಹರಕ್ಷಕದಳ ಮತ್ತು ಪೌರರಕ್ಷಣೆ ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸಲಾಗುತ್ತಿದ್ದು ಈ ವಿಷಯಗಳ ಜೊತೆಗೆ ಒಳಾಡಳಿತ ಇಲಾಖೆಗೆ ಸಂಬಂಧಿಸಿದ ಸ್ವೀಕೃತಿ ಮತ್ತು ರವಾನೆ ಶಾಖೆ ಮತ್ತು ಸಮನ್ವಯ ಶಾಖೆಯ ವಿಷಯಗಳನ್ನು ಸಹ ನಿರ್ವಹಿಸುವಂತೆ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಇವರಿಗೆ ಸೂಚಿಸಬಹುದೆಂದು ಸರ್ಕಾರದ ಅಪರ ಕಾರ್ಯದರ್ಶಿ (ಪೊಲೀಸ್ ಸೇವೆಗಳು) ಇವರು ತಿಳಿಸಿರುತ್ತಾರೆ.

ಸದರಿ ಟಿಪ್ಪಣಿಯನ್ನು ಪರಿಶೀಲಿಸಿ ಅದರಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 12 ಪಿಸಿಎನ್ 2011,, ಬೆಂಗಳೂರು, ದಿನಾಂಕ 30-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಒಇ 12 ಪಿಸಿಎನ್ 2011, ದಿನಾಂಕ: 14-07-2011 ಅನ್ನು ಭಾಗಶಃ ಮಾರ್ಪಡಿಸಿ ಒಳಾಡಳಿತ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಇವರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಸೈನಿಕ ಕಲ್ಯಾಣ ಇಲಾಖೆ ಮತ್ತು ಗೃಹರಕ್ಷಕದಳ ಮತ್ತು ಪೌರರಕ್ಷಣೆ ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುತ್ತಿದ್ದು ಈ ವಿಷಯಗಳ ಜೊತೆಗೆ ಒಳಾಡಳಿತ ಇಲಾಖೆಗೆ ಸಂಬಂಧಿಸಿದ ಸ್ವೀಕೃತಿ ಮತ್ತು ರವಾನೆ ಶಾಖೆ ಮತ್ತು ಸಮನ್ವಯ ಶಾಖೆಯ ವಿಷಯಗಳನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಇವರಿಗೆ ಮರು ಹಂಚಿಕೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಈ ಪಾಪಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಸಮನ್ವಯ)

ಪಿ.ಆರ್. 487

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೊಳ್ಳೇಗಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 7290.00 ಲಕ್ಷಗಳಲ್ಲಿ ಕಲ್ಪಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯ.ನಿ. ಕನನೀಸಒಚಮಂಡಳಿರವರ ಪತ್ರ ಸಂಖ್ಯೆ: ಕಜಮಂ/ತಾಂತ್ರಿಕ ಕೊಳ್ಳೇಗಾಲ-ಒಚ.ಯೋ01/1050/2010-11 ದಿ: 07-07-2010.

ಪ್ರಸ್ತಾವನೆ :

ಕೊಳ್ಳೇಗಾಲ ಪಟ್ಟಣವು ಚಾಮರಾಜನಗರ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, ಈ ಪಟ್ಟಣದ ಜನಸಂಖ್ಯೆಯು 2001ರ ಜನಗಣತಿಯ ಪ್ರಕಾರ. 52,607 ಇದ್ದು, ಪ್ರಸ್ತುತ ಸುಮಾರು 60,000 ಜನಸಂಖ್ಯೆ ಇರುತ್ತದೆ. ಕೊಳ್ಳೇಗಾಲ ಪಟ್ಟಣಕ್ಕೆ ಕಾವೇರಿ ನದಿಯಿಂದ 1970ರಲ್ಲಿ ಕರ್ಯಗತಗೊಳಿಸಲಾದ 1.0 ಎಂ.ಜಿ.ಡಿ. ಕುಡಿಯುವ ನೀರು ಸರಬರಾಜು ಯೋಜನೆಯಿಂದ ಹಾಗೂ 2006ರಲ್ಲಿ ಕಾರ್ಯಗತಗೊಳಿಸಲಾದ 13.50 ಎಂ.ಎಲ್.ಡಿ., ಕುಡಿಯುವ ನೀರು ಸರಬರಾಜು ಯೋಜನೆಯಿಂದ ತಲಾ ದಿನಂಪ್ರತಿ 100 ಲೀ.ನಂತೆ ನೀರು ಸರಬರಾಜು ಮಾಡಲಾಗುತ್ತಿದೆ.

ಕೊಳ್ಳೇಗಾಲ ಪಟ್ಟಣದ ಕೆಲವು ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ಇದ್ದು (21.425 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗ) ಪಟ್ಟಣದ ನೈರ್ಮಲ್ಯತೆಯನ್ನು ಕಾಪಾಡುವ ದೃಷ್ಟಿಯಿಂದ ಪಟ್ಟಣದ ಎಲ್ಲಾ ಭಾಗಗಳಿಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ. ಪ್ರಸ್ತುತ ಒಳಚರಂಡಿ ಯೋಜನೆಯನ್ನು 2027ರಲ್ಲಿ ಅಂದಾಜಿಸಲಾದ ಮಧ್ಯಂತರ ಅವಧಿಯ 80,078ಕ್ಕೆ ಜನಸಂಖ್ಯೆಗೆ ಮತ್ತು 2042ರಲ್ಲಿ ಅಂದಾಜಿಸಲಾದ ಅಂತಿಮ ಅವಧಿಯ 1,02,203 ಜನಸಂಖ್ಯೆ ಎಂದು ಪರಿಗಣಿಸಿ ದಿನಂಪ್ರತಿ ತಲಾ 110 ಲೀ ತ್ಯಾಜ್ಯ ನೀರನ್ನು ಅಂದಾಜಿಸಿ ಯೋಜನೆ ವಿನ್ಯಾಸಿಸಲಾಗಿದೆ.

ಪಟ್ಟಣವನ್ನು 4 ವಲಯಗಳನ್ನಾಗಿ ವಿಂಗಡಿಸಿ ಆಂತರಿಕ ಕೊಳವೆ ಮಾರ್ಗಗಳಿಗೆ ಸ್ಟೋನ್‌ವೇರ್ ಕೊಳವೆಗಳು ಆರ್.ಸಿ.ಸಿ. ಕೊಳವೆಗಳು ಹಾಗೂ ಯು.ಪಿ.ವಿ.ಸಿ. (SDR) ಕೊಳವೆಗಳನ್ನು ಅಳವಡಿಸಲು ಹಾಗೂ ಇಟ್ಟಿಗೆ ಹಾಗೂ ಆರ್.ಸಿ.ಸಿ. ಅಳುಗುಂಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ವಿನ್ಯಾಸದ ಪ್ರಕಾರ ವೆಟ್‌ವೆಲ್‌ಗಳನ್ನು ನಿರ್ಮಿಸಲು ಹಾಗೂ 4.5 ಎಂ.ಎಲ್.ಡಿ. ಸಾಮರ್ಥ್ಯದ SBR technology ಅಳವಡಿಸಿಕೊಂಡು ಮಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ಉದ್ದೇಶಿಸಿದೆ.

ಮೇಲ್ಕಂಡ ಅಂದಾಜನ್ನು 2009-10ನೇ ಸಾಲಿನ ಮಂಡಳಿ ಹಾಗು ಮೈಸೂರು ವೃತ್ತದ ಲೋಕೋಪಯೋಗಿ ಬಂದರು ಹಾಗೂ ಒಳನಾಡು ಸಾರಿಗೆ ಇಲಾಖೆಯ ದರಪಟ್ಟಿಯನ್ವಯ ರೂ. 7290.00 ಲಕ್ಷಗಳಿಗೆ ಅಂದಾಜಿಸಿ ವ್ಯವಸ್ಥಾಪಕ ನಿರ್ದೇಶಕರು ಕನನೀಸ ಮತ್ತು ಒಚ ಮಂಡಳಿಯವರು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ ಸಾಲ ಶೇ. 50	ರೂ. 3645.00 ಲಕ್ಷಗಳು
ಸರ್ಕಾರದ ಸಾಲ ಶೇ. 25	ರೂ. 1822.50 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಗೆ ಶೇ. 25	ರೂ. 1822.50 ಲಕ್ಷಗಳು
ಒಟ್ಟು	ರೂ. 7290.00 ಲಕ್ಷಗಳು

ಆದರೆ, ಪ್ರಸ್ತುತ ಸರ್ಕಾರವು ಹಾಲಿ ಜಾರಿಯಲ್ಲಿರುವ ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯು ಸರ್ಕಾರದ ಸಾಲದಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಹಾಗೂ ಸ್ಥಳೀಯ ಸಂಸ್ಥೆಗಳ ವಂತಿಕೆಯಿಂದ ಯೋಜನೆಯ ಅಂದಾಜನ್ನು ಭರಿಸಲಾಗುತ್ತಿದ್ದು, ಸದರಿ ಸ್ಥಳೀಯ ಸಂಸ್ಥೆಗಳಲ್ಲಿನ ನಾಗರೀಕರ ಹಿತದೃಷ್ಟಿಯಿಂದ, ಪರಿಸರ ಸಂರಕ್ಷಣೆ ಹಿತದಲ್ಲಿ ಮತ್ತು ಮಲಿನ ನೀರು ನದಿಗಳನ್ನು /ಅಂತರ್ಜಲ ನೀರನ್ನು

ಕಲುಷಿತಗೊಳಿಸದಿರುವ ದೃಷ್ಟಿಯಿಂದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ಯೋಜನೆಗಳನ್ನು ಕಲ್ಪಿಸುವ ದೃಷ್ಟಿಯಿಂದ ಮತ್ತು ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸಬಲವಿಲ್ಲದ ಕಾರಣ ಈ ಯೋಜನೆಗಳ ಪ್ರಯೋಜನವನ್ನು ಪಡೆಯುವುದರಿಂದ ವಂಚಿತರಾಗುವುದನ್ನು ತಡೆಯಲು ಒಳಚರಂಡಿ ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 2011, ದಿ: 20-07-2011 ರಂದ ಜಾರಿಗೆ ಬರುವಂತೆ ಪರಿಷ್ಕರಿಸಿ, ಆದೇಶಿಸಿರುತ್ತದೆ. ಸದರಿ ಆದೇಶದನ್ವಯ ಕೊಳ್ಳೇಗಾಲ ನಗರ ಸಭೆಯಾಗಿದ್ದು, ಈ ಯೋಜನೆಯ ಆರ್ಥಿಕ ಮಾದರಿಯನ್ನು ಈ ಕೆಳಕಂಡಂತೆ ನಿಗದಿಗೊಳಿಸಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಅನುದಾನ (70%)	ರೂ. 5103.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (20%)	ರೂ. 1458.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (10%)	ರೂ. 729.00 ಲಕ್ಷಗಳು
ಒಟ್ಟು	ರೂ. 7290.00 ಲಕ್ಷಗಳು

ಈ ಯೋಜನೆಯನ್ನು 2011-12ನೇ ಸಾಲಿನ ಅನುಮೋದಿತ ಪರಿಷ್ಕೃತ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ. 2430.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಸರ್ಕಾರವು ಯೋಜನೆಯ ಅಂದಾಜಿನಲ್ಲಿ ವಿಧಿಸಲಾಗುತ್ತಿರುವ ಇಟಿಪಿ, ದರಗಳನ್ನು ಶೇಕಡ 10 ಕ್ಕೆ ಮಿತಿಗೊಳಿಸಲು ನಿರ್ಧರಿಸುವ ಹಿನ್ನೆಲೆಯಲ್ಲಿ ಹಾಗೂ ಯೋಜನೆಯಡಿ ಉದ್ಭವಿಸಬಹುದಾದ ಟೆಂಡರ್ ಪ್ರೀಮಿಯಮ್ ಮತ್ತು ಎಸ್ಕಲೇಶನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಬರಿಸಬೇಕಾಗಿರುವುದರಿಂದ ಸದರಿ ಮೊತ್ತಗಳನ್ನು ಅಂದಾಜು ಪಟ್ಟಿಯಿಂದ ಹೊರತುಪಡಿಸಲು ತೀರ್ಮಾನಿಸಿದೆ. ಅದರಂತೆ ಯೋಜನೆಯ ಅಂದಾಜು ವೆಚ್ಚದಲ್ಲಿ ಮೂಲ ಅಂದಾಜು ಮೊತ್ತವಾದ ರೂ. 5469.44 ಲಕ್ಷಗಳಿಗೆ ಶೇಕಡ 10 ರಷ್ಟು ಇಟಿಪಿ ದರಗಳನ್ನು ಅಂದರೆ ರೂ. 546.94 ಲಕ್ಷಗಳು ಮತ್ತು ಇತರೆ ವೆಚ್ಚಗಳಾದ ರೂ. 0.62 ಲಕ್ಷಗಳನ್ನು ಸೇರಿಸಿ ಯೋಜನೆಯ ಅಂದಾಜು ಮೊತ್ತವನ್ನು ರೂ. 6017.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿದೆ.

ಸರ್ಕಾರವು ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 05 ಯುಡಿಎಸ್ 2010, ಬೆಂಗಳೂರು, ದಿನಾಂಕ 24-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಳ್ಳೇಗಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 6017.00 ಲಕ್ಷಗಳಲ್ಲಿ (ರೂ. ಆರು ಸಾವಿರದ ಹದಿನೇಳು ಲಕ್ಷಗಳು ಮಾತ್ರ) ಕಲ್ಪಿಸುವ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) ETP/Contingencies are limited to 10 % of the project cost.
3) The board shall invite the tender immediately after the handing over of the land required under the scheme in order to avoid time and cost run over.
4) The consent of the ULB shall be obtained to meet the extra cost that might occur due to deviations, extra item works or variations in the Scheme.
5) Adequate provisions to be made by the Board in the following Years for timely completion of the Project.
6) Water rates as proposed by KUWS&DB have to be implemented to meet O & M cost of UGD.
7) KTPP provisions, quality control and timely completion should be ensured.
8) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 665 Exp-9:2010 ದಿನಾಂಕ: 05-10-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎಂ. ವಾಸುದೇವರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 488

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸರ್ಕಾರದ ನಿರ್ಣಯಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರಿ ಆದೇಶ ಇತ್ಯಾದಿಗಳನ್ನು ಆನ್‌ಲೈನ್ ಮೂಲಕ ತಯಾರಿಸುವುದು, ಅನುಮೋದಿಸುವುದು, ದೃಢೀಕರಿಸುವುದು ಮತ್ತು ಹೊರಡಿಸುವ ಕುರಿತು ಸಮರ್ಪಕವಾಗಿ ಕಾರ್ಯಗತಗೊಳಿಸಲು ಬಳಕೆದಾರರ ಅಂಗೀಕಾರ ಸಮಿತಿ (User Acceptance Committee) ಯನ್ನು ರಚಿಸುವ ಬಗ್ಗೆ.

ಓದಲಾಗಿದೆ : 1) ದಿನಾಂಕ 29-08-2011 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 90 ಇಆಇ 2009 (ಭಾಗ-1)
2) ದಿನಾಂಕ 18-10-2011 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 90 ಇಆಇ 2009 (ಭಾಗ-1)

ಪ್ರಸ್ತಾವನೆ :

1. ಸರ್ಕಾರ ತೆಗೆದುಕೊಂಡ ನಿರ್ಣಯಗಳನ್ನು ಜಾರಿಗೊಳಿಸುವ ಸಲುವಾಗಿ, ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳು ಹೊರಡಿಸುವ ಆದೇಶ ಇತ್ಯಾದಿಗಳನ್ನು ಆನ್‌ಲೈನ್ ಮೂಲಕ ಕೇಂದ್ರಿಕೃತವಾಗಿ ಒಂದೇ ಸ್ಥಳದಲ್ಲಿ ಲಭ್ಯಗೊಳಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ

ಸರ್ಕಾರದ ನಿರ್ಣಯಗಳನ್ನು ಸಂಬಂಧಿಸಿದವರಿಗೆ ತಿಳಿಸುವ ಹಾಗೂ ಅವುಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರಿ ಆದೇಶ, ಸುತ್ತೋಲೆ, ಅಧಿಕೃತ ಜ್ಞಾಪನ, ಅಧಿಸೂಚನೆ ಇತ್ಯಾದಿಗಳನ್ನು ಡಿಜಿಟಲ್ (ಆನ್‌ಲೈನ್) ರೂಪದಲ್ಲಿ ತಯಾರಿಸುವ, ಅನುಮೋದಿಸುವ, ದೃಢೀಕರಿಸುವ ಹಾಗೂ ಅವುಗಳನ್ನು ದೃಢೀಕರಿಸಲು ಅಧಿಕಾರ ಹೊಂದಿದ ಅಧಿಕಾರಿ/ಸಿಬ್ಬಂದಿಯ ಡಿಜಿಟಲ್ ಸಹಿಯ ಮೇರೆಗೆ ವೆಬ್‌ಸೈಟ್‌ನಲ್ಲಿ ಹಾಕುವ ಮೂಲಕ ಹೊರಡಿಸುವ ವಾಡಿಕೆಯನ್ನು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಜಾರಿಗೆ ತರುವ ಬಗ್ಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ: 29-08-2011ರ ಆದೇಶದನ್ವಯ ಸೂಚನೆಗಳನ್ನು ನೀಡಲಾಗಿದೆ. ದಿನಾಂಕ: 29-08-2011ರ ಆದೇಶದಲ್ಲಿನ ಸೂಚನೆಗಳನ್ನು ಜಾರಿಗೊಳಿಸುವ ಸಲುವಾಗಿ ಮೇಲೆ (2)ರಲ್ಲಿ ಓದಲಾದ ದಿನಾಂಕ: 18-10-2011ರ ಆದೇಶದಲ್ಲಿ ಇ-ಆಡಳಿತ ಕೇಂದ್ರ, ಬೆಂಗಳೂರು ಅನ್ನು ಜಾರಿಗೊಳಿಸುವ ಸಂಸ್ಥೆ (implementing agency) ಯನ್ನಾಗಿ ನೇಮಿಸಲಾಗಿದೆ.

2. ಮೇಲ್ಕಂಡ ಸೂಚನೆಗಳನ್ನು ಜಾರಿಗೊಳಿಸುವ ಸಲುವಾಗಿ ತಂತ್ರಾಂಶವನ್ನು ಅಭಿವೃದ್ಧಿಗೊಳಿಸುವ ಕಾರ್ಯವನ್ನು ಎನ್.ಐ.ಸಿ.ಗೆ ವಹಿಸಲಾಗಿದೆ. ನ್ಯಾಷನಲ್ ಇನ್‌ಫರ್‌ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) ಯು ಅಭಿವೃದ್ಧಿಗೊಳಿಸುವ ತಂತ್ರಾಂಶವು ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಕಾರ್ಯನಿರ್ವಹಣೆಗೆ ಅನುಗುಣವಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಈ ಕಾರ್ಯವನ್ನು ನಿರ್ವಹಿಸಲು (To validate the workflow and provide inputs for customization of software) ಬಳಕೆದಾರರ ಅಂಗೀಕಾರ ಸಮಿತಿ (User Acceptance Committee) ಯನ್ನು ರಚಿಸುವ ಅಗತ್ಯವಿರುತ್ತದೆ. ಅದರಂತೆ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 9 ಇಆಇ 2012, ಬೆಂಗಳೂರು, ದಿನಾಂಕ 25-01-2012

3. ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಬಳಕೆದಾರರ ಅಂಗೀಕಾರ ಸಮಿತಿ (User Acceptance Committee) ಯನ್ನು ಸರ್ಕಾರ ಈ ಮೂಲಕ ರಚಿಸಿದೆ.

(1) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ – ಅಧ್ಯಕ್ಷರು
(2) ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ – ಸದಸ್ಯರು
(3) ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) – ಸದಸ್ಯರು
(4) ಸಮನ್ವಯ/ನೋಡಲ್ (ಒ ಅಂಡ್ ಎಮ್) ಅಧಿಕಾರಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) – ಸದಸ್ಯರು
(5) ಸಮನ್ವಯ /ನೋಡಲ್ (ಒ ಅಂಡ್ ಎಮ್) ಅಧಿಕಾರಿ, ಕಂದಾಯ ಇಲಾಖೆ ಸದಸ್ಯರು
(6) ಸಮನ್ವಯ /ನೋಡಲ್ (ಒ ಅಂಡ್ ಎಮ್) ಅಧಿಕಾರಿ, ಆರ್ಥಿಕ ಇಲಾಖೆ – ಸದಸ್ಯರು
(7) ಸಮನ್ವಯ /ನೋಡಲ್ (ಒ ಅಂಡ್ ಎಮ್) ಅಧಿಕಾರಿ, ನಗರಾಭಿವೃದ್ಧಿ ಇಲಾಖೆ – ಸದಸ್ಯರು
(8) ಸಮನ್ವಯ /ನೋಡಲ್ (ಒ ಅಂಡ್ ಎಮ್) ಅಧಿಕಾರಿ, ಸಿಆಸುಇ ಇಲಾಖೆ (ಸೇವಾ ನಿಯಮಗಳು) – ಸದಸ್ಯರು
(9) ಸಮನ್ವಯ /ನೋಡಲ್ (ಒ ಅಂಡ್ ಎಮ್) ಅಧಿಕಾರಿ, ಇಂಧನ ಇಲಾಖೆ – ಸದಸ್ಯರು
(10) ತಾಂತ್ರಿಕ ನಿರ್ದೇಶಕರು, ನ್ಯಾಷನಲ್ ಇನ್‌ಫರ್‌ಮ್ಯಾಟಿಕ್ಸ್ ಸೆಂಟರ್ (ಎನ್‌ಐಸಿ) – ಸದಸ್ಯರು
(11) ಯೋಜನಾಧಿಕಾರಿ, ಸೆಕ್ ಲ್ಯಾನ್, ಇ-ಆಡಳಿತ ಕೇಂದ್ರ – ಸದಸ್ಯ ಕಾರ್ಯದರ್ಶಿ
(12) ಶ್ರೀ ವೆಂಕಟೇಶ್ ಪ್ರಸಾದ್, ಹಿರಿಯ ಸಮಾಲೋಚಕರು ಎಸ್.ಇಎಮ್.ಟಿ. – ಸದಸ್ಯರು

4. ಕಂಡಿಕೆ 2ರಲ್ಲಿ ಉಲ್ಲೇಖಿಸಿದ ಕಾರ್ಯವನ್ನು ಸದರಿ ಸಮಿತಿಯು ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಜಿ.ಬಿ.ಬ್ರಹ್ಮ ಪ್ರಸಾದ್
ಪೀಠಾಧಿಕಾರಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಪಿ.ಆರ್. 489

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸಿದ್ದಯ್ಯ, ಐ.ಎ.ಎಸ್. ಇವರ ಕಡ್ಡಾಯ ನಿರೀಕ್ಷಣಾ ಅವಧಿಯನ್ನು ಸಕ್ರಮಗೊಳಿಸುವ ಕುರಿತು.

ಓದಲಾಗಿದೆ :
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 603 ಎಸ್ಎಎಸ್ 2011., ದಿನಾಂಕ: 28-11-2011.
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 660 ಎಸ್ಎಎಸ್ 2011., ದಿನಾಂಕ: 31-12-2011.
3) ಶ್ರೀ ಸಿದ್ದಯ್ಯ ಐ.ಎ.ಎಸ್. ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ED 12 Prl Secy 2012. ದಿನಾಂಕ: 13-01-2012.

ಪ್ರಸ್ತಾವನೆ :

ಮೇಲೆ ಕ್ರ ಸಂ. (1)ರಲ್ಲಿ ಓದಲಾದ ದಿನಾಂಕ: 28-11-2011ರ ಅಧಿಸೂಚನೆಯಲ್ಲಿ ಶ್ರೀ ಸಿದ್ದಯ್ಯ ಐ.ಎ.ಎಸ್. ಇವರನ್ನು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಹುದ್ದೆಯಿಂದ ವರ್ಗಾಯಿಸಿ ಆದೇಶಿಸಿದ್ದರ ಮೇರೆಗೆ ಸದರಿಯವರು ದಿನಾಂಕ: 28-11-2011ರ ಅಪರಾಹ್ನ ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಟ್ಟು, ನೇಮಕಾತಿ ನಿರೀಕ್ಷಣೆಯಲ್ಲಿದ್ದರು. ತದನಂತರ ಮೇಲೆ ಕ್ರಸಂ. (2)ರಲ್ಲಿ ಓದಲಾದ ದಿನಾಂಕ: 31-12-2011ರ ಅಧಿಸೂಚನೆಯಲ್ಲಿ ಶ್ರೀಯುತರನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಹುದ್ದೆಗೆ ನೇಮಿಸಿದ್ದು, ಅದರಂತೆ ಸದರಿಯವರು ದಿನಾಂಕ: 02-01-2012ರ ಪೂರ್ವಾಹ್ನ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮೇಲೆ ಕ್ರಸಂ.(3)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಸಿದ್ದಯ್ಯ, ಐ.ಎ.ಎಸ್. ಇವರು ತಾವು

ದಿನಾಂಕ: 29-11-2011ರಿಂದ 01-01-2012ರವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸಕ್ರಮಗೊಳಿಸುವ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲು ಕೋರಿದ್ದಾರೆ.

ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 19 ಎಸ್ಐಎಸ್ 2012, ಬೆಂಗಳೂರು, ದಿನಾಂಕ 30-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಸಿದ್ದಯ್ಯ ಐ.ಎ.ಎಸ್. ಇವರು ದಿನಾಂಕ: 29-11-2011ರಿಂದ 01-01-2012ರವರೆಗೆ ನೇಮಕಾತಿ ನಿರೀಕ್ಷಣೆಯಲ್ಲಿ ಕಳೆದ ಅವಧಿಯನ್ನು ಸರ್ಕಾರವು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ 8(15) (ಎಫ್)ರ ಮೇರೆಗೆ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ ಸಕ್ರಮಗೊಳಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/1/ಟಿಎಫ್‌ಪಿ/96, ದಿನಾಂಕ: 10-07-96ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಲಾದ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಯು.ಹೆಚ್. ನಾರಾಯಣಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-1)

ಪಿ.ಆರ್. 490

FOREST, ECOLOGY AND ENVIRONMENT SECRETARIAT

Sub : Diversion of 0.1316 ha. of forest land for improvement of road from haveri to hanagal (Link 78) at Sangura village, SH 2 & 1 in Haveri District in favour of the Executive Engineer, Karnataka State Highway Improvement Project Division, Belgaum.

Read :
1. Letter No. A5 (3) GFL.CR. 10/09-10, dated : 15/09/2010 of the Principal Chief Conservator of Forest, Bangalore.
2. State Government letter No. FEE 143 FLL 2010, dated : 18-11-2010.
3. Letter No. 4-KRB 757/2010-BAN/8526, dated : 24th January 2011 of Government of India, Ministry of Environment and Forests, Regional Office, Bangalore.
4. letter No. A5 (3) GFL.CR. 10/09-10, dated : 27-07-2011 of the Principal Chief Conservator of Forest, Bangalore.
5. State Government letter No. FEE 143 FLL 2010, dated : 03-10-2011.
6. Letter No. 4-KRB 757/2010-BAN/372, dated 3rd January 2012 of Government of India, Ministry of Environment and Forests, Regional Office, Bangalore.

Preamble:

The Principal Chief Conservator of forests, Bangalore vide letter dated 15-09-2010 read at (1) above had submitted a proposal to obtain the approval of Government of India under Section 2 of the forest (Conservation) Act, 1980 for diversion of 0.1316 ha. of forest land at Sangura Village, SH 2 & 1 in Haveri district for improvement of road from Haveri to Hanagal (Link 78) in favour of Executive Engineer, Karnataka State Highway Improvement Project (KSHIP) Division, Belgaum, subject to certain conditions.

2. Accordingly, the proposal was recommended to Government of India for approval vide State Government letter dated 18-11-2010 read at (2) above.

3. The Government of India Ministry of Environment and Forests, Bangalore agreed to the proposal in principle (Stage-I) under Section 2 of the forest (Conservation) Act, 1980 vide their letter dated : 24th January 2011 read at (3) above, subject to fulfillment of certain conditions.

4. The Principal Chief Conservator of Forests submitted the compliance report vide his letter dated 27-07-2011 read at (4) above and the same has been sent to Government of India vide State Government letter dated : 03-10-2011 read at (5) above.

5. The Government of India, Ministry of Environment and Forests, Bangalore vide their letter dated 3rd January 2012 read at (6) above has conveyed their approval (Stage-II) under Section 2 of the Forest (Conservation) Act, 1980 for diversion of 0.1316 ha. of forest land at Sangura Village, SH 2 & 1 in Haveri District for improvement of road from haveri to Hanagal (Link 78) in favour of Executve Engineer, Karnataka State Highway Improvement Project (KSHIP) division, Belgaum, subject to certain conditions.

The proposal has been examined in detail and hence the order.

Government Order No. FEE 143 FLL 2010, Bangalore, Dated: 30th January 2012.

In the circumstances explained above in the preamble, the Government is pleased to accord sanction under Section 2 of the Forest (Conservation) Act, 1980 for diversion of 0.1316 ha. of forest land at Sangura Village, SH 2 & 1 in Haveri district for improvement of road from Haveri to Hanagal (Link 78) in favour of Executive Engineer, Karnataka State Highway Improvement Project (KSHIP) Division, Belgaum, subject to the following conditions :

1. The legal status of the forest land shall remain unchanged and it shall continue to be as forest land.

2. Demarcation of the proposed forest area shall be carried out by erecting permanent RCC boundary pill[illegible] at an interval of 20 mts. At the cost of user agency.
3. Compensatory afforestation shall be raised over double the extent of degraded forest land (0.2632 ha.) [illegible] agency.
4. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the State Government from the user agency and the same shall be transferred to either in SB A/c No. SB01025213-CAF Karnataka, Corporation Bank. CGO Comple[illegible] Lodhi road, New Delhi-110003 (RTGS/IFSC No. CORP0000371) or in SB A/c No. 344902010105 421-KARNATAK[illegible] CAMPA, Union Bank of India, sundar Nagar, New Delhi-110003 (RTGS/IFSC No. UBINo534498)
5. The total forest area utilized for the project shall not exceed 0.1316 ha. In case the land is not taken over by the use[illegible] agency or the same is not used for the stipulated purpose within a period of two years, then the area shall be taken ba[illegible] by the forest Department.
6. The lessee shall pay lease rent as fixed by the government from time to time.
7. The lease tenure is for a ;period of 20 years.
8. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area shold be resumed to the forest department under Section 82 of Karnataka forest Act, 1963. The concerned Deputy Conservator of forests is authorized to take necessary action in this regard. No residential building shall be permitted in the proposed area.
9. Karnataka forest Act 1963 and Rules 1969 and other relevant Acts & rules will be applicable for any violatio[illegible]
10. The user agency shall pay the cost of raising compensatory afforestation rate prevailing at the time of sanction. (at present it is Rs. 1,05,000.00 per ha.).
11. The User Agency shall pay the Net Present Value (NPV) of forest land diverted under this proposal as per Oders dated 28-3-2008 and 9-5-2008 of the Hon'ble supreme Court of India.
12. The User Agency shall ensure that there should be no damage to the available fauna and other flora.
13. The User Agency should pay cost of soil erosion controlling structures [illegible] road.
14. The shoulder drains should be suitably covered with stone pitching in order to control soil erosion.
15. No crushing/breaking of stone shall be allowed inside forest area. Readymade material shall be used for up gradation of such roads.
16. Both sides of the upgraded road shall be reinforced with brick/stone works and vegetative measures to check soil erosion. at the project cost in consultation with the deputy Conservator of forests.
17. Plantation activities, if the concerned deputy Conservator of Forests find sit necessary, shall be taken up along the road at the project cost. The plantation shall be maintained at the project cost. The plantation shall be maintained at the project cost.
18. No labour camp shall be established on the forest lands.
19. No work shall be allowed after sunset.
20. Any damage to forest area due to such up-gradation works shall be compensated by the Implementing Agency. The extent of damage shall be assessed by the concerned deputy Conservator of forests.
21. The User agency shall not sub-lease, mortgage and hypothecate the forest srea.
22. The approval under the forest (Conservation) Act, 1980 is subject to the clearance under the environment (Protection) Act. 1986, if required.
23. The user Agency shall abide by all the conditions imposed upon by the Government of India, the Government of Karnataka and the principal chief conservator of Forests (HOFF).
24. Any other conditions that the Additional Principal Chief Conservator of forest (Central) Regional Office, Bangalore may impose from time to time for protection, improvement of flora and fauna in the forest area and public convenience, shallalso be applicable..

By Order and in the name of the Governor of Karnataka,

G.H. Anasuyamma

Under Secretary to Government

Forest, Ecology and Environement Department

PR.491

ಮೂಲ ಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಗುಲ್ಬರ್ಗಾ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 24 ರಾಅವಿ 2000, ದಿನಾಂಕ : 02-01-2003.

2) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 24 ರಾಅವಿ 2000, ದಿನಾಂಕ : 30-06-2004.

3) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 24 ರಾಅವಿ 2000, ದಿನಾಂಕ : 18-08-2007.

4) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 14 ರಾಅವಿ 2007, ದಿನಾಂಕ : 15-11-2007.

5) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 72 ರಾಅವಿ 2008, ದಿನಾಂಕ : 20-06-2008

6) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 72 ರಾಅವಿ 2008, ದಿನಾಂಕ : 06-09-2008.

7) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 72 ರಾಅವಿ 2008, ದಿನಾಂಕ : 18-01-2010.

8) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 79 ರಾಅವಿ 2009, ದಿನಾಂಕ : 05-03-2011.

9) ಸರ್ಕಾರಿ ಆದೇಶ ಸಂಖ್ಯೆ : ಮೂಅಇ 34 ರಾಅವಿ 2011, ದಿನಾಂಕ : 17-03-2011.

10) ಜಿಲ್ಲಾಧಿಕಾರಿಗಳು, ಗುಲ್ಬರ್ಗಾ, ಇವರ ಪತ್ರ ಸಂ./ಕಂ/ಭೂಸ್ವಾ/429/2008-09 ದಿನಾಂಕ : 24-11-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶ ದಿನಾಂಕ : 02-01-2003 ರಲ್ಲಿ ಗುಲ್ಬರ್ಗಾ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಶ್ರೀನಿವಾಸ ಸಾರಡಗಿ ಗ್ರಾಮದಲ್ಲಿ 567 ಎಕರೆ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಗುಲ್ಬರ್ಗಾ ಜಿಲ್ಲಾಧಿಕಾರಿಗಳಿಗೆ ಅನುಮೋದನೆ ನೀಡಲಾಗಿದೆ.

2. ಮೆಲೆ ಕ್ರಮ ಸಂಖ್ಯೆ (2) ರಿಂದ (8) ರಲ್ಲಿ ಓದಲಾದ ಆದೇಶಗಳಲ್ಲಿ ಭೂಸ್ವಾಧೀನ ಹಾಗೂ ತಾಂಡಾ ಸ್ಥಳಾಂತರಕ್ಕೆ ಅಗತ್ಯವಾದ ಮೊತ್ತವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

3. ಮೇಲೆ ಕ್ರಮ ಸಂಖ್ಯೆ (9) ರಲ್ಲಿ ಓದಲಾದ ಆದೇಶದ ದಿನಾಂಕ : 17-03-2011 ರಲ್ಲಿ, ಗುಲ್ಬರ್ಗಾ ವಿಮಾನ ನಿಲ್ದಾಣದ ಜಮೀನಿನಲ್ಲಿರುವ ಹೈಟೆನ್ಷನ್ ಲೈನ್ ಸ್ಥಳಾಂತರಕ್ಕಾಗಿ ರೂ. 112.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರಿಗೆ ಬಿಡುಗಡೆ ಮಾಡಲಾಗಿದೆ.

4. ಮೇಲೆ ಓದಲಾದ ಕ್ರಸಂ. (10) ರಲ್ಲಿ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರು ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಭೂಸ್ವಾಧೀನತೆಗೊಳಗಾದ ಮಡಿಯಾಳ ತಾಂಡದ ಪುನರ್ವಸತಿ ಪ್ರದೇಶದಲ್ಲಿ ಶ್ರೀ ಸೇವಾಲಾಲ ಹಾಗೂ ಶ್ರೀ ಜಗದಂಬಾ ದೇವಾಲಯಗಳ ನಿರ್ಮಾಣಕ್ಕಾಗಿ ರೂ. 40.00 ಲಕ್ಷ ಅಂದಾಜಿಸಿ ಹಾಗೂ ಭೂಸ್ವಾಧೀನ ಕೈಗೊಂಡಿರುವ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಪಾವತಿಸಬೇಕಾದ ಬಾಕಿ ಮೊತ್ತ ರೂ. 14,56,535/- ಗಳನ್ನು ಸೇರಿ ಒಟ್ಟು ರೂ. 54.56 ಲಕ್ಷಗಳಲ್ಲಿ ಪ್ರಸ್ತುತ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಲಭ್ಯವಿರುವ ರೂ. 5.27 ಲಕ್ಷಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ. 49.29 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

5. ಸರ್ಕಾರವು ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 72 ರಾಅವಿ 2008, ಬೆಂಗಳೂರು, ದಿನಾಂಕ: 31ನೇ ಜನವರಿ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿಗಾಗಿ ಭೂಸ್ವಾಧೀನ ಕೈಗೊಂಡಿರುವ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಪಾವತಿಸಬೇಕಾದ ಬಾಕಿ ಮೊತ್ತ ರೂ. 14.56/- ಲಕ್ಷಗಳಲ್ಲಿ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಲಭ್ಯವಿರುವ ರೂ. 5.27 ಲಕ್ಷಗಳನ್ನು ಹೊರತುಪಡಿಸಿ ಉಳಿದ ಮೊತ್ತ ರೂ. 9.29 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರಿಗೆ ಬಿಡುಗಡೆ ಮಾಡಿದೆ.

2. ಈ ವೆಚ್ಚವನ್ನು 2011-12 ನೇ ಸಾಲಿನ 5465-01-190-1-05- ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ (ಯೋಜನೆ) 133 - SDP ಯಡಿಯಲ್ಲಿ ಬಾಕಿ ಇರವ ಮೊತ್ತದಲ್ಲಿ ಭರಿಸತಕ್ಕದ್ದು.

3. ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆರ್ಥಿಕ ಇಲಾಖೆ 933 ವೆಚ್ಚ 1/2011 ದಿನಾಂಕ : 17-01-2012ರ ಸಹಮತಿ ಮೇರೆಗೆ ಹೊಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್.492

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 48 ರಾಅವಿ 2010, ದಿನಾಂಕ: 20-05-2011.
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 48 ರಾಅವಿ 2010, ದಿನಾಂಕ: 16-11-2011.
3. ಪತ್ರ ಸಂಖ್ಯೆ: ಎಲ್.ಎ.ಕ್ಯೂ.ಸಿ.ಆರ್. 72/2011-12, ದಿನಾಂಕ: 23-12-2011, ಮೈಸೂರು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರಿಂದ.

ಪ್ರಸ್ತಾವನೆ:

ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ದಿನಾಂಕ: 06-10-2005ರಂದು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅನುಸಾರ ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಳಕೆ ಬಿಲ್ಲನ್ನು ವಿಮಾನದಿಂದ ಸೇವೆ ಕಾರ್ಯಾರಂಭಗೊಂಡ ದಿನಾಂಕದಿಂದ 5 ವರ್ಷಗಳ ಅವಧಿಗೆ ರಾಜ್ಯ ಸರ್ಕಾರದಿಂದ ಭರಿಸಬೇಕಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ ನವೆಂಬರ್ 2010 ರಿಂದ ಏಪ್ರಿಲ್ 2011 ರವರೆಗೆ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸಲು ಜಿಲ್ಲಿನ ಮೊತ್ತ ರೂ. 28,85,360/- ಗಳನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಆದೇಶದಲ್ಲಿ ಮೇ 2011 ರಿಂದ ಆಗಸ್ಟ್ 2011 ರವರೆಗೆ ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲಿನ ಬಾಕಿ ಮೊತ್ತ ರೂ. 15,98,216.00 ಗಳನ್ನು ಬಿಡುಗಡೆ ಮಾಡಲಾಗಿದೆ.

4. ಮೇಲೆ ಕ್ರಮ ಸಂಖ್ಯೆ: (3)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರು ಪ್ರಸ್ತಾಪಿಸಿರುವ ಅಂಶಗಳನ್ನು ಪರಿಶೀಲಿಸಿ, ಸೆಪ್ಟೆಂಬರ್ 2011 ರಿಂದ ನವೆಂಬರ್ 2011ರ ಅಂತ್ಯಕ್ಕೆ ಬಾಕಿ ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತ ರೂ. 12,46,456.00 ಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 48 ರಾಅವಿ 2010, ಬೆಂಗಳೂರು, ದಿನಾಂಕ: 28-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೈಸೂರು ವಿಮಾನ ನಿಲ್ದಾಣದ ವಿದ್ಯುಚ್ಛಕ್ತಿ ಬಿಲ್ಲಿನ ಮೊತ್ತ ಸೆಪ್ಟೆಂಬರ್ 2011 ರಿಂದ ನವೆಂಬರ್ 2011 ರ ಅಂತ್ಯಕ್ಕೆ ಬಾಕಿ ಇರುವ ಮೊತ್ತ ರೂ. 12,46,456.00 ಗಳನ್ನು (ರೂ. ಹನ್ನೆರಡು ಲಕ್ಷದ ನಲವತ್ತಾರು ಸಾವಿರದ ನಾಲ್ಕು ನೂರ ಐವತ್ತಾರು ಮಾತ್ರ) ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ.

ಈ ಮೊತ್ತವನ್ನು 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ "5465-01-190-1-05-133 ವಿಶೇಷ ಅಭಿವೃದ್ಧಿ ಯೋಜನೆ"ಯಡಿಯಲ್ಲಿ ಲಭ್ಯವಿರುವ ರೂ. 80.00 ಕೋಟಿಗಳಿಂದ ಭರಿಸತಕ್ಕದ್ದು.

ಈ ಹಣವನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು, ಇವರು ಜಿಲ್ಲಾ ಖಜಾನೆ ಮೈಸೂರು ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್.ಎಂ.ಸಿ. ಬೆಂಗಳೂರು, ಇವರು ಈ ಮೊತ್ತವನ್ನು ಜಿಲ್ಲಾಧಿಕಾರಿಗಳ ಖಾತೆಗೆ ಅಪ್‌ಲೋಡ್ ಮಾಡುವುದು. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತಾ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 2008 ದಿನಾಂಕ: 16-05-2008 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಜಿ. ಸಂಪತ್ ಕುಮಾರ್

ಪಿ.ಆರ್. ನಂ. 493

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : ರಾಮನಗರ ಜಿಲ್ಲೆ ಕನಕಪುರ ತಾ: ಕೋಡಿಹಳ್ಳಿಯ ಸರ್ಕಾರಿ ಪದವಿ ಕಾಲೇಜಿಗೆ ದಾನಿಗಳ ಹೆಸರನ್ನು ನಾಮಕರಣ ಮಾಡುವ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಕಾಶಿಇ 29 ಯೋಜನೆ 2011-12 ದಿನಾಂಕ: 23-11-2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ರಾಮನಗರ ಜಿಲ್ಲೆ ಕನಕಪುರ ತಾ: ಕೋಡಿಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ವಂತ ಕಟ್ಟಡಕ್ಕಾಗಿ ಶ್ರೀಮತಿ ಗೌರಮ್ಮ ಇವರು ಸರ್ವೆ ನಂ. 117/2ರಲ್ಲಿ 01 ಎಕರೆ 20 ಗುಂಟೆ ಜಮೀನನ್ನು ದಾನವಾಗಿ ನೀಡಿರುತ್ತಾರೆ. ದಾನಿಗಳ ಪುತ್ರ ಹಾಗೂ ಸ್ಥಳೀಯ ಶಾಸಕರಾದ ಶ್ರೀ ಡಿ.ಕೆ. ಶಿವಕುಮಾರ್ ಮಾನ್ಯ ಶಾಸಕರು ಕನಕಪುರ ವಿಧಾನಸಭಾ ಕ್ಷೇತ್ರ ಮತ್ತು ಮಾಜಿ ಸಚಿವರು ಇವರು ಸದರಿ ಡಿಗ್ರಿ ಕಾಲೇಜಿಗೆ ಶ್ರೀಮತಿ ಗೌರಮ್ಮ ಮತ್ತು ಶ್ರೀ. ಡಿ.ಕೆ. ಕೆಂಪೇಗೌಡ ಸರ್ಕಾರಿ ಪದವಿ (ಡಿಗ್ರಿ) ಕಾಲೇಜು' ಎಂದು ನಾಮಕರಣ ಮಾಡಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಈ ವಿಷಯದ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 88 ಹೆಚ್‌ಪಿಯು 2011 ದಿನಾಂಕ: 28–01–2012

[illegible] ವಿವರಿಸಿರುವಂತೆ ರಾಮನಗರ ಜಿಲ್ಲೆ ಕನಕಪುರ ತಾ: ಕೋಡಿಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 'ಶ್ರೀಮತಿ ಗೌರಮ್ಮ [illegible] ಕಾಲೇಜು' ಎಂದು ನಾಮಕರಣ ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ [illegible] ಇವರಿಗೆ ಸರ್ಕಾರವು ಅನುಮತಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. [illegible] 494

ಉನ್ನತ ಶಿಕ್ಷಣ ಸಚಿವಾಲಯ

[illegible]: ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸರ್ಕಾರದಿಂದ ಮಂಜೂರಾಗಿರುವ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಇಡಿ 239 ಯುಆರ್‌ಸಿ 2010, ದಿನಾಂಕ: 20–12–2010.

[illegible]:

[illegible] ಆದೇಶದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇದ್ದ ವಿವಿಧ ವೃಂದದ ಬೋಧಕೇತರ ಹುದ್ದೆಗಳನ್ನು [illegible] ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡ ಬೋಧಕೇತರ ಹುದ್ದೆಗಳನ್ನು ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ

1	ಉಪಕುಲಸಚಿವರು	04 (ನಾಲ್ಕು)
2	ಸಹಾಯಕ ಕುಲಸಚಿವರು	10 (ಹತ್ತು)
3	ನಿವಾಸಿ ಅಭಿಯಂತರರು	01 (ಒಂದು)
4	ಅಧೀಕ್ಷಕರು	10 (ಹತ್ತು)
5	ತೋಟಗಾರಿಕೆ ಅಧೀಕ್ಷಕರು	01 (ಒಂದು)
6	ಪ್ರಥಮ ದರ್ಜೆ ಸಹಾಯಕರು	60 (ಅರವತ್ತು)
7	ದ್ವಿತೀಯ ದರ್ಜೆ ಸಹಾಯಕರು	50 (ಐವತ್ತು)
8	ಡಾಟ ಎಂಟ್ರಿ ಆಪರೇಟರ್	40 (ನಲವತ್ತು)
9	ಡಿ ದರ್ಜೆ ನೌಕರರು	45 (ನಲವತ್ತೈದು)
10	ಶೀಘ್ರಲಿಪಿಗಾರರು	02 (ಎರಡು)
11	ವೈದ್ಯಾಧಿಕಾರಿಗಳು	01 (ಒಂದು)
12	ಕಾಂಪೌಂಡರ್	01 (ಒಂದು)

ಅದರಂತೆ, ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 24 ಯುಆರ್‌ಸಿ 2011 ಬೆಂಗಳೂರು, ದಿನಾಂಕ: 27–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 239 ಯುಆರ್‌ಸಿ 2010. ದಿನಾಂಕ: 20–12–2010 ರಲ್ಲಿ ಕರ್ನಾಟಕ [illegible] ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲಾಗಿರುವ ಈ ಕೆಳಕಂಡ ಬೋಧಕೇತರ ಹುದ್ದೆಗಳನ್ನು ಕರ್ನಾಟಕ [illegible] ಅಧಿನಿಯಮ 2000 ಜಾರಿಯಲ್ಲಿರುವ ಪರಿನಿಯಮ ಹಾಗೂ ಸರ್ಕಾರದ ಮೀಸಲಾತಿ ಹಾಗೂ ಇತರೆ ಅನ್ವಯವಾಗುವ ನಿಯಮಗಳನ್ವಯ ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿ ಆದೇಶ ಹೊರಡಿಸಿದೆ.

1	ಉಪಕುಲಸಚಿವರು	04 (ನಾಲ್ಕು)
2	ಸಹಾಯಕ ಕುಲಸಚಿವರು	10 (ಹತ್ತು)
3	ನಿವಾಸಿ ಅಭಿಯಂತರರು	01 (ಒಂದು)
4	ಅಧೀಕ್ಷಕರು	10 (ಹತ್ತು)
5	[illegible]	01 (ಒಂದು)
6	[illegible] ದರ್ಜೆ ಸಹಾಯಕರು	60 (ಅರವತ್ತು)
7	[illegible] ದರ್ಜೆ ಸಹಾಯಕರು	50 (ಐವತ್ತು)

8	ಡಾಟ ಎಂಟ್ರಿ ಆಪರೇಟರ್	40 (ನಲವತ್ತು)
9	ಡಿ ದರ್ಜೆ ನೌಕರರು	45 (ನಲವತ್ತೈದು)
10	ಶೀಘ್ರಲಿಪಿಗಾರರು	02 (ಎರಡು)
11	ವೈದ್ಯಾಧಿಕಾರಿಗಳು	01 (ಒಂದು)
12	ಕಾಂಪೌಂಡರ್	01 (ಒಂದು)

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 863 ವೆಚ್ಚ-8 2011, ದಿನಾಂಕ: 09-01-2012ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪ್ರಕಾಶ್‌ರಾವ್ ಕೇಸರ್‌ಕರ್
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಪಿಆರ್ ನಂ. 495

ಕಂದಾಯ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು, ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 10-00 ಎಕರೆ, ಜಮೀನನ್ನು ಮೆ. ಜಿವಿಆರ್. ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ಬೆಂಗಳೂರು ಇವರಿಗೆ ಕಲ್ಲು ಗಣಿಗಾರಿಕೆಗಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1. ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಗಣಿ/77/2011-12 ಮತ್ತು ಗಣಿ/78/2011-12 ದಿನಾಂಕ: 16-08-2011 ಮತ್ತು ದಿನಾಂಕ: 26-11-2011.

ಪ್ರಸ್ತಾವನೆ:

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರು ಓದಲಾದ ದಿನಾಂಕ: 16-08-2011 ಮತ್ತು ದಿನಾಂಕ: 26-11-2011ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 10-00 ಎಕರೆ ಜಮೀನನ್ನು ಕಲ್ಲುಪುಡಿ ತೆಗೆಯಲು ಮೆ. ಜಿವಿಆರ್. ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

2. ಕಲ್ಲಪುಡಿ ತೆಗೆಯಲು ಮೆ. ಜಿವಿಆರ್.ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಬಳ್ಳಾರಿ ಜಿಲ್ಲೆ, ಸಂಡೂರು-ಕೂಡ್ಲಿಗಿ ರಸ್ತೆ, ಸಂಡೂರು-ಹೊಸಪೇಟೆ ರಸ್ತೆ ಹಾಗೂ ಸಂಡೂರು-ತೋರಣಗಲ್ಲು ರಸ್ತೆ ಕಾಮಗಾರಿ ಕೆಲಸ ಮಾಡಲು ಕೆ.ಆರ್.ಡಿ.ಸಿ.ಎಲ್. ಬೆಂಗಳೂರು ಇವರಿಂದ ಮಂಜೂರಾಗಿದ್ದು, ಸದರಿ ಕಾಮಗಾರಿ ಕೆಲಸಕ್ಕೆ 9 ಲಕ್ಷ ಎಂ.ಟಿ. ಮೆಟಲ್ ಅವಶ್ಯಕ ಆಗಿರುತ್ತದೆ. ಅರ್ಜಿದಾರರು ಕೋರಿರುವ ಜಮೀನು ಸರ್ಕಾರಿ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಯಾವುದೇ ಅತಿಕ್ರಮಣ ಇರುವುದಿಲ್ಲ. ಗ್ರಾಮದಿಂದ 4 ಕಿ.ಮೀ. ದೂರವಿದ್ದು ರಸ್ತೆ ಸಂಪರ್ಕ ಹೊಂದಿದೆ. ಹಾಗೂ ಅರಣ್ಯ ಪ್ರದೇಶಕ್ಕೆ ಸೇರಿಲ್ಲವೆಂದು ವ್ಯವಸಾಯಕ್ಕೆ ಯೋಗ್ಯ ಇರುವುದಿಲ್ಲವೆಂದು ಹಾಗೂ ಸ್ಥಳವೂ ಸೂಕ್ತವಿರುತ್ತದೆಂದು ವರದಿಸಿರುತ್ತಾರೆ.

3. ಪ್ರಸ್ತಾಪಿತ ಹೆಚ್.ಕೆ. ಹಳ್ಳಿ ಸ.ನಂ. 711 ಪೈಕಿ 10-00 ಎಕರೆ ಜಮೀನು ಸರ್ಕಾರಿ ಕಂದಾಯ ಜಮೀನಾಗಿರುತ್ತದೆ. ಕೆ.ಆರ್.ಡಿ.ಸಿ.ಎಲ್. ಇವರು ತೋರಣಗಲ್ಲಿನಿಂದ ಕೂಡ್ಲಿಗಿ ವರೆಗೆ ಮತ್ತು ಸಂಡೂರಿನಿಂದ ಹೊಸಪೇಟೆ ವರೆಗಿನ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಅವುಗಳನ್ನು ಉನ್ನತ ದರ್ಜೆ ರಸ್ತೆಗಳನ್ನಾಗಿ ಮಾಡಲು ಟೆಂಡರ್ ಕರೆದಿದ್ದು, ಮೆ. ಜಿವಿಆರ್.ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಕಾಮಗಾರಿ ನಿರ್ವಹಣೆಯನ್ನು ವಹಿಸಲಾಗಿದ್ದು, ಸದರಿಯವರು ಅಗತ್ಯವಿರುವ ಜೆಲ್ಲಿ ಮೆಟಲ್‌ಗಾಗಿ ಈಗಾಗಲೇ ಉಪನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹೊಸಪೇಟೆ ಇವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸರ್ಕಾರದ ದಿನಾಂಕ: 07-09-2011ರ ಹೊಸ ನೀತಿಯಂತೆ ನೇಮಕ ಮಾಡಿರುವ ಜಿಲ್ಲಾ ಮಟ್ಟದ ಸಮಿತಿಯು ಇದಕ್ಕೆ ಅನುಮೋದನೆ ನೀಡಬೇಕಾಗಿದ್ದು, ಈಗ ಪ್ರಸ್ತಾಪಿಸಿದ ಜಮೀನಿಗೆ ಮಂಜೂರಾದ ನಂತರವಷ್ಟೆ ಪರವಾನಿಗೆ ನೀಡಬೇಕಾಗಿರುತ್ತದೆ. ಸದರಿ ಕಂಪೆನಿಯು ರಸ್ತೆ ಕಾಮಗಾರಿ ಗುತ್ತಿಗೆ ಪಡೆದಿರುವ ಬಗ್ಗೆ ಡಿವಿಜನಲ್ ಇಂಜಿನಿಯರ್, ಕೆ.ಆರ್.ಡಿ.ಸಿ.ಎಲ್ ಇವರು ದಿನಾಂಕ: 22-07-2011 ರಲ್ಲಿ Work Order ನೀಡಿರುತ್ತಾರೆ. ರಸ್ತೆ ಕಾಮಗಾರಿ ನಿರ್ವಹಿಸಲು ಅಗತ್ಯವಾಗಿ ಬೇಕಾದ ಕಲ್ಲಿನ ಪ್ರಮಾಣ ಮತ್ತು ಕಲ್ಲುಗಣಿ ಪ್ರದೇಶದ ಬಗ್ಗೆ ಮಾಡಿರುವ ಅಂದಾಜು ಪಟ್ಟಿಯಂತೆ ಒಟ್ಟು 900788 ಮೆಟ್ರಿಕ್ ಟನ್ ಅಗತ್ಯವಿರುತ್ತದೆಂದು ಅಂದಾಜು ಪಟ್ಟಿಯೊಂದಿಗೆ ಸಲ್ಲಿಸಿರುತ್ತಾರೆ. ಪ್ರಸ್ತಾಪಿತ 10-00 ಎಕರೆ ಜಮೀನನ್ನು ಗುತ್ತಿಗೆ ನೀಡುವುದು ಅವಶ್ಯಕವಾಗಿರುವುದರಿಂದ ಸರ್ಕಾರದ ಪೂರ್ವಾನುಮೋದನೆ ನೀಡಲು ಕೋರಿರುತ್ತಾರೆ.

4. ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 55 ಎಲ್‌ಜಿಇ 2011 ಬೆಂಗಳೂರು, ದಿನಾಂಕ: 23-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ಹೆಚ್.ಕೆ.ಹಳ್ಳಿ ಸ.ನಂ. 711ರ ಪೈಕಿ 10-00 ಎಕರೆ ಜಮೀನನ್ನು ಜೆಲ್ಲಿ ಮೆಟಲ್ ತೆಗೆದು ರಸ್ತೆ ದುರಸ್ತಿಗಾಗಿ ಉಪಯೋಗಿಸಿಕೊಳ್ಳಲು ಮೆ. ಜಿವಿಆರ್.ಇನ್‌ಫ್ರಾ ಪ್ರಾಜೆಕ್ಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಕರ್ನಾಟಕ ಭೂಮಂಜೂರಾತಿ ನಿಯಮಗಳು 1969ರ ನಿಯಮ 19ರನ್ವಯ ಮೊದಲ 2 ವರ್ಷಗಳ ಅವಧಿಗೆ ಮಾರುಕಟ್ಟೆ ದರದ ಶೇಕಡ 10 ರಷ್ಟು ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ಮಂಜೂರು ಮಾಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ.

1. ಕಲ್ಲುಗಣಿ ಕೈಗೊಳ್ಳಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪರವಾನಿಗೆ ಪಡೆದು ರಸ್ತೆಗಾಗಿ ಬೇಕಾಗುವ ಕಲ್ಲು ಮಾತ್ರ ತೆಗೆಯಬೇಕು.
2. ಪರಿಸರ ರಕ್ಷಣೆ ಬಗ್ಗೆ ನಿಗದಿಪಡಿಸಿದ ಮಾರ್ಗಸೂಚಿ/ನಿಯಮಗಳನ್ನು ಪಾಲಿಸಬೇಕು.
3. ಟೆಂಡರ್ ಅವಧಿಯ ವರೆಗೆ ಮಾತ್ರ ಗುತ್ತಿಗೆ ನೀಡಿ ನಂತರ ರದ್ದುಪಡಿಸಬೇಕು.

4. ಕೆ.ಆರ್.ಡಿ.ಸಿ.ಎಲ್. ಸಂಸ್ಥೆಯು ಗುತ್ತಿಗೆ ಪಡೆದ ಕಂಪೆನಿ ಕಲ್ಲನ್ನು ರಸ್ತೆಗಾಗಿ ಮಾತ್ರ ಉಪಯೋಗಿಸುತ್ತಿದೆ ಎಂದು ಖಾತರಿಪಡಿಸಿಕೊಳ್ಳಬೇಕು.
5. ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಪಡೆಯಬೇಕು.
6. ಮೇಲೆ ತಿಳಿಸಿದ ಷರತ್ತು ಉಲ್ಲಂಘಿಸಿದರೆ ಜಮೀನು ಗುತ್ತಿಗೆ ನೀಡಿದ ಗುತ್ತಿಗೆ ಕರಾರನ್ನು ರದ್ದುಪಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1076 ವೆಚ್ಚ-7/2011, ದಿನಾಂಕ: 22-12-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ.-3)

ಪಿಆರ್ ನಂ. 496

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 21 ಎಡಿಇ 2011 ಬೆಂಗಳೂರು, ದಿನಾಂಕ: 23-01-2012.

ಸರ್ಕಾರದ ಆದೇಶ ಸಂಖ್ಯೆ: ಕಂಇ 21 ಎಡಿಇ 2011 ದಿನಾಂಕ: 25-06-2011 ರಲ್ಲಿನ ಆದೇಶದ ಭಾಗದ 5ನೇ ಸಾಲಿನಲ್ಲಿ ಲೋಕಾಯುಕ್ತಕ್ಕೆ ಎಂಬುದರ ಬದಲಾಗಿ ಮಾನ್ಯ ಲೋಕಾಯುಕ್ತರಿಗೆ ಎಂಬುದಾಗಿ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿಆರ್ ನಂ. 497

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಕಂಇ 63 ಎಲ್‌ಜಿಡಿ 2010 ಬೆಂಗಳೂರು, ದಿನಾಂಕ: 25-01-2012.

ಸರ್ಕಾರದ ಸಮ ಸಂಖ್ಯೆಯ ದಿನಾಂಕ: 12-12-2011ರ ಆದೇಶದಲ್ಲಿ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಿರೇಭೂದಿಹಾಳ ಗ್ರಾಮದ ಸ.ನಂ. 42 ಎಂದು ನಮೂದಾಗಿದ್ದು, ಅದರ ಬದಲಾಗಿ ಸರ್ವೆ ನಂಬರ್ 46 ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಜೆ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ-3)

ಪಿಆರ್ ನಂ. 498

ಕಂದಾಯ ಸಚಿವಾಲಯ

ವಿಷಯ : ಕರ್ನಾಟಕ ಭೂ ಕಂದಾಯ ಕಾಯ್ದೆ, ಕರ್ನಾಟಕ ಭೂ ಕಂದಾಯ ನಿಯಮಗಳು, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, ಕರ್ನಾಟಕ ಭೂ ಸುಧಾರಣಾ ಕಾಯ್ದೆ ಮತ್ತು ಪಿಟಿಸಿಎಲ್ ಕಾಯ್ದೆಗಳಿಗೆ ತಿದ್ದುಪಡಿ ತರುವ ಬಗ್ಗೆ

ಪ್ರಸ್ತಾವನೆ :

ಕರ್ನಾಟಕ ಭೂ ಕಂದಾಯ ಕಾಯ್ದೆ 1964, ಕರ್ನಾಟಕ ಭೂ ಕಂದಾಯ ನಿಯಮಗಳು 1966, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಮತ್ತು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978-ಕಾಯ್ದೆ ನಿಯಮಾವಳಿಗಳು ಸುಮಾರು 46 ವರ್ಷಗಳಷ್ಟು ಹಳೆಯದಾಗಿದ್ದು, ಅಂದಿನ ದಿನಮಾನ ಪರಿಸ್ಥಿತಿಗನುಗುಣವಾಗಿ ಮತ್ತು ಅಂದಿನ ಸಾಮಾಜಿಕ, ಭೌತಿಕ ಮತ್ತು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಈ ನಿಯಮಗಳನ್ನು ರಚಿಸಲಾಗಿರುತ್ತದೆ. ಅಂದಿನ ಕಾಲಮಾನದಲ್ಲಿ ಜಮೀನಿಗೆ ಹೆಚ್ಚು ಒತ್ತಡ ಇರಲಿಲ್ಲ ಹಾಗು ಜಮೀನನ್ನು ಉಳುಮೆ ಮಾಡುವುದು ಅಷ್ಟು ಲಾಭದಾಯಕವಾಗಿರಲಿಲ್ಲ. ಜಮೀನನ್ನು ಇತರೆ ಉದ್ದೇಶಗಳಿಗೆ ಪರಿವರ್ತನೆ ಮಾಡಿಕೊಳ್ಳುವ ಅವಕಾಶಗಳು ಕಡಿಮೆ ಇದ್ದವು.

ಆದರೆ ನಂತರದ ಈಗಿನ ಪರಿಸ್ಥಿತಿಯನ್ನು ಅವಲೋಕಿಸಿದಲ್ಲಿ ಜಮೀನಿನ ಮೇಲೆ ಹೆಚ್ಚಿನ ಒತ್ತಡವಿದೆ. ಜಮೀನನ್ನು ವ್ಯವಸಾಯ ಉದ್ದೇಶಗಳಿಗಿಂತ ವ್ಯವಸಾಯೇತರ ಉದ್ದೇಶಗಳಿಗೆ ಬಳಸುವುದು ಹೆಚ್ಚಾಗಿದೆ. ಆಧುನೀಕರಣ, ಜಾಗತೀಕರಣ ಮತ್ತು ಕೈಗಾರಿಕೀಕರಣಗಳ ಫಲದಿಂದ ಸಾಮಾಜಿಕ ಮತ್ತು ಆರ್ಥಿಕ ಕಲ್ಪನೆಯನ್ನು ಬದಲಾಯಿಸಿದೆ. ಸಾಮಾಜಿಕ ಮತ್ತು ಆರ್ಥಿಕ ಸದೃಢೀಕರಣಕ್ಕಾಗಿ ಜಮೀನನ್ನು ಹೆಚ್ಚು ಲಾಭದಾಯಕ ಮತ್ತು ಹೆಚ್ಚು ಉತ್ಪಾದಕತೆಯನ್ನು ಕೊಡುವಂತಹ ಉದ್ದೇಶಗಳಿಗೆ ಬಳಸಿಕೊಳ್ಳುವಂತಹ ಹವ್ಯಾಸಗಳು ಹೆಚ್ಚಿಗೆ ಕಂಡುಬರುತ್ತಿವೆ. ಹೀಗಾಗಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಳ್ಳುವುದು ಹೆಚ್ಚಾಗಿದೆ. ಈ ಎಲ್ಲಾ ಆಗುಹೋಗುಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ನಿಯಮಾವಳಿಗಳಿಗೆ ಈ ಕೆಳಕಂಡ ಅಂಶಗಳನ್ನು ಆಧರಿಸಿ ತಿದ್ದುಪಡಿ ತರುವುದು ಅಗತ್ಯವಾಗಿದೆ.

1. ಸರ್ಕಾರಿ ಜಮೀನನ್ನು ಕಾಪಾಡಿಕೊಳ್ಳುವುದು ಮತ್ತು ಸರ್ಕಾರಿ ಭೂಮಿಯ ಮೇಲೆ ಆದಷ್ಟು ಒತ್ತುವರಿಯನ್ನು ತಡೆಗಟ್ಟುವುದು ಮತ್ತು ಅದನ್ನು ಸರಿಯಾದ ಉದ್ದೇಶಗಳಿಗೆ ಬಳಸಿಕೊಳ್ಳುವುದು.

2. ಹಿಡುವಳಿ ಜಮೀನು ಮತ್ತು ಹಿಡುವಳಿದಾರರ ರಕ್ಷಣೆಗೆ ಮತ್ತು ಅವರ ಖಾತೆಗಳ ರಕ್ಷಣೆಗೆ ಸರಿಯಾದ ವ್ಯವಸ್ಥೆಗಳನ್ನು ಕಲ್ಪಿಸುವುದು.
3. ಜಮೀನಿನ ಮೇಲಿನ ಅಕ್ರಮಗಳು ಮತ್ತು ಅಪರಾಧೀಕರಣವನ್ನು ತಡೆಗಟ್ಟಲು ಕ್ರಮಕೈಗೊಳ್ಳುವುದು.
4. ಜಮೀನಿನ ಕುರಿತಾದ ಅನೇಕ ಕಟ್ಟಳೆಗಳು ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಿ ಭೂ ಕಂದಾಯದ ಆಡಳಿತವನ್ನು ಜಾರಿಗೊಳಿಸುವುದು ಮತ್ತು ಜನಮುಖಿಯಾಗಿ ಮಾಡುವುದು.

ಮೇಲ್ಕಂಡ ಉದ್ದೇಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ/ನಿಯಮಾವಳಿಗಳನ್ನು ಪರಿಶೀಲಿಸಿ ಅಗತ್ಯ ವಿಷಯಗಳ ಸೇರ್ಪಡೆ ಮಾಡುವುದು ಮತ್ತು ಅವಶ್ಯವಿದ್ದಲ್ಲಿ ಮಾರ್ಪಾಡು ಮಾಡುವುದು ಹಾಗೂ ಅನಗತ್ಯ ವಿಷಯಗಳನ್ನು ಕೈಬಿಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961, ಕರ್ನಾಟಕ ಭೂ ಕಂದಾಯ ನಿಯಮಗಳು 1966 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮ 1969 ಮತ್ತು ಪಿಟಿಸಿಎಲ್ ಕಾಯ್ದೆ 1978ಗೆ ತಿದ್ದುಪಡಿ ತರುವ ಸಂಬಂಧ ಪರಿಶೀಲಿಸಿ ವರದಿ ಪಡೆಯಲು ತಜ್ಞರನ್ನು ನೇಮಿಸುವ ಅಗತ್ಯವನ್ನು ಮನಗಂಡು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 185 ಎಲ್‌ಜಿಪಿ 2011, ಬೆಂಗಳೂರು, ದಿನಾಂಕ:27–01–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964, ಕರ್ನಾಟಕ ಭೂ ಕಂದಾಯ ನಿಯಮಗಳು 1966, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ಮತ್ತು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978–ಕಾಯ್ದೆ ಬಗ್ಗೆ ಪುನರ್ ಪರಿಶೀಲಿಸಿ ಸೂಕ್ತ ಬದಲಾವಣೆ/ತಿದ್ದುಪಡಿ ತರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ತಜ್ಞರ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ನೇಮಿಸಿ ಆದೇಶಿಸಲಾಗಿದೆ.

1.	ಶ್ರೀ ಎಂ.ಆರ್.ಹೆಗಡೆ ನಿವೃತ್ತ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ.	ಅಧ್ಯಕ್ಷರು
2.	ಶ್ರೀ ಜಿ.ಎನ್. ನಾಯಕ್ ಐ.ಎ.ಎಸ್. (ನಿವೃತ್ತ)	ಸದಸ್ಯರು
3.	ಶ್ರಿ ಜನಾರ್ಧನರಾವ್, ಐ.ಎ.ಎಸ್.(ನಿವೃತ್ತ)	ಸದಸ್ಯರು
4.	ಶ್ರೀ ಶಿವನಂಜಯ್ಯ, ಕೆ.ಎ.ಎಸ್. (ಹಿರಿಯ ವೇತನಶ್ರೇಣಿ)	ಸದಸ್ಯರು

ಸಮಿತಿಯು 3 ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ.ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ.)

ಪಿ.ಆರ್.499

ಕಂದಾಯ ಸಚಿವಾಲಯ

ತಿದ್ದುಪಡಿ

ಆದೇಶ ಸಂಖ್ಯೆ: ಆರ್‌ಡಿ 636 ಎಲ್‌ಜಿಬಿ 2011 ಬೆಂಗಳೂರು, ದಿನಾಂಕ:30–01–2012

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 636 ಎಲ್‌ಜಿಬಿ 2011 ದಿನಾಂಕ:12–01–2011 ಎಂದಿರುವುದನ್ನು ದಿನಾಂಕ : 12–01–2012 ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ.ರಾಮಸ್ವಾಮಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ.)

ಪಿ.ಆರ್.500

ಕಂದಾಯ ಸಚಿವಾಲಯ

ವಿಷಯ : ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಸರ್ವತ್ರ ನೋಂದಣಿ/ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಸಂಬಂಧವಾಗಿ ಕಂಪ್ಯೂಟರ್ ಮತ್ತು ಯುಪಿಎಸ್ ಖರೀದಿಸಲು ಟೆಂಡರ್ ಕರೆಯುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಕಂಇ 112 ಮುನೋಮು 2011 ದಿನಾಂಕ:9–1–2012
2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ:ಸಿಓಎಂಪಿ 33/2004–05, ದಿನಾಂಕ:18–1–2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರದ ದಿನಾಂಕ:9–1–2012ರ ಆದೇಶದಲ್ಲಿ ಬೆಂಗಳೂರು ನಗರದ 43 ಉಪ ನೋಂದಣಿ ಕಛೇರಿಗಳಿಗೆ ಸರ್ವತ್ರ ನೋಂದಣಿ/ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಸಂಬಂಧವಾಗಿ ಕಾರ್ಯ ನಿರ್ವಹಿಸಲು ಸಂಬಂಧವಾಗಿ 86 ಕಂಪ್ಯೂಟರ್ ಹಾಗೂ 43 ಯುಪಿಎಸ್ ಕಾನ್‌ಫಿಗರೇಷನ್‌ಗಳನ್ನು ಒಟ್ಟು ರೂ.70,52,000/–ಗಳ ವೆಚ್ಚದಲ್ಲಿ 2011–12ನೇ ಸಾಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಅನ್ವಯ ಖರೀದಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಮೇಲ್ಕಂಡ ಸಾಮಗ್ರಿಗಳನ್ನು ಇ-ಆಡಳಿತ ಇಲಾಖೆಯಲ್ಲಿ ನೋಂದಾಯಿಸಿದ ಪೂರೈಕೆದಾರರಿಂದ 2012, ಫೆಬ್ರವರಿ ಅಂತ್ಯದೊಳಗಾಗಿ ಖರೀದಿಸಿ ಸಂಬಂಧಪಟ್ಟ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಲು ಉದ್ದೇಶಿಸಲಾಗಿರುತ್ತದೆ, ಈ ರೀತಿಯಾಗಿ ಖರೀದಿಸಿ ಪೂರೈಸುವ ಸಾಮಗ್ರಿಗಳಿಗೆ ಖರೀದಿ ವೆಚ್ಚದ ಬಿಲ್ಲನ್ನು ಸರ್ಕಾರಿ ಖಜಾನೆಗೆ ಮಾರ್ಚ್ 2012 ತಿಂಗಳಿನ 15ನೇ ದಿನಾಂಕದೊಳಗೆ ಸರ್ಕಾರಿ ಖಜಾನೆಗೆ ಸಲ್ಲಿಸಬೇಕಾಗಿರುತ್ತದೆ. ಪ್ರಸ್ತುತ ಮೇಲಿನಂತೆ ಕ್ರಮ ವಹಿಸಲು ಸಮಯಾವಕಾಶ ಕಡಿಮೆ ಇರುವುದರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರ ನಿಯಮ 17(ಎ) ಪ್ರಕಾರ ರೂ.2.00 ಕೋಟಿ ಅಂದಾಜು ವೆಚ್ಚದವರೆಗಿನ ಸಾಮಗ್ರಿ ಖರೀದಿ ಸಂಬಂಧದ ಟೆಂಡರ್‌ಗೆ ಕನಿಷ್ಟ 30 ದಿವಸಗಳ ಅವಧಿಯ ನೋಟೀಸು ನೀಡಬೇಕಾಗಿರುತ್ತದೆ. ಆದ್ದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ನೇದ್ದರ ನಿಯಮ 17(2) ಅನ್ವಯ ಮೇಲ್ಕಂಡ ಸಾಮಗ್ರಿಗಳನ್ನು ಖರೀದಿಸುವ ಸಂಬಂಧದ ಟೆಂಡರ್ ನೋಟೀಸು ಅವಧಿಯನ್ನು 30 ದಿವಸಗಳಿಂದ 5 ದಿವಸಗಳಿಗೆ ಇಳಿಸಿ ಆದೇಶ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 112 ಮುನೋಮು 2011, ಬೆಂಗಳೂರು, ದಿನಾಂಕ:28-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರದ 43 ಉಪ ನೋಂದಣಿ ಕಛೇರಿಗಳಿಗೆ ಸರ್ವತ್ರ ನೋಂದಣಿ/ಸರ್ವತ್ರ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಸಂಬಂಧವಾಗಿ ಕಾರ್ಯ ನಿರ್ವಹಿಸಲು ಸಂಬಂಧವಾಗಿ 86 ಕಂಪ್ಯೂಟರ್ ಹಾಗೂ 43 ಯುಪಿಎಸ್ ಕಾನ್‌ಫಿಗರೇಷನ್‌ಗಳನ್ನು ಒಟ್ಟು ರೂ.70,52,000/- ಗಳ ವೆಚ್ಚದಲ್ಲಿ 2011-12ನೇ ಸಾಲಿಗೆ ಖರೀದಿಸುವ ಸಂಬಂಧ ಗುತ್ತಿಗೆದಾರರ ಆಯ್ಕೆಗಾಗಿ ಟೆಂಡರ್ ಕರೆಯಲು ನೋಟಿಫಿಕೇಷನ್ ಅವಧಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 17(2)ರ (ಕೆ.ಪಿ.ಟಿ.ಟಿ.) ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 15 ದಿನಗಳಿಗೆ ನಿಗಧಿಪಡಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ.ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ನೋಂ.&ಮು)

ಪಿ.ಆರ್.501

ಇಂಧನ ಸಚಿವಾಲಯ

ವಿಷಯ : ವಿದ್ಯುತ್ ಖರೀದಿ ಬಗ್ಗೆ

ಪ್ರಸ್ತಾವನೆ :

1. ವಿದ್ಯುಚ್ಛಕ್ತಿ ಕಾಯ್ದೆ 2003ರ ಕಲಂ 86(2)ರ ಅಡಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಸರ್ಕಾರಕ್ಕೆ ದಿನಾಂಕ 1ನೇ ಜೂನ್ 2010ರಂದು ಕರ್ನಾಟಕದಲ್ಲಿ ವಿದ್ಯುತ್ ವಿತರಣೆಯ ಸ್ಥಿತಿಯನ್ನು ಸುಧಾರಿಸಲು ಸಲಹೆಯನ್ನು ನೀಡಿರುತ್ತದೆ. 1ನೇ ಜೂನ್ 2010ರ ಪತ್ರದಲ್ಲಿ ಆಯೋಗವು ವಿದ್ಯುತ್‌ನ ಬೇಡಿಕೆ ಮತ್ತು ಲಭ್ಯತೆಯ ಪ್ರಮಾಣವನ್ನು ಅಂದಾಜಿಸಿದ್ದು, ವಿತರಣಾ ಕಂಪನಿಗಳು ಪ್ರತಿ ವರ್ಷಕ್ಕೆ ಸುಮಾರು 5000 ದಶಲಕ್ಷ ಯೂನಿಟ್ ವಿದ್ಯುತ್ ಅನ್ನು 3 ವರ್ಷಗಳಲ್ಲಿ ಇರಬಹುದಾದ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಕರಾರನ್ನು ಮಾಡಿಕೊಳ್ಳಲು ಶಿಫಾರಸ್ಸು ಮಾಡಿದೆ. ಇದಲ್ಲದೇ, ಜಲವಿದ್ಯುತ್ ಯೋಜನೆಯ ವಿದ್ಯುತ್ ಉತ್ಪಾದನಾ ಪ್ರಮಾಣವು ಪ್ರೊಜೆಕ್ಟೆಡ್ ಉತ್ಪಾದನೆಗಿಂತ ಕಡಿಮೆ ಆದಲ್ಲಿ ಬೇರೆ ಮೂಲಗಳಿಂದ ವಿದ್ಯುತ್ ಪಡೆಯುವುದನ್ನು ಸೂಕ್ತವಾಗಿ ಹೆಚ್ಚಿಸಲು ಪ್ರಸ್ತಾಪಿಸಿದೆ.

2. ರಾಜ್ಯದಲ್ಲಿನ ವಿದ್ಯುತ್ ಕೊರತೆಯನ್ನು ನೀಗಿಸಲು ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ರವರು ವಿದ್ಯುತ್ ಖರೀದಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 66 ಪಿಪಿಸಿ 2011, ಬೆಂಗಳೂರು, ದಿನಾಂಕ:30-01-2012.

ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಇವರು ವಿದ್ಯುತ್ ಖರೀದಿಸಲು ತೆಗೆದುಕೊಂಡ ಈ ಕೆಳಗಿನ ಕ್ರಮಗಳಿಗೆ ಘಟನೋತ್ತರ ಅನುಮೋದನೆಯನ್ನು ನೀಡಿದೆ.

(i) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದ 1ನೇ ಸೆಪ್ಟಂಬರ್ 2010 ರಿಂದ 31ನೇ ಮೇ 2011ರ ವರೆಗೆ ಟೆಂಡರ್ ಮುಖಾಂತರ 900 ಮೆಗಾ ವ್ಯಾಟ್‌ನಿಂದ 973 ಮೆಗಾ ವ್ಯಾಟ್ ಆರ್‌ಟಿಸಿ ನಿಖರ ವಿದ್ಯುತ್ ಖರೀದಿಸಿರುವ ಬಗ್ಗೆ ಮತ್ತು ಜನವರಿ 2011ರಿಂದ ಏಪ್ರಿಲ್ 2011ರ ವರೆಗೆ ಬೈಲ್ಯಾಟರಲ್ ಆಧಾರದ ಮೇಲೆ ಚತ್ತೀಸ್‌ಘಡ್ ರಾಜ್ಯದಿಂದ 300 ಮೆಗಾ ವ್ಯಾಟ್ ಆರ್‌ಟಿಸಿ ನಿಖರ ವಿದ್ಯುತ್‌ಅನ್ನು ಪಡೆಯಲು ತೆಗೆದುಕೊಂಡ ಕ್ರಮಕ್ಕೆ ;

(ii) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದಂತೆ 1ನೇ ಸೆಪ್ಟೆಂಬರ್ 2011 ರಿಂದ 15ನೇ ಜೂನ್ 2013ರ ವರೆಗೆ ಟೆಂಡರ್ ಮುಖಾಂತರ 630 ಮೆಗಾ ವ್ಯಾಟ್ ವಿದ್ಯುತ್‌ಅನ್ನು ಪಡೆಯಲು ತೆಗೆದುಕೊಂಡ ಕ್ರಮಕ್ಕೆ ;

(iii) ವಿದ್ಯುತ್ ಬೇಡಿಕೆಯು ಹೆಚ್ಚಾಗಿದ್ದರಿಂದ 1ನೇ ಅಕ್ಟೋಬರ್ 2011ರಿಂದ 15ನೇ ಜೂನ್ 2013ರ ವರೆಗೆ ಹೆಚ್ಚುವರಿಯಾಗಿ 150 ಮೆಗಾ ವ್ಯಾಟ್ ವಿದ್ಯುತ್‌ನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದ ಮೆ: ನ್ಯಾಷನಲ್ ಎನರ್ಜಿ ಟ್ರೇಡಿಂಗ್ ಅಂಡ್ ಸರ್ವೀಸಸ್ ಲಿಮಿಟೆಡ್, ಲ್ಯಾನ್‌ಕೊ-ಕೊಂಡಪಲ್ಲಿ, ಆಂಧ್ರಪ್ರದೇಶರವರಿಂದ ವಿದ್ಯುತ್ ಪಡೆಯಲು ತೆಗೆದುಕೊಂಡಿರುವ ಕ್ರಮಕ್ಕೆ ;

(iv) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದಂತೆ ಮೆ: ಪಿಟಿಸಿ ಇಂಡಿಯಾ ಲಿಮಿಟೆಡ್., ರವರಿಂದ ಅಕ್ಟೋಬರ್ 2011ರಲ್ಲಿ ಕೆಪಿಟಿಸಿಎಲ್ ಫೆರಿಫೆರಿಯಲ್ಲಿ ಪ್ರತಿ ಯೂನಿಟ್‌ಗೆ ರೂ. 4.26 ರಂತೆ 200 ಮೆಗಾ ವ್ಯಾಟ್ ಮತ್ತು 10.20 ಮೆಗಾ ವ್ಯಾಟ್ ವಿದ್ಯುತ್ ಅನ್ನು ಮೆ: ಹರೆಕೃಷ್ಣ ಮೆಟಾಲಿಕ್ಸ್ ಲಿಮಿಟೆಡ್ ರವರಿಂದ ಖರೀದಿಸಿರುವುದಕ್ಕೆ ;

(v) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದಂತೆ ಅಕ್ಟೋಬರ್ 2011ರಿಂದ ಮೇ 2012ರ ವರೆಗೆ ಮೆ: ಪಿಟಿಸಿ ಇಂಡಿಯಾ ಲಿಮಿಟೆಡ್., ರವರಿಂದ ಸರಾಸರಿ 80 ಮೆಗಾ ವ್ಯಾಟ್ ಮತ್ತು ಮೆ: NETS (ಲ್ಯಾನ್‌ಕೊ-ಕೊಂಡಪಲ್ಲಿ) ರವರಿಂದ 50 ಮೆಗಾ ವ್ಯಾಟ್ ಗರಿಷ್ಟ ಅವಧಿಯ ವಿದ್ಯುತ್ ಖರೀದಿಗೆ (Peak Hours) ;

(vi) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದಂತೆ ಮೆ:ಟಾಟಾ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್., ರವರಿಂದ 1ನೇ ಡಿಸೆಂಬರ್ 2011ರಿಂದ 15ನೇ ಜೂನ್ 2012ರ ವರೆಗೆ 300 ಮೆಗಾ ವ್ಯಾಟ್ ಗರಿಷ್ಠ ಅವಧಿ ವಿದ್ಯುತ್ ಖರೀದಿಗೆ (Peak Hours) ;

(vii) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಅನುಮೋದಿಸಿದಂತೆ 26ನೇ ನವೆಂಬರ್ 2011ರಿಂದ 15ನೇ ಜೂನ್ 2012ರ ವರೆಗೆ 210.10 ಮೆಗಾ ವ್ಯಾಟ್ ನಿಖರ ಆರ್.ಟಿ.ಸಿ. ವಿದ್ಯುತ್ ಅನ್ನು ಖರೀದಿಸಲು ತೆಗೆದುಕೊಂಡ ಕ್ರಮಕ್ಕೆ.

ಹಾಗೆಯೇ, ರಾಜ್ಯದಲ್ಲಿನ ವಿದ್ಯುತ್ ಪರಿಸ್ಥಿತಿಯನ್ನು ಕಾಲಕಾಲಕ್ಕೆ ಅವಲೋಕಿಸಲು ಹಾಗೂ ಈ ಕುರಿತು ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ರಚಿಸಿರುವ ಸಚಿವ ಸಂಪುಟದ ಉಪ ಸಮಿತಿಯು ಕಾಲಕಾಲಕ್ಕೆ ವಿದ್ಯುತ್ ಪರಿಸ್ಥಿತಿಯನ್ನು ಪುನರಾವಲೋಕಿಸಿ ನಿರ್ದಿಷ್ಟವಾಗಿ ಹೆಚ್ಚುವರಿ ವಿದ್ಯುತ್ ಅನ್ನು ಖರೀದಿಸದೇ ವಿದ್ಯುತ್ ಪರಿಸ್ಥಿತಿಯನ್ನು ನಿಭಾಯಿಸಲು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್.502

ಇಂಧನ ಸಚಿವಾಲಯ

ವಿಷಯ : ಮೆ॥ ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ, ಇಂಡಿ ತಾಲ್ಲೂಕಿನ, ಹಾವಿನಾಲ್ ಗ್ರಾಮದಲ್ಲಿ ಸ್ಥಾಪಿಸಲು ಅನುಮತಿಸಿರುವ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಯೋಜನಾ ಘಟಕದ ಸಾಮರ್ಥ್ಯವನ್ನು 9 ಮೆ.ವ್ಯಾ. ನಿಂದ 19.5 ಮೆ.ವ್ಯಾ. ಹೆಚ್ಚಿಸಲು ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಇಎನ್ 412 ಎನ್‌ಸಿಇ 2007 ದಿನಾಂಕ: 06-12-2007.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/04/ಎಫ್-32/ISMCL/11-12/4257 ದಿನಾಂಕ : 02/03-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ ಇವರಿಗೆ ಬಿಜಾಪುರ ಜಿಲ್ಲೆಯ, ಇಂಡಿ ತಾಲ್ಲೂಕಿನ, ಹಾವಿನಾಲ್ ಗ್ರಾಮದಲ್ಲಿ 9.00 ಮೆಗಾ ವ್ಯಾಟ್ (ಗ್ರಾಸ್) ಮತ್ತು 4.85 ಮೆಗಾ ವ್ಯಾಟ್ (ಎಕ್ಸ್‌ಪೋರ್ಟೆಬಲ್) ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಕೆಲವು ನಿಬಂಧನೆಗೊಳಪಟ್ಟು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ ರವರಿಗೆ ಬಿಜಾಪುರ ಜಿಲ್ಲೆಯ, ಇಂಡಿ ತಾಲ್ಲೂಕಿನ,ಹಾವಿನಾಲ್ ಗ್ರಾಮದಲ್ಲಿ ಅನುಮತಿಸಿರುವ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಘಟಕದ ಸಾಮರ್ಥ್ಯವನ್ನು ಪ್ರಸ್ತುತ ಇರುವ 9 ಮೆ.ವ್ಯಾ (ಗ್ರಾಸ್)ಗೆ ನಿಂದ 19.5 ಮೆ.ವ್ಯಾ. (ಗ್ರಾಸ್) ಮತ್ತು 4.85 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) ನಿಂದ 15.00 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) ಗೆ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 426 ಎನ್‌ಸಿಇ 2011, ಬೆಂಗಳೂರು, ದಿನಾಂಕ: 30-01-2012.

ಮೆ॥ ಇಂಡಿಯನ್ ಶುಗರ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ ರವರಿಗೆ ಬಿಜಾಪುರ ಜಿಲ್ಲೆಯ, ಇಂಡಿ ತಾಲ್ಲೂಕಿನ, ಹಾವಿನಾಲ್ ಗ್ರಾಮದಲ್ಲಿ ಕಬ್ಬಿನ ಸಿಪ್ಪೆ ಆಧಾರಿತ ಸಹ-ವಿದ್ಯುತ್ ಘಟಕದ ಸಾಮರ್ಥ್ಯವನ್ನು ಪ್ರಸ್ತುತ ಇರುವ 9 ಮೆ.ವ್ಯಾ (ಗ್ರಾಸ್) ನಿಂದ 19.5 ಮೆ.ವ್ಯಾಗೆ (ಗ್ರಾಸ್) ಮತ್ತು 4.85 ಮೆ.ವ್ಯಾ. (ಎಕ್ಸ್‌ಪೋರ್ಟೆಬಲ್) ನಿಂದ **15.00** ಮೆ.ವ್ಯಾಗೆ (ಎಕ್ಸ್‌ಪೋರ್ಟೆಬಲ್) ಹೆಚ್ಚಿಸಿ ಆದೇಶಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1) ರ ಆದೇಶದಲ್ಲಿನ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್.503

ಇಂಧನ ಸಚಿವಾಲಯ

ii. Necessary actions will be taken to request the Government of India to take up this project as a central sector project and provide the funding as per the financing plan detailed at Annexure 2 and also to facilitate mobilization of the senior term debt from the external and domestic financial institutions through sovereign borrowings, tax free bonds and credit enhancement measures.

iii. Urban Development Department will take steps to obtain the necessary administrative and legislative approvals for levy of the cess on new layouts and property developments in Bengaluru city and on Additional Floor Area Ratio to be allowed in the influence areas on either sides of the metro alignments in the Pahse-1 and Phase-2. The cess proceeds will be shared among BMRCL and other civic agencies for the purposes indicated in the preamble.

iv. Urban Development Department will undertake review of the current TDR Scheme to make it attractive and useful for all stakeholders. BMRCL will also be allowed to issue the TDRs in lieu of compensation for the land acquisition.

v. BMRCL shall explore PPP initiative for the system works, rolling stock and O&M in respect of the two new lines from R.V. Road to Bommasandra and from Gottigere to IIMB – Nagawara.

vi. Necessary action shall be taken by BMRCL to adopt a policy of differential pricing of the fare, wherever feasible, by charging higher fare in respect of the trips originating and ending in certain specified stations and charging higher fare in peak hours.

vii. BMRCL will also explore possibility of earning carbon credits for the project.

viii. Action shall be taken, as and when necessary, to finance cash shortfall, if any, by the State Government during the operation period of the Pahse-2.

ix. BMRCL is permitted to take up the preliminary works like planning & designing, including preparation of Town Planning Scheme for land acquisition, utility service shifting and geo-technical studies, in respect of all the six lines of Phase-2. The required budgetary support from the State Government for the preliminary works will be provided.

This order issues with concurrence of the Finance Department vide U.O. Note No.FD 495 EXP 9/2011(P) dated 30.11.2011.

By Order and in the name of the Governor of Karnataka,

S.RENUKARADHYA
Under Secretary to Government,
Urban Development Department.

ANNEXURE - 1

G.O. No. UDD 179 PRJ 2011, dated 21-02-2012

ABSTRACT OF COST ESTIMATE BY MAJOR CATEGORIES FOR ALL SIX LINES OF PHASE-2 ALONG WITH LINE WISE LENGTH AND NUMBER OF STATIONS

(Rupees in Crore)

Sl. No.	Major Components of Project Cost	Cost with PVC including central taxes & duties and excluding state taxes & duties						
		EW Line Extn. (Mysore Road to Kengeri)	NS Line Extn. (Puttena-halli Cross to Anjanapur Township)	NS Line Extn. (Hesara-ghatta Cross to BIEC)	EW Line Extn. (Baiyappana halli to White Field)	EW New Line RV Road - Electronic City - Bomman-sandra	NS New Line Gottigere - IIMB - Nagavara	Total
		LENGTH OF THE LINE						
		6.465 km	6.29 km	3.77 km	15.50 km	18.82 km	21.25 km (13.79 km undergro und)	72.095 km
		NUMBER OF STATIONS						
		5	5	3	14	16	18 (12 undergroun d)	61
1	Land and R&R	136.52	126.49	152.60	363.23	687.1	537.24	**2003.18**
2	Civil Engineering Works	516.59	532.4	312.48	1425.26	1724.95	4817.16	**9328.84**
3	Electrical Works	84.11	62.90	35.29	155.00	293.97	255.97	**887.24**
4	S & T Works	103.84	116.27	61.2	264.88	334.62	396.07	**1276.88**
5	Depots	40.00	60.00	30.00	80.00	238.00	288.00	**736.00**
6	Rolling Stock	361.00	285.00	199.50	950.00	627.00	690.00	**3112.50**
8	General charges including administration, contingency etc.	98.78	89.91	56.61	245.22	282.93	541.56	**1315.01**
	TOTAL	**1340.84**	**1272.97**	**847.68**	**3483.59**	**4188.57**	**7526.00**	**18659.65**
9	Taxes	**207.00**	**193.00**	**117.00**	**532.00**	**590.00**	**1204.00**	**2843.00**
10	PVC at 5% per annum	**320.11**	**299.91**	**203.54**	**829.41**	**965.52**	**2284.00**	**4902.49**
	TOTAL PROJECT COMPLETION COST	**1867.95**	**1765.88**	**1168.22**	**4845.00**	**5744.09**	**11014.00**	**26405.14**

S.RENUKARADHYA
Under Secretary to Government,
Urban Development Department.

ANNEXURE – 2

G.O. No. UDD 179 PRJ 2011, dated 21-02-2012

FUNDING PATTERN OF PHASE-2

(Rupees in Crore)

SL. NO.	NAME OF METRO CORRIDOR	GOK			GOI			SENIOR TERM DEBT (45%)	TOTAL
		EQUITY (15%)	SUB DEBT (15%)	TOTAL (30%)	EQUITY (15%)	SUB DEBT (10%)	TOTAL (25%)		
1	**E-W** – Baiyappanahalli to Whitefield	726.75	726.75	1453.50	726.75	484.50	1211.25	2180.25	4845.00
2	**E-W** – Mysore Road to Kengeri	280.19	280.19	560.38	280.19	186.80	466.99	840.58	1867.95
3	**N-S** – Puttenahalli to Anjanapura	264.88	264.88	529.76	264.88	176.59	441.47	794.65	1765.88
4	**N-S** – Hesaraghatta Cross to BIEC	175.23	175.23	350.46	175.23	116.83	292.06	525.70	1168.22
	Sub-total for 4 extensions	**1447.05**	**1447.05**	**2894.10**	**1447.05**	**964.72**	**2411.77**	**4341.18**	**9647.05**
5	R.V Road to Bommasandra	861.62	861.62	1723.24	861.62	574.39	1436.01	2584.84	5744.09
6	Gottigere - IIMB-Nagawara	1652.10	1652.10	3304.20	1652.10	1101.40	2753.50	4956.30	11014.00
	Sub-total for 2 new lines	**2513.72**	**2513.72**	**5027.44**	**2513.72**	**1675.79**	**4189.51**	**7541.14**	**16758.09**
	Grand Total	**3960.77**	**3960.77**	**7921.54**	**3960.77**	**2640.51**	**6601.28**	**11882.32**	**26405.14**

S.RENUKARADHYA
Under Secretary to Government,
Urban Development Department.

ವಿಶೇಷ ಪತ್ರಿಕೆ

ಭಾಗ - **IV-A**	ಬೆಂಗಳೂರು, ಗುರುವಾರ, ಫೆಬ್ರವರಿ ೨೩, ೨೦೧೨ (ಫಾಲ್ಗುಣ ೪, ಶಕ ವರ್ಷ ೧೯೩೩	ನಂ. ೧೩೬

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 40 ಶಾಸನ 2011, ಬೆಂಗಳೂರು, ದಿನಾಂಕ: 23.2.2012

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕ, 2011 – ಇದಕ್ಕೆ 2012ರ ಫೆಬ್ರವರಿ ತಿಂಗಳ ಇಪ್ಪತ್ತೊಂದನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2012ರ ಕರ್ನಾಟಕ ಅಧಿನಿಯಮ ಸಂಖ್ಯೆ: 11 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2012 ರ ಕರ್ನಾಟಕ ಅಧಿನಿಯಮ ಸಂಖ್ಯೆ: 11

(2012 ರ ಫೆಬ್ರವರಿ ಇಪ್ಪತ್ತಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ, 2011

(2012 ರ ಫೆಬ್ರವರಿ ಇಪ್ಪತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಜಾನಪದ ಕಲಿಕೆಯ ಮುನ್ನಡೆಯನ್ನು ಸಾಧಿಸುವುದಕ್ಕಾಗಿ ಮತ್ತು ಸಂಶೋಧನೆಯನ್ನು ಮುಂದುವರೆಸುವುದಕ್ಕಾಗಿ ಹಾಗೂ ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅದಕ್ಕೆಂದೇ ಅನನ್ಯವಾಗಿ ನಿರತವಾದ ಒಂದು ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವಾದುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

ಅಧ್ಯಾಯ – I
ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು, 2011ರ ಜುಲೈ 22ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಶೈಕ್ಷಣಿಕ ಪರಿಷತ್ತು" ಎಂದರೆ, 27ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಶೈಕ್ಷಣಿಕ ಪರಿಷತ್ತು;

(ii) "ಗೊತ್ತುಪಡಿಸಿದ ದಿನಾಂಕ" ಎಂದರೆ, ಈ ಅಧಿನಿಯಮವು ಪ್ರಾರಂಭಗೊಳ್ಳಲು ಗೊತ್ತುಪಡಿಸಿದ ದಿನಾಂಕ;

(iii) "ವಿಭಾಗ", "ಅಧ್ಯಯನಗಳ ವಿಭಾಗ", "ಸ್ನಾತಕೋತ್ತರ ಪದವಿ ವಿಭಾಗ" ಎಂದರೆ, ವಿಶ್ವವಿದ್ಯಾಲಯವು ನಡೆಸುತ್ತಿರುವ ಮತ್ತು ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದಲ್ಲಿನ ವಿಭಾಗ, ಅಧ್ಯಯನಗಳ ವಿಭಾಗ ಮತ್ತು ಸ್ನಾತಕೋತ್ತರ ಪದವಿ ವಿಭಾಗ;

(iv) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(v) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ಒಂದು ನಿವಾಸ ಘಟಕ;

(vi) "ಜಾನಪದ" ಎಂದರೆ, ಜಾನಪದ ಅಧ್ಯಯನ ಹಾಗೂ ಜನರು ಮೌಖಿಕವಾಗಿ ತಮ್ಮದಾಗಿಸಿಕೊಂಡಿರುವ ಜಾನಪದ ಸಂಸ್ಕೃತಿಯ ಎಲ್ಲಾ ಪ್ರಕಾರಗಳನ್ನು ಒಳಗೊಳ್ಳುತ್ತದೆ.

(vii) "ನಿಯಮಿಸಲಾದುದು" ಎಂದರೆ, ಪರಿನಿಯಮಗಳಿಂದ ನಿಯಮಿಸಲಾದುದು;

(viii) "ಪರಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪರಿನಿಯಮಗಳು;

(ix) "ಸಿಂಡಿಕೇಟ್" ಎಂದರೆ, 24ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಸಿಂಡಿಕೇಟ್;

(x) "ಅಧ್ಯಾಪಕರು" ಎಂದರೆ, ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು ಮತ್ತು ಪರಿನಿಯಮಗಳಿಂದ ಅಧ್ಯಾಪಕರೆಂದು ಘೋಷಿತರಾಗಬಹುದಾದ ಇತರೆ ಅಂಥ ವ್ಯಕ್ತಿಗಳು;

(xi) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ;

(xii) "ವಿಶ್ವವಿದ್ಯಾಲಯ ಅನುದಾನ ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956ರ (1956 ರ ಕೇಂದ್ರ ಅಧಿನಿಯಮ3) 4ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ;

(xiii) "ವಿಶ್ವವಿದ್ಯಾಲಯ ಗ್ರಂಥಾಲಯ" ಎಂದರೆ, ವಿಶ್ವವಿದ್ಯಾಲಯವು ಪ್ರಾರಂಭಿಸಿರಲಿ ಅಥವಾ ಇಲ್ಲದಿರಲಿ, ಅದರಿಂದ ನಿರ್ವಹಿಸಲ್ಪಡುವ ಗ್ರಂಥಾಲಯ.

ಅಧ್ಯಾಯ – II

ವಿಶ್ವವಿದ್ಯಾಲಯ

3. **ವಿಶ್ವವಿದ್ಯಾಲಯದ ಸ್ಥಾಪನೆ.**– (1) ಜಾನಪದ ಕಲಿಕೆಯ ಮುನ್ನಡೆಯನ್ನು ಸಾಧಿಸುವುದಕ್ಕಾಗಿ ಮತ್ತು ಸಂಶೋಧನೆಯನ್ನು ಮುಂದುವರೆಸುವುದಕ್ಕಾಗಿ, "ಕರ್ನಾಟಕ ಜಾನಪದ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರಿಯನ್ನು ಹೊಂದಿದ್ದು ಹಾಗೂ ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಹಾಗೂ ದಾವೆಗೊಳಗಾಗತಕ್ಕದ್ದು.

(3) ವಿಶ್ವವಿದ್ಯಾಲಯವು ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ್ದಾಗಿರತಕ್ಕದ್ದು.

(4) ಸರ್ಕಾರದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾಲಯದ ಪೂರ್ವಾನುಮೋದನೆಯ ಹೊರತು, ರಾಜ್ಯದಲ್ಲಿರುವ ಇತರ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಅಥವಾ ಸಹವರ್ತಿತವಾದ ಅಥವಾ ಅದರಿಂದ ನಿರ್ವಹಿಸಲಾದ ಯಾವೊಂದು ಸಂಸ್ಥೆಗೂ ಯಾವುದೇ ಉದ್ದೇಶಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಗೋಟಗೋಡಿ ಪ್ರದೇಶದ ಹತ್ತು ಕಿಲೋಮೀಟರುಗಳ ಪರಿಧಿಯೊಳಗಿರುವ ಯಾವುದೇ ಸ್ಥಳದಲ್ಲಿ ಇರತಕ್ಕದ್ದು.

(6) ವಿಶ್ವವಿದ್ಯಾಲಯವು, ರಾಜ್ಯದ ಇತರ ಸೂಕ್ತ ಸ್ಥಳಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ತೆರೆಯುವ ಅಧಿಕಾರವನ್ನು ಹೊಂದಿರತಕ್ಕದ್ದು.

4. **ಜಾನಪದ ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.**– ಜಾನಪದ ವಿಶ್ವವಿದ್ಯಾಲಯವು ಈ ಮುಂದಿನ ಧ್ಯೇಯೋದ್ದೇಶಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ಕರ್ನಾಟಕದ ಜನಪದ ಸಾಹಿತ್ಯ, ಕಲೆ, ಸಂಗೀತ, ರಂಗಭೂಮಿ, ಕರಕುಶಲಕಲೆ, ಜಾನಪದ ವೈದ್ಯಪದ್ಧತಿ, ಆಹಾರ, ಪಾನೀಯ, ಗುಡಿಕೈಗಾರಿಕೆ ಮೊದಲಾದ ಎಲ್ಲ ವಿಷಯಗಳನ್ನು ಒಳಗೊಂಡ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಅವಕಾಶವನ್ನು ಕಲ್ಪಿಸುವುದು;

(2) ಕನ್ನಡ ಹಾಗೂ ಇತರ ದ್ರಾವಿಡ ಭಾಷೆಗಳನ್ನು ಮಾತನಾಡುವ ಜನರ ಮತ್ತು ಇತರ ಭಾಷೆಗಳನ್ನು ಮಾತನಾಡುವ ಜನರ ಸಂಸ್ಕೃತಿ ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು;

(3) "ದೇಶೀಯವು ಏಕ ಅಲ್ಲ; ಅದು ಅನೇಕ" ಎಂಬ ಸ್ಪಷ್ಟ ತಿಳಿವಳಿಕೆಯೊಂದಿಗೆ ದೇಶೀಯ ಸಾಂಪ್ರದಾಯಿಕ ಜ್ಞಾನ ಪರಂಪರೆಗಳ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸುವುದು;

(4) ಕರ್ನಾಟಕದ ಎಲ್ಲ ಅಲಕ್ಷಿತ ಗ್ರಾಮೀಣ ಸಮುದಾಯಗಳ ಹಾಗೂ ಬುಡಕಟ್ಟುಗಳ ಅಭಿವೃದ್ಧಿಗೆ ನೆರವಾಗುವುದು;

(5) ಜಾಗತೀಕರಣದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ದೇಶೀಯ ಸಂಸ್ಕೃತಿಗಳನ್ನು ಬಲಪಡಿಸುವುದು;

(6) ವಿಶ್ವದಲ್ಲಿಯೇ ಇದು ಮೊದಲ ಜಾನಪದ ಅಧ್ಯಯನ ವಿಶ್ವವಿದ್ಯಾಲಯವಾಗಿರುವುದರಿಂದ ಎಲ್ಲ ದೇಶಗಳಿಗೆ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಿಗೆ ಮಾದರಿಯಾಗುವಂಥ ರೀತಿಯಲ್ಲಿ ಈ ವಿಶ್ವವಿದ್ಯಾಲಯವನ್ನು ರೂಪಿಸುವುದು;

(7) ಕರ್ನಾಟಕದ ವಿವಿಧ ಪ್ರದೇಶಗಳಲ್ಲಿಯ ಎಲ್ಲ ಸಮುದಾಯಗಳ ಜಾನಪದವನ್ನು ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ವೈಜ್ಞಾನಿಕವಾಗಿ ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸುವುದು;

(8) ಸಂಗ್ರಹಿಸಿದ ಜಾನಪದ ಸಾಮಗ್ರಿಯನ್ನು ವ್ಯವಸ್ಥಿತ ವಿಧಾನದಿಂದ ಡಿಜಿಟಲ್ ರೂಪದಲ್ಲಿ ಬಹುಮುಖೀ ದಾಖಲೀಕರಣವನ್ನು ಕೈಗೊಂಡು ಅದನ್ನು ಸಂರಕ್ಷಿಸುವುದು;

(9) ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಲಭ್ಯವಾಗುವ ಗ್ರಾಮೀಣ ಹಾಗೂ ಬುಡಕಟ್ಟು ಜೀವನದಲ್ಲಿ ಬಳಕೆಯಲ್ಲಿರುವ ವಸ್ತುಗಳನ್ನು, ಅವು ಕಣ್ಮರೆಯಾಗುವ ಮೊದಲೇ ಸಂಗ್ರಹಿಸುವುದು ಮತ್ತು ಅವುಗಳನ್ನು ಒಳಾಂಗಣ ಹಾಗೂ ಬಯಲು ವಸ್ತು ಸಂಗ್ರಹಾಲಯಗಳಲ್ಲಿ ವ್ಯವಸ್ಥಿತವಾಗಿ ಪ್ರದರ್ಶನ ಮಾಡುವುದು ಹಾಗೂ ಆ ಸ್ಥಳಗಳನ್ನು ಪ್ರವಾಸಿ ಆಕರ್ಷಣೆಯ ತಾಣಗಳನ್ನಾಗಿ ರೂಪಿಸುವುದು;

(10) ಶಾಲೆ, ಕಾಲೇಜು ಹಾಗೂ ಉನ್ನತ ಶಿಕ್ಷಣಕೇಂದ್ರಗಳಲ್ಲಿ ಜಾನಪದವನ್ನು ಒಂದು ಕಲಿಕೆಯ ವಿಷಯವಾಗಿ ಅಳವಡಿಸುವುದು ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಸಂಶೋಧನೆ ನಡೆಸಲು ಅವಕಾಶವನ್ನು ಮಾಡಿಕೊಟ್ಟು ಪದವಿಗಳನ್ನು ಪ್ರದಾನ ಮಾಡುವುದು. ಹಾಗೆಯೇ ದೂರಶಿಕ್ಷಣದ ಮೂಲಕ ಆಸಕ್ತ ಜನರಿಗೆ ಶಿಕ್ಷಣವನ್ನು ನೀಡುವುದು;

(11) ಜಾನಪದವನ್ನು ಬಹು ಶಿಸ್ತೀಯ ಹಾಗೂ ಅಂತರಶಿಸ್ತೀಯ ನೆಲೆಗಳಲ್ಲಿ ಅಧ್ಯಯನ ಮಾಡುವುದು ಮತ್ತು ಉನ್ನತ ಮಟ್ಟಗಳಲ್ಲಿ ಸಂಶೋಧನೆಗೆ ಪ್ರೋತ್ಸಾಹವನ್ನು ನೀಡುವುದು;

(12) ಕರ್ನಾಟಕದ ವಿವಿಧ ಭಾಷೆಗಳ ಮತ್ತು ಸಮುದಾಯಗಳ ಜಾನಪದವನ್ನು ತೌಲನಿಕವಾಗಿ ಅಧ್ಯಯನ ಮಾಡುವುದು;

(13) ಕರ್ನಾಟಕದ ಜಾನಪದವನ್ನು ಭಾರತದ ಇತರ ರಾಜ್ಯಗಳ ಜಾನಪದದೊಡನೆ ತೌಲನಿಕವಾಗಿ ಅಧ್ಯಯನ ನಡೆಸಲು ಉತ್ತೇಜಿಸುವುದು. ಅದರಂತೆಯೇ ದಕ್ಷಿಣ ಏಷಿಯಾ ಹಾಗೂ ವಿಶ್ವದ ಇತರ ದೇಶಗಳ, ಅದರಲ್ಲೂ ವಿಶೇಷವಾಗಿ, ಅಭಿವೃದ್ಧಿಶೀಲ ದೇಶಗಳ ಜಾನಪದ ಅಧ್ಯಯನವನ್ನು ನಡೆಸಲು ಪ್ರೋತ್ಸಾಹ ನೀಡುವುದು. ಈ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಕರ್ನಾಟಕದ, ಭಾರತದ ಮತ್ತು ವಿಶ್ವದ ಇತರ ವಿಶ್ವವಿದ್ಯಾಲಯಗಳು / ಸಂಶೋಧನಾ ಸಂಸ್ಥೆಗಳೊಡನೆ ಒಪ್ಪಂದ ಮಾಡಿಕೊಳ್ಳುವುದು;

(14) ಕರ್ನಾಟಕದ ಜಾನಪದವನ್ನು ಮತ್ತು ಮಹತ್ವಪೂರ್ಣ ಜಾನಪದ ಅಧ್ಯಯನಗಳನ್ನು ಇಂಗ್ಲಿಷ್, ಹಿಂದಿ ಮತ್ತು ಭಾರತೀಯ ಹಾಗೂ ವಿದೇಶಿ ಇತರ ಭಾಷೆಗಳಿಗೆ ಅನುವಾದವನ್ನು ಮಾಡುವುದು. ಹಾಗೆಯೇ ಭಾರತದ ಮತ್ತು ವಿಶ್ವದ ಇತರ ಭಾಷೆಗಳಲ್ಲಿ ಲಭ್ಯವಿರುವ ಜಾನಪದ ಪಠ್ಯಗಳನ್ನು ಹಾಗೂ ಮಹತ್ವದ ಅಧ್ಯಯನಗಳನ್ನು ಕನ್ನಡಕ್ಕೆ ಅನುವಾದವನ್ನು ಮಾಡುವುದು;

(15) ವಿಶ್ವವಿದ್ಯಾಲಯವು ಜಾನಪದ ಅಧ್ಯಯನದ ವೈವಿಧ್ಯತೆಯ ಪ್ರಕಟಣೆಗಾಗಿ ಪ್ರಸಾರಾಂಗವನ್ನು ಸ್ಥಾಪಿಸುವುದು. ಪ್ರಸಾರಾಂಗದ ಮೂಲಕ ಪುಸ್ತಕಗಳ ಪ್ರಕಟಣೆ, ವಾರ್ತಾಪತ್ರಗಳು, ಸಂಶೋಧನಾ ಪತ್ರಿಕೆಗಳು ಮೊದಲಾದ ಪ್ರಕಟಣೆಗಳನ್ನು ಹೊರತರುವುದು. ಬಹುಮಾಧ್ಯಮದ ಮೂಲಕ ಜಾನಪದ ಕಲೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡುವುದು. ಜಾನಪದದ ಬಗ್ಗೆ ಜನಸಾಮಾನ್ಯರಲ್ಲಿ ತಿಳುವಳಿಕೆಯನ್ನು ಮೂಡಿಸಲು ವಿದ್ವಾಂಸರು ಮತ್ತು ಕಲಾವಿದರಿಂದ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವುದು;

(16) ಸ್ವಾವಲಂಬಿ ಮತ್ತು ಸ್ವ ಉದ್ಯೋಗ ಕಲ್ಪಿಸುವ ಗುಡಿಕೈಗಾರಿಕೆಗಳ ಹಾಗೂ ವೃತ್ತಿ ಕೌಶಲಗಳ ಸಂವರ್ಧನೆಗೆ ಪ್ರಯತ್ನವನ್ನು ನಡೆಸುವುದು;

(17) ಪಾರಂಪರಿಕ ಕಸಬುದಾರಿಕೆಯ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಲ್ಪಿಸಿಕೊಡುವುದು ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವುದು;

(18) ಜಾನಪದದಲ್ಲಿರಬಹುದಾದ ಎಲ್ಲ ಅಸಂಗತ, ಅವೈಚಾರಿಕ, ಅಮಾನವೀಯ ಹಾಗೂ ಅವೈಜ್ಞಾನಿಕ ಅಂಶಗಳನ್ನು ನಿವಾರಿಸಿ ಸಮಾಜದ ಸ್ವಾಸ್ಥ್ಯ ಹಾಗೂ ಸಾಮರಸ್ಯವನ್ನು ಸಾಧಿಸಲು ಅವಶ್ಯಕವಾದ ಶಿಕ್ಷಣವನ್ನು ನೀಡುವುದು;

(19) ಅಲಕ್ಷಿತ ಸಮುದಾಯದವರಿಗೆ ಆಧುನಿಕ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಅವರಲ್ಲಿ ಆತ್ಮಸ್ಥೈರ್ಯವನ್ನು ಉಂಟುಮಾಡುವುದು. ಅನೌಪಚಾರಿಕ ಶಿಕ್ಷಣ, ಸಮೂಹ ಸಂವಹನ ಹಾಗೂ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳಲ್ಲಿ ಜಾನಪದವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳುವ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಅಭಿವೃದ್ಧಿ ಅಧ್ಯಯನ ವಿಭಾಗವನ್ನು ತೆರೆಯುವುದು;

(20) ಜಾನಪದ ಅಧ್ಯಯನ ವಿಷಯಕ್ಕೆ ಪ್ರಸ್ತುತ ಎನಿಸುವ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾಲಕಾಲಕ್ಕೆ ಕಾರ್ಯಗತಗೊಳಿಸುವುದು.

5. **ವಿಶ್ವವಿದ್ಯಾಲಯದ ಅಧಿಕಾರಗಳು.**– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲು ಏರ್ಪಾಡು ಮಾಡುವುದು;

(2) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರ ಯಾವುದೇ ಸಂಸ್ಥೆ ಅಥವಾ ಕೇಂದ್ರದಲ್ಲಿ ಸಂಶೋಧನೆಯನ್ನು ಪೂರೈಸಿದ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(3) ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಗೌರವ ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(4) ವಿದ್ಯಾರ್ಥಿನಿಲಯಗಳ ಮೇಲ್ವಿಚಾರಣೆಯನ್ನು ನಡೆಸುವುದು ಮತ್ತು ನಿಯಂತ್ರಿಸುವುದು ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡುವಂತೆ ಮಾಡುವುದು ಮತ್ತು ಅವರ ಆರೋಗ್ಯ ಹಾಗೂ ಸಾಮಾನ್ಯ ಕ್ಷೇಮಾಭಿವೃದ್ಧಿಗೆ ಉತ್ತೇಜನ ನೀಡಲು ವ್ಯವಸ್ಥೆಗಳನ್ನು ಮಾಡುವುದು;

(5) ವ್ಯಕ್ತಿಗಳಿಗೆ ನೀಡುವ ಯಾವುದೇ ಪದವಿ, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ತಡೆಹಿಡಿಯಬಹುದಾದ ಷರತ್ತುಗಳನ್ನು ನಿಯಮಿಸುವುದು;

(6) ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ವಿಶ್ವವಿದ್ಯಾಲಯವು ಹೊಂದಿರುವಂಥದೇ ಉದ್ದೇಶಗಳು ಮತ್ತು ಗುರಿಗಳ ಉತ್ತೇಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡಿರುವ ಇತರ ಯಾವುದೇ ವಿಶ್ವವಿದ್ಯಾಲಯ, ಪ್ರಾಧಿಕಾರ ಅಥವಾ ಸಂಘ ಅಥವಾ ಇತರ ಸಾರ್ವಜನಿಕ ಅಥವಾ ಖಾಸಗಿ ನಿಕಾಯದೊಂದಿಗೆ ಸಹಕರಿಸುವುದು;

(7) ಸಂಶೋಧನೆ ಮತ್ತು ಪ್ರಸಾರಾಂಗದ ಸಲುವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು, ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(8) ನಿಯಮಿಸಲಾದ ರೀತಿಯಲ್ಲಿ ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಪದಕಗಳು ಮತ್ತು ಬಹುಮಾನಗಳೂ ಸೇರಿದಂತೆ ಸಂಶೋಧನ ವೇತನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು;

(9) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ವಸತಿಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಅಥವಾ ಮಾನ್ಯತೆ ನೀಡುವುದು ಮತ್ತು ಅಂಥ ಯಾವುದೇ ಮಾನ್ಯತೆಗಳನ್ನು ಹಿಂತೆಗೆದುಕೊಳ್ಳುವುದು;

(10) ನಿಯಮಿಸಬಹುದಾದಂತೆ ಶುಲ್ಕವನ್ನು ನಿಗದಿಪಡಿಸುವುದು ಮತ್ತು ಅಂಥ ಶುಲ್ಕವನ್ನು ಕೇಳುವುದು ಹಾಗೂ ಸ್ವೀಕರಿಸುವುದು ಮತ್ತು ವಿಶ್ವವಿದ್ಯಾಲಯದ ದತ್ತಿಗಳು ಮತ್ತು ಇತರ ಸ್ವತ್ತುಗಳು ಹಾಗೂ ನಿಧಿಗಳನ್ನು ಧಾರಣ ಮಾಡುವುದು ಮತ್ತು ನಿರ್ವಹಿಸುವುದು;

(11) ಸರ್ಕಾರದ ಅನುಮೋದನೆಯೊಂದಿಗೆ, ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು;

(12) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ ಅವುಗಳ ಅಡಿಯಲ್ಲಿ ಬರುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದು ಮತ್ತು ಅದರ ಎಲ್ಲ ಹಕ್ಕುಗಳು ಮತ್ತು ದಾಯಿತ್ವಗಳನ್ನು ವಶಕ್ಕೆ ತೆಗೆದುಕೊಳ್ಳುವುದೂ ಸೇರಿದಂತೆ ಇತರ ನಿಕಾಯಗಳು ಅಥವಾ ವ್ಯಕ್ತಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು;

(13) ಈ ಅಧಿನಿಯಮದ ಉದ್ದೇಶಗಳಿಗಾಗಿ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವುದು ಮತ್ತು ಧಾರಣ ಮಾಡುವುದು ಮತ್ತು ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಇದರಿಂದ ಆರ್ಜಿಸಿದ ಯಾವುದೇ ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡುವುದು ಅಥವಾ ಯಾವುದೇ ಚರ ಸ್ವತ್ತನ್ನು ಮಾರಾಟ ಮಾಡುವುದು ಅಥವಾ ಅನ್ಯಥಾ ವರ್ಗಾವಣೆ ಮಾಡುವುದು ಮತ್ತು ಒಪ್ಪಂದ ಮಾಡಿಕೊಳ್ಳುವುದು ಮತ್ತು ಅವಶ್ಯವಾದ ಇತರ ಎಲ್ಲ ಕಾರ್ಯಗಳನ್ನೂ ಮಾಡುವುದು;

(14) ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರುವ ಅಥವಾ ಅದು ಆರ್ಜಿಸಿರುವ ಯಾವುದೇ ಸ್ಥಿರ ಸ್ವತ್ತನ್ನು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆ ಗುತ್ತಿಗೆ, ಮಾರಾಟ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ.

6. ವಿಶ್ವವಿದ್ಯಾಲಯಕ್ಕೆ ಪ್ರವೇಶ.– (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯವು ಎಲ್ಲ ವ್ಯಕ್ತಿಗಳ ಪ್ರವೇಶಕ್ಕೆ ಮುಕ್ತವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವುದಾವುದೂ,–

(ಎ) ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

(ಬಿ) ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿಕೊಳ್ಳಲು,

-- ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

7. ನಿರ್ದೇಶನಗಳನ್ನು ನೀಡಲು ಅಧಿಕಾರ.– ಕುಲಾಧಿಪತಿಯು, ತಾನಾಗಿಯೇ ಆಗಲೀ ಅಥವಾ ಸರ್ಕಾರದ ಶಿಫಾರಸಿನ ಮೇಲಾಗಲೀ ವಿಶ್ವವಿದ್ಯಾಲಯದ ಆಡಳಿತ ಮತ್ತು ಶೈಕ್ಷಣಿಕ ಕಾರ್ಯನಿರ್ವಹಣೆಯು ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರುವ ದೃಷ್ಟಿಯಿಂದ ಹಾಗೂ ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು.

8. ವಿಶ್ವವಿದ್ಯಾಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ.– ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹಾರಗಳು ಈ ಅಧಿನಿಯಮ ಅಥವಾ ಪರಿನಿಯಮಗಳು, ನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಉಪಬಂಧಗಳಿಗೆ ಸುಸಂಗತವಾಗಿಲ್ಲವೆಂದು ಅಥವಾ ಅನ್ಯಥಾ ಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು.

ಅಧ್ಯಾಯ - III

ವಿಶ್ವವಿದ್ಯಾಲಯದ ಅಧಿಕಾರಿಗಳು

9. **ವಿಶ್ವವಿದ್ಯಾಲಯದ ಅಧಿಕಾರಿಗಳು.–** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(1) ಕುಲಾಧಿಪತಿಯವರು;

(2) ಸಹ-ಕುಲಾಧಿಪತಿಯವರು;

(3) ಕುಲಪತಿಯವರು;

(4) ಕುಲಸಚಿವರು;

(5) ಕುಲಸಚಿವರು (ಮೌಲ್ಯಮಾಪನ);

(6) ಹಣಕಾಸು ಅಧಿಕಾರಿ;

(7) ವ್ಯಾಸಂಗ ವಿಭಾಗಗಳ ಡೀನರು;

(8) ನಿರ್ದೇಶಕರು, ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ; ಮತ್ತು

(9) ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಪರಿನಿಯಮಗಳಿಂದ ಘೋಷಿತರಾಗಬಹುದಾದ ಅಂಥ ಇತರ ಅಧಿಕಾರಿಗಳು.

10. **ಕುಲಾಧಿಪತಿಯವರು.–** (1) ಕರ್ನಾಟಕದ ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು. ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಾಗಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು.

(2) ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ, ಕುಲಾಧಿಪತಿಯವರು ಅವಶ್ಯಕವಿರುವಷ್ಟರಮಟ್ಟಿಗೆ ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕದ್ದು.

(3) ಕುಲಾಧಿಪತಿಯವರು ಸ್ವತಃ ತಾವಾಗಿಯೇ ಆಗಲೀ ಅಥವಾ ಅರ್ಜಿಯ ಮೇಲಾಗಲೀ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ, ಕೈಗೊಳ್ಳಲಾದ ಯಾವುದೇ ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ ಯಾವುದೇ ಅಂಥ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕು, ರದ್ದುಗೊಳಿಸಬೇಕು, ಪರಿಷ್ಕರಣಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ಕುಲಾಧಿಪತಿಯವರಿಗೆ ತೋರಿದರೆ ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರರಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು:

ಮತ್ತು ಪರಂತು, ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕದ್ದಲ್ಲ.

11. **ಪರಿಶೀಲನೆ.– (1)** ಕುಲಾಧಿಪತಿಯವರು ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯ, ಅದರ ಕಟ್ಟಡಗಳು, ವಿಶ್ವವಿದ್ಯಾಲಯದ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಮತ್ತು ಉಪಕರಣಗಳು ಹಾಗೂ ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುವೇ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರೆ ಕೆಲಸದ ಪರಿಶೀಲನೆ ನಡೆಸುವಂತೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ ನಡೆಸುವ ತಮ್ಮ ಆಶಯದ ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸನ್ನು ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಸಿಂಡಿಕೇಟಿಗೆ ತಿಳಿಸತಕ್ಕದ್ದು ಮತ್ತು ಅದರ ಮೇಲಣ ಸಿಂಡಿಕೇಟ್‌ನ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆಯನ್ನು ನೀಡಿ ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಸಿಂಡಿಕೇಟ್, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕದ್ದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

(4) (2)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲಮಿತಿಯೊಳಗೆ ಸಿಂಡಿಕೇಟ್, ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮ ಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಸಿಂಡಿಕೇಟ್‌ನಿಂದ ಸಲ್ಲಿಸಲಾದ ವಿವರಣೆ ಅಥವಾ ಮಾಡಿಕೊಳ್ಳಲಾದ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಸಿಂಡಿಕೇಟ್ ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಕುಲಾಧಿಪತಿಯವರ ಅಂಥ ನಿರ್ದೇಶನಗಳನ್ನು ಸಿಂಡಿಕೇಟ್ ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು ಅಂಥ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

(5) ಕುಲಾಧಿಪತಿಯವರು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

12. ಸಹ-ಕುಲಾಧಿಪತಿ.- (1) ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಖಾತೆಯ ಪ್ರಭಾರವನ್ನು ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಸಹ ಕುಲಾಧಿಪತಿಯಾಗಿರತಕ್ಕದ್ದು.

(2) ಅವರು ಕುಲಾಧಿಪತಿಯವರ ಗೈರು ಹಾಜರಿಯಲ್ಲಿ ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

13. ಕುಲಪತಿ.- (1) ಕುಲಪತಿಯು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ಸರ್ಕಾರವು, ಕುಲಾಧಿಪತಿಯಿಂದ, ಸರ್ಕಾರದಿಂದ, ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಮತ್ತು ಸಿಂಡಿಕೇಟ್‌ನಿಂದ ನಾಮನಿರ್ದೇಶಿತರಾದ ಒಬ್ಬೊಬ್ಬ ವ್ಯಕ್ತಿಯಿಂದ ಕೂಡಿದ ನಾಲ್ಕು ಮಂದಿ ಸದಸ್ಯರನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು. ಸರ್ಕಾರವು, ನಾಲ್ಕು ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು. ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಸರ್ಕಾರದ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು ಸಮಿತಿಯ ಸಂಚಾಲಕರಾಗಿರತಕ್ಕದ್ದು.

(3) ಸರ್ಕಾರದ, ವಿಶ್ವವಿದ್ಯಾಲಯದ ಅಥವಾ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವೊಬ್ಬ ವ್ಯಕ್ತಿಯನ್ನೂ ಶೋಧನಾ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(4) ಶೋಧನಾ ಸಮಿತಿಯು, ಖ್ಯಾತ ಜಾನಪದ ತಜ್ಞರಾದ ಮೂವರು ವ್ಯಕ್ತಿಗಳ ಒಂದು ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಸರ್ಕಾರವು ಆ ಪಟ್ಟಿಯನ್ನು ತನ್ನ ಶಿಫಾರಸ್ಸಿನೊಂದಿಗೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಆ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ಕುಲಾಧಿಪತಿಯವರು ಅವಶ್ಯವೆಂದು ಪರಿಗಣಿಸಿದರೆ ಸರ್ಕಾರದ ಸಹಮತಿಯೊಡನೆ ಎರಡನೆಯ ಪಟ್ಟಿಯನ್ನು ತರಿಸಿಕೊಳ್ಳಬಹುದು ಮತ್ತು ಶೋಧನಾ ಸಮಿತಿಯು ಎರಡನೆಯ ಪಟ್ಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಅದು ಅಂತಿಮವಾಗಿರತಕ್ಕದ್ದು.

(5) ಯಾವೊಬ್ಬ ವ್ಯಕ್ತಿಯ ವಯಸ್ಸು ಅರುವತ್ತೇಳು ವರ್ಷವನ್ನು ಮೀರಿದರೆ ಅಂತಹವರನ್ನು ಕುಲಪತಿಯನ್ನಾಗಿ ನೇಮಕಮಾಡತಕ್ಕದ್ದಲ್ಲ ಅಥವಾ ಅವರು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(6) ಕುಲಪತಿಯವರು, ಕುಲಾಧಿಪತಿಯವರ ಇಷ್ಟಪರ್ಯಂತ ಮತ್ತು (5)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಅವರು ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(7) ಕುಲಪತಿಯವರನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವರಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡ ಕಾರಣದ ಮೇಲೆ ಮತ್ತು ಸರ್ಕಾರವು (8)ನೇ ಉಪಪ್ರಕರಣದ ಅಡಿಯಲ್ಲಿ ಅದರಿಂದ ಆದೇಶಿಸಲಾದ ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ಮತ್ತು ಅದು ನೀಡಿದ ಶಿಫಾರಸ್ಸಿನನ್ವಯ ಕುಲಾಧಿಪತಿಯು ಹೊರಡಿಸಿದ ಆದೇಶದ ಹೊರತು, ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(8) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ ಅದು ಒಳಗೊಂಡಂತೆ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಸರ್ಕಾರವು, ವರದಿಯನ್ನು ಪರಿಶೀಲಿಸಿದ ನಂತರ ಕುಲಾಧಿಪತಿಗೆ ಸಲಹೆಯನ್ನು ನೀಡತಕ್ಕದ್ದು. ಕುಲಾಧಿಪತಿಯವರು ಸಾಧ್ಯವಾದಷ್ಟುಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

(9) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು, ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ. ಕುಲಪತಿಯಾಗಿ ತಮ್ಮ ಅಧಿಕಾರಾವಧಿಯಲ್ಲಿ ವಯೋನಿವೃತ್ತಿಯ ಮೇಲೆ ನಿವೃತ್ತರಾಗುವ ಕುಲಪತಿಯ ಸಂದರ್ಭದಲ್ಲಿ, ಈಗಾಗಲೇ ನಿರ್ಧರಿಸಲಾದ ಅವರ ಸೇವಾ ಷರತ್ತುಗಳು ಚಾಲ್ತಿಯಲ್ಲಿರುವುದು ಮುಂದುವರಿಯತಕ್ಕದ್ದು. ಅವರ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆ ಹಿಡಿಯತಕ್ಕದ್ದು, ಅವುಗಳನ್ನು ಅವರು ಕುಲಪತಿಯಾಗಿ ಪದವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡತಕ್ಕದ್ದು.

(10) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ ಉಪಲಬ್ಧಿಗಳು ಸೇರಿದಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯವರು ನಿರ್ಣಯಿಸತಕ್ಕದ್ದು. ಅವರು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯೆಗಳನ್ನು ಉಪಲಬ್ಧಿಗಳಿಂದ ಕಳೆಯತಕ್ಕದ್ದು.

14. ಕುಲಪತಿಯವರ ಅಧಿಕಾರಗಳು.– (1) ಕುಲಪತಿಯು, ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಚಲಾಯಿಸತಕ್ಕದ್ದು. ಅವರು ವಿಶ್ವವಿದ್ಯಾಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅವರು ಶೈಕ್ಷಣಿಕ ಪರಿಷತ್ತು, ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು. ಅವರು ಕುಲಾಧಿಪತಿಯ ಮತ್ತು ಸಹ–ಕುಲಾಧಿಪತಿಯ ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವರು ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರು ಮತ ಚಲಾಯಿಸಲು ಹಕ್ಕುಳ್ಳವರಾಗಿರತಕ್ಕದ್ದು.

(3) ಅವರು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ಅವರು ತಾವಾಗಿಯೇ ಆಗಲೀ ಅಥವಾ ತಮ್ಮಿಂದ ಲಿಖಿತದಲ್ಲಿ ಅಧಿಕೃತರಾದ ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲೀ, ಶೈಕ್ಷಣಿಕ ಪರಿಷತ್ತು, ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯಬಹುದು ಮತ್ತು ಈ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಪತಿಯವರು, ತ್ವರಿತ ಕ್ರಮವು ಅಗತ್ಯವೆಂದು ಅವರು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವರು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ, ಸಾಮಾನ್ಯವಾಗಿ ಆ ವಿಷಯವನ್ನು ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು:

ಪರಂತು, ಕುಲಪತಿಯವರು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಸರ್ಕಾರದ ಮೂಲಕ ಕುಲಾಧಿಪತಿಯವರಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಕುಲಪತಿಯವರ ವರದಿಯ ಆಧಾರದ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನದಿಂದ ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಬಾಧಿತನಾದರೆ, ಅವರಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆ ವ್ಯಕ್ತಿಯು ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಅಲ್ಲದೆ ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ವಿಶ್ವವಿದ್ಯಾಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಅಥವಾ ಒಂದು ಸಂಸ್ಥೆಗೆ ಅಥವಾ ಶಿಕ್ಷಣ ವ್ಯಾಸಂಗ ಕ್ರಮಕ್ಕೆ ಸಂಯೋಜನೆಯನ್ನು ಮಂಜೂರು ಮಾಡಲು ಚಲಾಯಿಸತಕ್ಕದ್ದಲ್ಲ ಮತ್ತು ಈ ಉಪಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ರಚಿಸಿದರೆ ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಕುಲಾಧಿಪತಿಯವರ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮಕ್ಕೆ ಅನುಸಾರವಾಗಿ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು.

(6) ಕುಲಪತಿಯವರು, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

15. ಕುಲಪತಿಯವರ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯ ವ್ಯವಸ್ಥೆ.– (1) ರಜೆ, ಅನಾರೋಗ್ಯ ಅಥವಾ ಯಾವುದೇ ಇತರ ಕಾರಣದಿಂದಾಗಿ ಕುಲಪತಿಯವರ ತಾತ್ಕಾಲಿಕ ಗೈರುಹಾಜರಿಯ ಅವಧಿಯಲ್ಲಿ, ಕುಲಾಧಿಪತಿಯವರು, ಕುಲಪತಿಯವರ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾವು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಗಳನ್ನು ಮಾಡಬಹುದು:

ಪರಂತು, ಕುಲಾಧಿಪತಿಯವರು ವ್ಯವಸ್ಥೆಗಳನ್ನು ಮಾಡುವವರೆಗೆ, ಕುಲಪತಿಯವರು, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಜ್ಯೇಷ್ಠತಮ ಡೀನರನ್ನು ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಅವಧಿಗೆ ಅಥವಾ ಕುಲಾಧಿಪತಿಯವರು ಅಂಥ ವ್ಯವಸ್ಥೆಗಳನ್ನು ಮಾಡುವವರೆಗೆ, ಇವುಗಳಲ್ಲಿ ಯಾವುದು ಮುಂಚಿತವೋ ಅವರೆಗೆ, ಕುಲಪತಿಯವರ ಪ್ರಸಕ್ತ ಕರ್ತವ್ಯಗಳ ಪ್ರಭಾರದಲ್ಲಿರಿಸಲು ನಿಯೋಜಿಸಬಹುದು.

(2) ಕುಲಪತಿಯವರ ಹುದ್ದೆಯು ಭರ್ತಿಯಾಗದೆ ಖಾಲಿ ಉಳಿದಿರುವ ಅವಧಿಯಲ್ಲಿ, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಜೇಷ್ಠತಮ ಡೀನರನ್ನು ಕುಲಪತಿಯಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಕುಲಾಧಿಪತಿಯವರು ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಕುಲಪತಿಯವರ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲ ವಿಶೇಷಾಧಿಕಾರಗಳಿಗೆ ಮತ್ತು ಇದರ ಸಂಬಂಧದಲ್ಲಿ ಪರಿನಿಯಮಗಳೇನಾದರೂ ಇದ್ದರೆ ಅವುಗಳಿಗೆ ಅನುಸಾರವಾಗಿ ಕುಲಾಧಿಪತಿಯು ನಿರ್ಣಯಿಸಬಹುದಾದಂತೆ ಅಂಥ ಉಪಲಬ್ಧಿಗಳಿಗೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

16. ಕುಲಸಚಿವರು.– (1) ಕುಲಸಚಿವರು, ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸರ್ಕಾರದ ಉನ್ನತ ಕಾಲ ಶ್ರೇಣಿಯ ಗ್ರೂಪ್ 'ಎ' ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಅಥವಾ ವಿಶ್ವವಿದ್ಯಾಲಯದ ಯಾವುದೇ ವ್ಯಾಸಂಗ ವಿಭಾಗದಲ್ಲಿ ಕನಿಷ್ಠ ಐದು ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಒಬ್ಬ ಜೇಷ್ಠತಮ ಪ್ರಾಧ್ಯಾಪಕರನ್ನು ವಿಶ್ವವಿದ್ಯಾಲಯದ ಕುಲಸಚಿವರಾಗಿ ಸರ್ಕಾರವು ನೇಮಕ ಮಾಡಬಹುದು.

(2) ಕುಲಸಚಿವರು, ಶೈಕ್ಷಣಿಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಪದನಿಮಿತ್ತ ಸದಸ್ಯ– ಕಾರ್ಯದರ್ಶಿಯೂ ಮತ್ತು ಹಣಕಾಸು ಸಮಿತಿಯ ಸದಸ್ಯನೂ ಆಗಿರತಕ್ಕದ್ದು.

(3) ಈ ಮುಂದಿನವು ಕುಲಸಚಿವರ ಕರ್ತವ್ಯವಾಗಿರತಕ್ಕದ್ದು,–

(ಎ) ವಿಶ್ವವಿದ್ಯಾಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಕುಲಪತಿ ಅಥವಾ ಸಿಂಡಿಕೇಟ್ ಅವರ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕರಾಗಿರುವುದು;

(ಬಿ) ಸಿಂಡಿಕೇಟಿನ, ಶೈಕ್ಷಣಿಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಳಿಯ ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸಭೆಗಳನ್ನು ಕರೆಯುವ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

(ಸಿ) ಅವರು ಸದಸ್ಯ – ಕಾರ್ಯದರ್ಶಿಯಾಗಿರುವ ಪ್ರಾಧಿಕಾರಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

(ಡಿ) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ಸರ್ಕಾರಕ್ಕೆ ಒದಗಿಸುವುದು.

(4) ಕುಲಸಚಿವರು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಬಹುದಾದ ಮತ್ತು ಕುಲಪತಿಯು ಕಾಲಕಾಲಕ್ಕೆ ಹಂಚಿಕೆ ಮಾಡಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಸಚಿವರಿಗೆ ಒಬ್ಬರು ಅಥವಾ ಅದಕ್ಕೂ ಹೆಚ್ಚಿನ ಉಪಕುಲಸಚಿವರು ಮತ್ತು ಸಹಾಯಕ ಕುಲಸಚಿವರು ನೆರವು ನೀಡಬಹುದು.

(6) ವಿಶ್ವವಿದ್ಯಾಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

17. ಕುಲಸಚಿವರು (ಮೌಲ್ಯಮಾಪನ).– (1) ಕುಲಸಚಿವರು (ಮೌಲ್ಯಮಾಪನ) ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸರ್ಕಾರವು, ಯಾವುದೇ ವಿಶ್ವವಿದ್ಯಾಲಯದ ವ್ಯಾಸಂಗ ವಿಭಾಗದ ಒಬ್ಬ ಹಿರಿಯ ಸದಸ್ಯನನ್ನು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಆಗಿ ನೇಮಕ ಮಾಡಬಹುದು:

ಪರಂತು, ಕುಲಸಚಿವರು (ಮೌಲ್ಯಮಾಪನ) ಆಗಿ ನೇಮಿಸಲು ಅಂಥ ವ್ಯಕ್ತಿಯು ಲಭ್ಯವಿರದಿದ್ದಲ್ಲಿ, ಕುಲಪತಿಯವರು ಶಿಫಾರಸು ಮಾಡಿದ ಮೂವರಿಗಿಂತ ಕಡಿಮೆಯಾಗಿರದ ವ್ಯಕ್ತಿಗಳ ಪಟ್ಟಿಯಿಂದ, ಸಿಂಡಿಕೇಟಿನ ಅನುಮೋದನೆಯೊಡನೆ, ಕುಲಸಚಿವರು (ಮೌಲ್ಯಮಾಪನ) ಇವರನ್ನು ಕುಲಪತಿಯವರು ನೇಮಕಮಾಡತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಲಾದ ಸಮಯದೊಳಗೆ, ಪಟ್ಟಿಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಸಿಂಡಿಕೇಟ್ ಅನುಮೋದಿಸದಿದ್ದರೆ, ಸರ್ಕಾರವು, ಕುಲಪತಿಯವರೊಡನೆ ಸಮಾಲೋಚಿಸಿ, ಕುಲಸಚಿವರು (ಮೌಲ್ಯಮಾಪನ) ಆಗಲು ಸೂಕ್ತವೆಂದು ತಾನು ಭಾವಿಸುವ ಅಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು. ಹಾಗೆ ನೇಮಕಗೊಂಡ ಕುಲಸಚಿವರು (ಮೌಲ್ಯಮಾಪನ) ಇವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಉಪಲಬ್ಧಿಗಳು ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(2) ಕುಲಸಚಿವರು (ಮೌಲ್ಯಮಾಪನ) ಇವರು ಸಿಂಡಿಕೇಟ್, ಶೈಕ್ಷಣಿಕ ಪರಿಷತ್ತು, ಹಣಕಾಸು ಸಮಿತಿ ಮತ್ತು ಎಲ್ಲ ಇತರ ವ್ಯಾಸಂಗ ವಿಭಾಗಗಳ ಸದಸ್ಯರಾಗಿರತಕ್ಕದ್ದು.

(3) ಕುಲಸಚಿವರು (ಮೌಲ್ಯಮಾಪನ) ಇವರು ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಹಾಯಕವಾದ ಎಲ್ಲ ಇತರ ವಿಷಯಗಳ ಪ್ರಭಾರದಲ್ಲಿರತಕ್ಕದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂಥ ಅಥವಾ ಕುಲಪತಿಯಿಂದ ಹಂಚಿಕೆಯಾಗಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ಕುಲಸಚಿವರು (ಮೌಲ್ಯಮಾಪನ) ಇವರಿಗೆ ಒಬ್ಬ ಅಥವಾ ಹೆಚ್ಚು ಉಪ ಕುಲಸಚಿವರು (ಮೌಲ್ಯಮಾಪನ) ಮತ್ತು ಸಹಾಯಕ ಕುಲಸಚಿವರು(ಮೌಲ್ಯಮಾಪನ) ಇವರುಗಳು ನೆರವು ನೀಡಬಹುದು.

18. ಹಣಕಾಸು ಅಧಿಕಾರಿ.– (1) ಹಣಕಾಸು ಅಧಿಕಾರಿಯು, ಕುಲಪತಿಯವರು ಸಿಂಡಿಕೇಟಿಗೆ ಶಿಫಾರಸ್ಸು ಮಾಡಿದ, ಲೆಕ್ಕ ಪರಿಶೋಧನೆ, ಲೆಕ್ಕ ಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ಜಂಟಿ ನಿಯಂತ್ರಕ ಕೇಡರ್‌ನಲ್ಲಿಯ ಅಧಿಕಾರಿಯು ಅಥವಾ ಉಪಮಹಾಲೇಖಪಾಲ ದರ್ಜೆಯ ಒಬ್ಬ ಅಧಿಕಾರಿಯು ಇರುವ ಮೂರು ವ್ಯಕ್ತಿಗಳಿಗಿಂತ ಕಡಿಮೆಯಾಗಿರದ ಹೆಸರುಗಳ ಪಟ್ಟಿಯಿಂದ ಸಿಂಡಿಕೇಟಿನ ಅನುಮೋದನೆಯೊಂದಿಗೆ ಸರ್ಕಾರದಿಂದ ನೇಮಕ ಮಾಡಲಾಗುವ, ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಲಾದ ಸಮಯದೊಳಗೆ ಪಟ್ಟಿಯಲ್ಲಿರುವ ಯಾವೊಬ್ಬರನ್ನು ಸಿಂಡಿಕೇಟ್ ಅನುಮೋದಿಸದಿದ್ದರೆ, ಸರ್ಕಾರವು, ಹಣಕಾಸು ಅಧಿಕಾರಿಯಾಗಿರಲು ಸೂಕ್ತವೆಂದು ತಾನು ಭಾವಿಸುವ ಅಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು.

(2) ಹಣಕಾಸು ಅಧಿಕಾರಿಯ ನೇಮಕದ ಅವಧಿ ಮತ್ತು ಅವರ ಉಪಲಬ್ಧಿಗಳು ಹಾಗೂ ಇತರ ನಿಬಂಧನೆಗಳು ಮತ್ತು ಷರತ್ತುಗಳು ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿ ಅಥವಾ ಕುಲಸಚಿವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವರು ಶೈಕ್ಷಣಿಕ ಪರಿಷತ್ತಿನ ಪದನಿಮಿತ್ತ ಸದಸ್ಯರಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

19. ಕುಲಸಚಿವರ, ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು.– (1) ಕುಲಸಚಿವರ ಅಥವಾ ಹಣಕಾಸು ಅಧಿಕಾರಿಯ ಅಮಾನತು ಅಥವಾ ತಾತ್ಕಾಲಿಕ ಗೈರು ಹಾಜರಿಯ ಸಂದರ್ಭದಲ್ಲಿ, ಕುಲಾಧಿಪತಿಯವರು, ಕುಲಸಚಿವರ ಅಥವಾ ಸಂದರ್ಭಾನುಸಾರ ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾಲಯದ ಇತರ ಸೂಕ್ತ ಅಧಿಕಾರಿಗೆ ಪ್ರಾಧಿಕಾರವನ್ನು ನೀಡಬಹುದು.

(2) ಕುಲಸಚಿವರ ಅಥವಾ ಹಣಕಾಸು ಅಧಿಕಾರಿಯ ಪದದಲ್ಲಿಯ ಖಾಲಿಸ್ಥಾನವನ್ನು ಭರ್ತಿ ಮಾಡಲು ಸೂಕ್ತ ಅಧಿಕಾರಿಯನ್ನು ನೇಮಕ ಮಾಡುವುದನ್ನು ಬಾಕಿ ಇರಿಸಿ, ಕುಲಪತಿಯು ತಮ್ಮ ವಿವೇಚನಾನುಸಾರ, ಅಂಥ ಖಾಲಿ ಹುದ್ದೆಗಳ ಕರ್ತವ್ಯವನ್ನು ನಿರ್ವಹಿಸಲು, ನೇಮಕ ಮಾಡುವವರೆಗೆ, ಯಾವೊಬ್ಬ ಅಧಿಕಾರಿಯನ್ನು ಪ್ರಾಧಿಕರಿಸಬಹುದು. ಕುಲಪತಿಯು, ಈ ಉಪಪ್ರಕರಣದ ಅಡಿಯಲ್ಲಿ ತಾವು ಕೈಗೊಂಡ ಕ್ರಮದ ಬಗ್ಗೆ ಕೂಡಲೇ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

20. ಡೀನ್.– (1) ಜ್ಯೇಷ್ಠತೆಯ ಅನುಸಾರವಾಗಿ ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿ ಒಬ್ಬ ಪ್ರಾಧ್ಯಾಪಕರು, ಸರದಿಯ ಪ್ರಕಾರ ಎರಡು ವರ್ಷಗಳ ಅವಧಿಗೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸತಕ್ಕದ್ದು:

ಪರಂತು, ಪ್ರಾಧ್ಯಾಪಕರು ಇಲ್ಲದಿದ್ದರೆ, ಜ್ಯೇಷ್ಠತಮ ಸಹ-ಪ್ರಾಧ್ಯಾಪಕರು ಡೀನ್ ಆಗಿ ಕಾರ್ಯನಿರ್ವಹಿಸತಕ್ಕದ್ದು:

ಮತ್ತು ಪರಂತು, ಯಾವುದೇ ವ್ಯಾಸಂಗ ವಿಭಾಗದಲ್ಲಿ ಯಾವೊಬ್ಬ ಪ್ರಾಧ್ಯಾಪಕ ಅಥವಾ ಸಹ-ಪ್ರಾಧ್ಯಾಪಕರು ಇಲ್ಲದಿದ್ದರೆ, ಆಗ ಕುಲಪತಿಯು ತಮ್ಮ ವಿವೇಚನಾನುಸಾರ, ಡೀನ್ ಆಗಿ ಕಾರ್ಯನಿರ್ವಹಿಸಲು ಯಾವೊಬ್ಬ ಇತರ ಸೂಕ್ತ ಅಧ್ಯಾಪಕರನ್ನು ನಿಯುಕ್ತಿಗೊಳಿಸಬಹುದು:

ಅಲ್ಲದೆ ಪರಂತು, ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯ ನಿರ್ವಹಿಸಲು ವ್ಯಾಸಂಗ ವಿಭಾಗದಲ್ಲಿ ಯಾವ ವ್ಯಕ್ತಿಯೂ ದೊರೆಯದಿದ್ದಲ್ಲಿ ಅಥವಾ ವಿಶ್ವವಿದ್ಯಾಲಯವು ಯಾವುದೇ ವ್ಯಾಸಂಗ ವಿಭಾಗಕ್ಕೆ ಅಧ್ಯಯನಗಳ ವಿಭಾಗವನ್ನು ಹೊಂದಿಲ್ಲದಿದ್ದರೆ, ಆಗ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸಲು ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಜಾನಪದ ಅಧ್ಯಯನ ಸಂಸ್ಥೆಯ ತಜ್ಞರನ್ನು ನಾಮನಿರ್ದೇಶನ ಮಾಡಬಹುದು.

(2) ಪ್ರತಿಯೊಂದು ವ್ಯಾಸಂಗ ವಿಭಾಗದ ಡೀನರು ವ್ಯಾಸಂಗ ವಿಭಾಗದ ಕಾರ್ಯನಿರ್ವಹಣಾ ಅಧಿಕಾರಿಯಾಗಿರತಕ್ಕದ್ದು ಮತ್ತು ವ್ಯಾಸಂಗ ವಿಭಾಗದ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಡೀನರು, ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

21. ಗ್ರಂಥಪಾಲರು.– ಗ್ರಂಥಪಾಲರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ನೇಮಕಾತಿ ಮಂಡಳಿಯ ಶಿಫಾರಸ್ಸಿನ ಮೇರೆಗೆ ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಅವರು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು

ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

22. **ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರು.**– ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಅವರು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವರ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

ಅಧ್ಯಾಯ – IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

23. **ವಿಶ್ವವಿದ್ಯಾಲಯದ ಪ್ರಾಧಿಕಾರಗಳು.**– ಈ ಮುಂದಿನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(ಎ) ಸಿಂಡಿಕೇಟ್;

(ಬಿ) ಶೈಕ್ಷಣಿಕ ಪರಿಷತ್ತು;

(ಸಿ) ಹಣಕಾಸು ಸಮಿತಿ;

(ಡಿ) ಅಧ್ಯಯನ ಮಂಡಳಿಗಳು;

(ಇ) ವ್ಯಾಸಂಗ ವಿಭಾಗಗಳು;

(ಎಫ್) ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ; ಮತ್ತು

(ಜಿ) ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳು.

24. **ಸಿಂಡಿಕೇಟ್.**– (1) ಸಿಂಡಿಕೇಟ್ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಕುಲಪತಿ;

(ಬಿ) ಶಿಕ್ಷಣ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(ಸಿ) ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(ಡಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು;

(ಎಫ್) ಜ್ಯೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಒಬ್ಬ ಡೀನ್;

(ಜಿ) ಮೂರು ವರ್ಷಗಳ ಅವಧಿಗಾಗಿ ಸರ್ಕಾರವು ನಾಮನಿರ್ದೇಶನ ಮಾಡಿದ ಖ್ಯಾತ ಜಾನಪದ ತಜ್ಞರ ಪೈಕಿ ಆರು ಶ್ರೇಷ್ಠ ಜನಪದ ಅಧ್ಯಾಯಿಗಳು, ಅವರಲ್ಲಿ,–

(i) ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು ಇರತಕ್ಕದ್ದು;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು ಇರತಕ್ಕದ್ದು;

(iii) ಒಬ್ಬರು ಮಹಿಳೆ ಇರತಕ್ಕದ್ದು;

(iv) ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು ಇರತಕ್ಕದ್ದು;

(v) ಇತರೆ ಇಬ್ಬರು ಇರತಕ್ಕದ್ದು:

ಪರಂತು, ವಿಶ್ವವಿದ್ಯಾಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನೌಕರರಾಗಿರುವ ಯಾವೊಬ್ಬ ವ್ಯಕ್ತಿಯೂ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ಹೆಚ್) ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಕುಲಪತಿಯು, ಜ್ಯೇಷ್ಠತೆಯ ಆಧಾರದಲ್ಲಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡಬೇಕಾದ ಸ್ನಾತಕೋತ್ತರ ಅಧ್ಯಯನಗಳ ಒಬ್ಬ ಪ್ರಾಧ್ಯಾಪಕರು;

(2) ಸಿಂಡಿಕೇಟ್, ಒಂದು ವರ್ಷದಲ್ಲಿ ಕನಿಷ್ಠ ಪಕ್ಷ ಎಂಟು ಸಭೆಗಳನ್ನು ತಿಂಗಳ ಎರಡನೆಯ ಶನಿವಾರ ನಡೆಸತಕ್ಕದ್ದು. ಎರಡು ನಿರಂತರ ಸಭೆಗಳ ನಡುವಣ ಅವಧಿಯು ಎಂಟು ವಾರಗಳನ್ನು ಮೀರತಕ್ಕದ್ದಲ್ಲ. ಕುಲಪತಿಯು, ತುರ್ತು ಸಂದರ್ಭಗಳಲ್ಲಿ ವಿಶೇಷ ಸಭೆಗಳನ್ನು ನಡೆಸಬಹುದು.

(3) ಕುಲಾಧಿಪತಿ ಅಥವಾ ಸರ್ಕಾರವು, ಅವರು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಪರಿಶೀಲನಾಂಶಗಳನ್ನು ಚರ್ಚಿಸಲು ಸಭೆಗಳನ್ನು ನಡೆಸುವುದಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

25. **ಸಿಂಡಿಕೇಟ್‌ನ ಅಧಿಕಾರಗಳು.**– (1) ಸಿಂಡಿಕೇಟ್, ವಿಶ್ವವಿದ್ಯಾಲಯದ ವ್ಯವಹಾರಗಳ ಆಡಳಿತದ ಅಧಿಕಾರವನ್ನು, ಅದರಲ್ಲೂ ವಿಶೇಷವಾಗಿ, ವಿಶ್ವವಿದ್ಯಾಲಯದ ನಿಧಿಗಳ ಮತ್ತು ಸ್ವತ್ತುಗಳ ನಿರ್ವಹಣೆಯ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸಿಂಡಿಕೇಟು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಹಾಗೂ ಆ ಉದ್ದೇಶಕ್ಕಾಗಿ ತಾನು ಅವಶ್ಯಕ ಹಾಗೂ ಸೂಕ್ತವೆಂದು ಭಾವಿಸಬಹುದಾದ ಅಂಥ ಸೂಕ್ತ ಏಜೆಂಟರನ್ನು ನೇಮಕ ಮಾಡುವುದು;

(ii) ವಿಶ್ವವಿದ್ಯಾಲಯದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವುದು, ವ್ಯತ್ಯಾಸಗೊಳಿಸುವುದು, ಕಾರ್ಯಗತಗೊಳಿಸುವುದು ಮತ್ತು ರದ್ದುಗೊಳಿಸುವುದು;

(iii) 33ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪರೀಕ್ಷಕರನ್ನು ನೇಮಕ ಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದು ಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಹಾಗೂ ಇತರ ಭತ್ಯೆಗಳನ್ನು ಸಹ ನಿಗದಿಪಡಿಸುವುದು;

(iv) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು;

(v) ವಿಶ್ವವಿದ್ಯಾಲಯದ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಸೂಕ್ತ ಯೋಜನೆಗಳಲ್ಲಿ ವಿವೇಕಯುತವಾಗಿ ಬಳಸುವುದು;

(vi) ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ನಿಧಿಗಳಿಗೆ ಸಂಬಂಧಿಸಿದ ಸರಿಯಾದ ಲೆಕ್ಕಪತ್ರಗಳನ್ನು ಇಡುವಂತೆ ಮಾಡುವುದು;

(vii) ಈ ಮುಂದಿನವುಗಳಿಗಾಗಿ ಫೀಜುಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು,–

(ಎ) ಬೋಧನೆ ಮತ್ತು ಸಂಶೋಧನೆ;

(ಬಿ) ಪರೀಕ್ಷೆಗಳು ಮತ್ತು ಘಟಿಕೋತ್ಸವಗಳಿಗೆ ಪ್ರವೇಶ;

(ಸಿ) ವಿಶ್ವವಿದ್ಯಾಲಯವು ಕೈಗೊಳ್ಳಬಹುದಾದ ಅಂಥ ಇತರ ಸೇವೆಗಳು;

(ಡಿ) ಕಾಲೇಜುಗಳ ಮಾನ್ಯತೆ ಮತ್ತು ಪರಿವೀಕ್ಷಣೆ; ಮತ್ತು

(ಇ) ಪರಿನಿಯಮಗಳಿಂದ ನಿಯಮಿಸಬಹುದಾದಂಥ ಇತರ ಉದ್ದೇಶಗಳು;

(viii) ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು ಮತ್ತು ಅದನ್ನು ಶೈಕ್ಷಣಿಕ ಪರಿಷತ್ತಿಗೆ ಒಪ್ಪಿಸುವುದು;

(ix) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಸಂಸ್ಥೆಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತವನ್ನು ನಡೆಸುವುದು ಮತ್ತು ನಿಯಂತ್ರಣವನ್ನು ಮಾಡುವುದು;

(x) ಸಂಸ್ಥೆಗಳ ಸಂಯೋಜನೆಯ ಸಂಬಂಧದಲ್ಲಿ ಪ್ರವೇಶದ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದು;

(xi) ವಿಶ್ವವಿದ್ಯಾಲಯದ ಆಡಳಿತದಲ್ಲಿ ಇಲ್ಲದಿರುವ ವಿದ್ಯಾರ್ಥಿನಿಲಯಗಳಿಗೆ ಮನ್ನಣೆಯನ್ನು ನೀಡುವುದು ಮತ್ತು ಅಂಥ ಮನ್ನಣೆಯನ್ನು ಅಮಾನತ್ತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;

(xii) ಕ್ಯಾಂಪಸ್ ಮತ್ತು ಅದರ ಅನೆಕ್ಸ್‌ಗಳೊಳಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತನ್ನು ವಿನಿಯಮನಗೊಳಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಣ ಮಾಡುವುದು ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ನೋಡಿಕೊಳ್ಳುವುದು;

(xiii) ಉದ್ಯೋಗ ವಿಭಾಗ (ಬ್ಯೂರೋ) ಮತ್ತು ವಾರ್ತಾ ವಿಭಾಗವನ್ನು ರಚಿಸುವುದು ಮತ್ತು ಅವುಗಳ ಕಾರ್ಯನಿರ್ವಹಣೆಯ ನಿಯಂತ್ರಣವನ್ನು ಮಾಡುವುದು;

(xiv) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಪ್ರಕಾರ್ಯಗಳನ್ನು ಕುಲಪತಿಯವರಿಗೆ ಪ್ರತ್ಯಾಯೋಜಿಸುವುದು;

(xv) ವಿಶ್ವವಿದ್ಯಾಲಯಕ್ಕಾಗಿ ಸಾಮಾನ್ಯ ಮೊಹರನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಹಾಗೂ ಉಪಯೋಗಕ್ಕಾಗಿ ಉಪಬಂಧಿಸುವುದು;

(xvi) ವಿಶ್ವವಿದ್ಯಾಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(xvii) ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯವು ಅಗತ್ಯಪಡಿಸಿದ ಪ್ರಾಧ್ಯಾಪಕರ, ಸಹ ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಅಥವಾ ಬೋಧಕರ ಯಾವುವೇ ಇತರ ಹುದ್ದೆಗಳನ್ನು ಪ್ರಾರಂಭಿಸುವುದು;

(xviii) ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಪ್ರವಾಸೀ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಪ್ರಾರಂಭಿಸುವುದು.

(xix) ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(xx) ಪರಿನಿಯಮಗಳನ್ನು ರಚಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು;

(xxi) ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಪ್ರೊಫೆಸರ್ ಎಮಿರಿಟಸ್ (ವಿಶ್ರಾಂತ ಮಹೋಪಾಧ್ಯಾಯ) ಬಿರುದನ್ನು ಪ್ರದಾನ ಮಾಡುವುದು;

(xxii) ಹುದ್ದೆಗಳ ಸೃಜನೆಗಾಗಿ ಪರಿನಿಯಮಗಳನ್ನು ರಚಿಸುವುದು;

(xxiii) ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(3) (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುವೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

26. ಸಿಂಡಿಕೇಟ್ ಸಭೆ.– (1) ನಿಯಮಿಸಬಹುದಾದ ಅಂಥ ಕಾಲಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಸಿಂಡಿಕೇಟ್ ಸಭೆ ಸೇರತಕ್ಕದ್ದು ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಸಭೆಗಳಲ್ಲಿರಬೇಕಾದ ಗಣಪೂರ್ತಿಯೂ ಸೇರಿದಂತೆ ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಸಿಂಡಿಕೇಟ್, ಕಡೇ ಪಕ್ಷ ಪ್ರತಿ ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಕುಲಪತಿಯವರು ಅಥವಾ ಅವರ ಗೈರು ಹಾಜರಿಯಲ್ಲಿ, ಹಾಜರಿದ್ದ ಸದಸ್ಯರು ಆಯ್ಕೆ ಮಾಡಿದ ಯಾವೊಬ್ಬ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಸಿಂಡಿಕೇಟ್‌ನ ಯಾವುದೇ ಸಭೆಯಲ್ಲಿನ ಎಲ್ಲ ಪ್ರಶ್ನೆಗಳನ್ನು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ ಕುಲಪತಿಯವರು ಅಥವಾ ಅಧ್ಯಕ್ಷತೆ ವಹಿಸಿರುವ ಎರಡನೇ ಸದಸ್ಯರು ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

(4) (ಎ) ಸಿಂಡಿಕೇಟ್, ಸಮಾಲೋಚನೆಯ ಉದ್ದೇಶಕ್ಕಾಗಿ, ಪರಿಶೀಲನೆಯಲ್ಲಿರುವ ಯಾವುದೇ ವಿಷಯದಲ್ಲಿ ವಿಶೇಷ ಜ್ಞಾನವನ್ನು ಮತ್ತು ವ್ಯವಹಾರಿಕ ಅನುಭವವನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಯಾವುದೇ ಸಭೆಗೆ ಹಾಜರಾಗುವಂತೆ ಆಹ್ವಾನಿಸಬಹುದು ಮತ್ತು ಆ ವ್ಯಕ್ತಿಯು ಆ ಬಗ್ಗೆ ಮಾತನಾಡಬಹುದು ಮತ್ತು ಸಭೆಯ ವ್ಯವಹರಣೆಗಳಲ್ಲಿ ಭಾಗವಹಿಸಬಹುದು. ಆದರೆ ಅವನು ಮತ ನೀಡಲು ಅರ್ಹನಾಗಿರತಕ್ಕದ್ದಲ್ಲ.

(ಬಿ) ಹಾಗೆ ಆಹ್ವಾನಿತನಾದ ವ್ಯಕ್ತಿಯು, ಸಿಂಡಿಕೇಟ್ ಸದಸ್ಯರಿಗೆ ಅನುಮತಿಸಲಾದ ಅಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

27. ಶೈಕ್ಷಣಿಕ ಪರಿಷತ್ತು.– (1) ಶೈಕ್ಷಣಿಕ ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಪತಿ;

(ii) ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ಸರ್ಕಾರದಿಂದ ನಾಮನಿರ್ದೇಶಿತರಾದ ಜಾನಪದ ಕ್ಷೇತ್ರದಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಐವರು ತಜ್ಞರು;

(iii) ಕುಲಪತಿಯವರು ಜ್ಯೇಷ್ಠತೆಗೆ ಅನುಸಾರವಾಗಿ ಎರಡು ವರ್ಷಗಳ ಅವಧಿಗಾಗಿ ಸರದಿಯ ಮೇಲೆ ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗಗಳ ಇಬ್ಬರು ಡೀನರುಗಳು;

(iv) ಕುಲಪತಿಯವರು ಜ್ಯೇಷ್ಠತೆಗೆ ಅನುಸಾರವಾಗಿ ಎರಡು ವರ್ಷಗಳ ಅವಧಿಗಾಗಿ ಸರದಿಯ ಮೇಲೆ ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗಗಳ ಮೂವರು ಪ್ರಾಧ್ಯಾಪಕರು;

(v) ಮೂರು ವರ್ಷಗಳ ಅವಧಿಗಾಗಿ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಸುಪ್ರಸಿದ್ಧ ಜಾನಪದ ತಜ್ಞರು ಅವರ ಪೈಕಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು, ಮಹಿಳೆಯರನ್ನು ಪ್ರತಿನಿಧಿಸುವ ಒಬ್ಬರು, ಧಾರ್ಮಿಕ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಒಬ್ಬರು ಮತ್ತು ಇತರರನ್ನು ಪ್ರತಿನಿಧಿಸುವ ಇಬ್ಬರು;

(vi) ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರು;

(vii) ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಅಧ್ಯಕ್ಷರು;

(viii) ತುಳು ಅಕಾಡೆಮಿಯ ಅಧ್ಯಕ್ಷರು;

(ix) ಕೊಡವ ಅಕಾಡೆಮಿಯ ಅಧ್ಯಕ್ಷರು;

(x) ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು;

(xi) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು;

(xii) ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರು;

(xiii) ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ನಿರ್ದೇಶಕರು;

(xiv) ಕುಲಸಚಿವರು, ಸದಸ್ಯ-ಕಾರ್ಯದರ್ಶಿ:

ಪರಂತು, ವಿಶ್ವವಿದ್ಯಾಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನೌಕರಯಲ್ಲಿರುವ ಯಾವೊಬ್ಬ ವ್ಯಕ್ತಿಯೂ ನಾಮನಿರ್ದೇಶಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(2) ಶೈಕ್ಷಣಿಕ ಪರಿಷತ್ತು, ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಸಭೆ ಸೇರತಕ್ಕದ್ದು. ಆದಾಗ್ಯೂ ಎರಡು ನಿರಂತರ ಸಭೆಗಳ ನಡುವಣ ಅವಧಿಯು ಮೂರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

28. ಶೈಕ್ಷಣಿಕ ಪರಿಷತ್ತಿನ ಅಧಿಕಾರಗಳು.- (1) ಶೈಕ್ಷಣಿಕ ಪರಿಷತ್ತು ವಿಶ್ವವಿದ್ಯಾಲಯದ ಶೈಕ್ಷಣಿಕ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಉಪಬಂಧಗಳಿಗೊಳಪಟ್ಟು ವಿಶ್ವವಿದ್ಯಾಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ವಿನಿಯಮವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೊಳಪಟ್ಟು ಶೈಕ್ಷಣಿಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಎಂದರೆ:-

(i) ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವಗಳನ್ನು ಮಾಡುವುದು;

(ii) ಆರ್ಡಿನೆನ್ಸ್‌ನಲ್ಲಿ ಒಳಗೊಂಡಿರದಷ್ಟರಮಟ್ಟಿಗೆ ಅಧ್ಯಯನ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iii) ಪರೀಕ್ಷೆಗಳ ಸ್ಕೀಂಗಳಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳು, ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು ಅಥವಾ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ, ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ, ಅಂಥ ಷರತ್ತುಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iv) ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;

(v) ಮನ್ನಣೆ ಪಡೆದ ಸಂಸ್ಥೆಗಳಲ್ಲಿ ಅಧ್ಯಯನ ಹಾಗೂ ಬೋಧನೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(vi) ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯನ್ನು ಉತ್ತೇಜಿಸುವುದಕ್ಕಾಗಿ ಅಥವಾ ಇತರ ವಿಶೇಷ ಅಧ್ಯಯನಗಳನ್ನು ಪ್ರೋತ್ಸಾಹಿಸಿವುದಕ್ಕಾಗಿ ಸ್ಕೀಂಗಳನ್ನು ರೂಪಿಸುವುದು;

(vii) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತಮ್ಮದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವಗಳನ್ನು ಮಾಡುವುದು;

(viii) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಾಯಿತಿಗಳ ನೀಡಿಕೆಗಾಗಿ ಮಾನದಂಡಗಳನ್ನು ನಿರ್ಣಯಿಸುವುದು;

(ix) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ಸಹ ಪ್ರಾಧ್ಯಾಪಕರುಗಳ, ಸಹಾಯಕ ಪ್ರಾಧ್ಯಾಪಕರುಗಳ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಪ್ರಾರಂಭ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು;

(x) ಫೆಲೋಶಿಪ್‌ಗಳು, ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು ಅಥವಾ ಪ್ರವೇತನಗಳನ್ನು ಪ್ರಾರಂಭಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(xi) ಪರೀಕ್ಷೆಗಳ ಸಮಾನತೆಯನ್ನು ನಿಯಮಿಸಲು ವಿನಿಯಮಗಳನ್ನು ರಚಿಸುವುದು;

(xii) ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಅರ್ಹತೆಯನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಲ್ಲಿ ಅಥವಾ ಮನ್ನಣೆ ಪಡೆದ ಸಂಸ್ಥೆಗಳಲ್ಲಿ ನಡೆಯುವ ಅನುಮೋದಿತ ಅಧ್ಯಯನ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;

(xiii) ಸಂಶೋಧನೆ ಮತ್ತು ಕಲಿಕೆಯ ಪ್ರಗತಿಗಾಗಿ ಮತ್ತು ಪ್ರಸಾರಕ್ಕಾಗಿ ಸೂಕ್ತವೆಂದು ಭಾವಿಸಬಹುದಾದಂಥ ಕಲಿಕೆ ಮತ್ತು ಅಧ್ಯಯನ ಕ್ರಮಗಳ ಅಂಥ ವಿಭಾಗಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;

(xiv) ವಿಶೇಷ ಕಲಾ ಪ್ರಕಾರಗಳ ತರಬೇತಿಯನ್ನು ಕೈಗೊಳ್ಳಲು ಮನ್ನಣೆ ಪಡೆದ ಸಂಸ್ಥೆಗಳನ್ನು ಸಮರ್ಥಗೊಳಿಸುವಂತೆ ಮಾಡಲು ಅಂಥ ಉಪಬಂಧಗಳನ್ನು ರಚಿಸುವುದು;

(xv) ವಾರ್ಷಿಕ ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು;

(xvi) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(xvii) ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು;

(xviii) ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;

(xix) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು; ಮತ್ತು

(xx) ಜಾನಪದ ಕ್ಷೇತ್ರದಲ್ಲಿನ ಸಂರಕ್ಷಣೆ, ಸಂವರ್ಧನೆ, ತರಬೇತಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಸಾಮಾನ್ಯವಾಗಿ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡುವುದು.

29. ಹಣಕಾಸು ಸಮಿತಿ.– (1) ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಹಣಕಾಸು ಸಮಿತಿಯು ಇರತಕ್ಕದ್ದು, ಎಂದರೆ:–

(i) ಕುಲಪತಿ;

(ii) ಹಣಕಾಸಿನ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iii) ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(iv) ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(v) ಸಿಂಡಿಕೇಟ್ ನಾಮನಿರ್ದೇಶಿಸಿದ ಇಬ್ಬರು ಸದಸ್ಯರು ಅದರಲ್ಲಿ ಒಬ್ಬರು ಪ್ರಾಧ್ಯಾಪಕರಾಗಿರತಕ್ಕದ್ದು ಮತ್ತು ಮತ್ತೊಬ್ಬರು ಸಿಂಡಿಕೇಟ್‌ಗೆ ಕುಲಾಧಿಪತಿಯವರಿಂದ ನಾಮನಿರ್ದೇಶಿತರಾದ ವ್ಯಕ್ತಿಯಾಗಿರತಕ್ಕದ್ದು;

(vi) ಶೈಕ್ಷಣಿಕ ಪರಿಷತ್ತಿನಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯರು;

(vii) ಕುಲಸಚಿವರು.

(2) ಯಾವುದೇ ಕಾರಣದಿಂದಾಗಿ (1)ನೇ ಉಪಪ್ರಕರಣದ (ii), (iii) ಅಥವಾ (iv)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಹಣಕಾಸು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥರಾದರೆ ಅವರು ಸರ್ಕಾರದ ಉಪ-ಕಾರ್ಯದರ್ಶಿ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಅಂಥ ಸಭೆಯಲ್ಲಿ ಹಾಜರಿರಲು ಪ್ರತಿನಿಯೋಜಿಸಬಹುದು. ಅಧಿಕಾರಿಯು ಅಥವಾ ಪ್ರತಿನಿಯೋಜಿತ ವ್ಯಕ್ತಿಯು ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದು.

(3) ಹಣಕಾಸು ಸಮಿತಿಯು ಕನಿಷ್ಠ ಮೂರು ತಿಂಗಳಿಗೆ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

(4) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ಸಾಮಾನ್ಯ ಪರಿಶೀಲನೆಗಳನ್ನು ನಡೆಸುವುದು, ವಾರ್ಷಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಪುನರಾವಲೋಕಿಸುವುದು ಮತ್ತು ಅದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು;

(ii) ವಾರ್ಷಿಕ ಬಜೆಟ್ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ಶೈಕ್ಷಣಿಕ ಪರಿಷತ್ತು ಹಾಗೂ ಸಿಂಡಿಕೇಟಿಗೆ ಅದರ ಶಿಫಾರಸುಗಳನ್ನು ಮಾಡುವುದು;

(iii) ಬಜೆಟ್‌ನಲ್ಲಿ ಒದಗಿಸಿಲ್ಲದ ವೆಚ್ಚವನ್ನು ಒಳಗೊಂಡ ಅಥವಾ ವಿಶ್ವವಿದ್ಯಾಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆಗೇರಿಸುವುದು ಮತ್ತು ರದ್ದು ಮಾಡುವುದು ಒಳಗೊಂಡಂತೆ ಬಜೆಟ್‌ನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು;

(iv) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

(5) (4)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ, ಹಣಕಾಸು ಸಮಿತಿಯ ಅನುಮೋದನೆ ಇಲ್ಲದೆ, ಬಜೆಟ್‌ನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್‌ನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಒಂದು ಲಕ್ಷ ರೂಪಾಯಿಗಳಿಗೆ ಮೀರದ ಯಾವುದೇ ವೆಚ್ಚವನ್ನು ಭರಿಸಬಹುದು:

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯ, ಮುಂದಿನ ನಿಕಟ ತರುವಾಯದ ತ್ರೈಮಾಸಿಕ ಸಭೆಯಲ್ಲಿ ಮಂಡಿಸತಕ್ಕದ್ದು:

ಮತ್ತು ಪರಂತು, ಕುಲಪತಿಯವರ ಮೂಲಕ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸಬಹುದು. ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(6) ಹಣಕಾಸು ಸಮಿತಿಯು ಪರಿಗಣಿಸಿದ, ಯಾವುದೇ ವಿಷಯದ ಸಂದರ್ಭದಲ್ಲಿ ಮತಗಳು ಸಮಾನವಾಗಿ ವಿಭಾಗವಾಗಿರುವಲ್ಲಿ ಕುಲಪತಿಯವರು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

30. ವ್ಯಾಸಂಗ ವಿಭಾಗಗಳ ರಚನೆ ಮತ್ತು ಅವುಗಳ ಪ್ರಕಾರ್ಯಗಳು.- (1) ವಿಶ್ವವಿದ್ಯಾಲಯವು, ಮೌಖಿಕ ಜಾನಪದ, ಕಲೆಗಳು, ಸಾಹಿತ್ಯ, ಸಂಗೀತ, ಕರಕುಶಲ, ವೈದ್ಯ ಪದ್ಧತಿ, ಆಹಾರ, ಗುಡಿಕೈಗಾರಿಕೆಗಳು, ಪರಂಪರೆ, ವಿಜ್ಞಾನ ಮತ್ತು ತಂತ್ರಜ್ಞಾನ, ಅಲಕ್ಷಿತ ಅಧ್ಯಯನಗಳು ಮತ್ತು ಅನ್ವಯಿಕ ಜಾನಪದ ಅಧ್ಯಯನದಂಥ ವಿವಿಧ ಜಾನಪದ ಕ್ಷೇತ್ರಗಳ ವ್ಯಾಸಂಗ ಕ್ರಮಗಳನ್ನು ಹಾಗೂ ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ವಿಷಯಗಳನ್ನು ಹೊಂದಿರತಕ್ಕದ್ದು.

(2) ಪ್ರತಿಯೊಂದು ವ್ಯಾಸಂಗ ವಿಭಾಗವು ಆರ್ಡಿನೆನ್ಸ್ ಮೂಲಕ ಅದಕ್ಕೆ ವಹಿಸಿಕೊಡಬಹುದಾದ ಅಂಥ ಸಂಖ್ಯೆಯ ಅಧ್ಯಯನ ವಿಭಾಗಗಳನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ವ್ಯಾಸಂಗ ವಿಭಾಗದ ಅಧ್ಯಯನ ವಿಭಾಗವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ವ್ಯಾಸಂಗ ವಿಭಾಗದ ಡೀನ್;

(ii) ಅಧ್ಯಯನಾಂಗದ ನಿರ್ದೇಶಕರು;

(iii) ವಿಭಾಗದ ಅಧ್ಯಕ್ಷರು;

(iv) ವಿಭಾಗಕ್ಕೆ ಸಂಬಂಧಪಟ್ಟ ಗೌರವ ಪ್ರಾಧ್ಯಾಪಕರು, ಯಾರಾದರೂ ಇದ್ದರೆ;

(v) ವಿಭಾಗದಲ್ಲಿ ಸಂಶೋಧನೆಗಳನ್ನು ನಡೆಸಲು ನೇಮಿಸಲಾದ ವ್ಯಕ್ತಿಗಳು;

(vi) ಆರ್ಡಿನೆನ್ಸ್‌ನಲ್ಲಿ ನಿಯಮಿಸಬಹುದಾದಂತೆ ವಿಭಾಗದ ಸದಸ್ಯರಾಗಿರುವ ಅಂಥ ಇತರ ವ್ಯಕ್ತಿಗಳು.

(4) ಯಾವುದೇ ಅಧ್ಯಯನ ವಿಭಾಗವನ್ನು ಪರಿನಿಯಮಗಳ ಮೂಲಕ ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದು.

(5) ಪ್ರತಿಯೊಂದು ಅಧ್ಯಯನ ವಿಭಾಗವು ಒಬ್ಬ ಅಧ್ಯಕ್ಷರನ್ನು ಹೊಂದಿರತಕ್ಕದ್ದು ಹಾಗೂ ಅವರು ವಿಭಾಗೀಯ ಪರಿಷತ್ತಿನ ಅಧ್ಯಕ್ಷರೂ ಕೂಡ ಆಗಿರತಕ್ಕದ್ದು.

(6) ಪ್ರತಿಯೊಂದು ಅಧ್ಯಯನ ವಿಭಾಗವು ಈ ಮುಂದಿನವರನ್ನು ಒಳಗೊಂಡ ಒಂದು ವಿಭಾಗೀಯ ಪರಿಷತ್ತನ್ನು ಹೊಂದಿರತಕ್ಕದ್ದು,-

(i) ಎಲ್ಲಾ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರು;

(ii) ವಿಭಾಗದಲ್ಲಿನ ಒಬ್ಬರು ಅತ್ಯಂತ ಹಿರಿಯ ಸಹಾಯಕ ಪ್ರಾಧ್ಯಾಪಕರು;

(iii) ಅಧ್ಯಯನಾಂಗದ ನಿರ್ದೇಶಕರು.

(7) ಅಧ್ಯಕ್ಷರು, ಸಿಂಡಿಕೇಟಿನ ಮೂಲಕ ಎರಡು ವರ್ಷಗಳ ಅವಧಿಗಾಗಿ ಅಥವಾ ಕಾಲಕಾಲಕ್ಕೆ ಸಿಂಡಿಕೇಟ್ ನಿರ್ಧರಿಸಬಹುದಾದಂತೆ ಅಂಥ ಇತರ ಅವಧಿಗಾಗಿ ನೇಮಕರಾಗತಕ್ಕದ್ದು.

(8) ಅಧ್ಯಕ್ಷರು, ವಿಭಾಗದ ಆಡಳಿತದ ಪ್ರಭಾರವನ್ನು ಹೊಂದಿರತಕ್ಕದ್ದು. ವಿಭಾಗೀಯ ಪರಿಷತ್ತಿನ ಮತ್ತು ಅಧ್ಯಕ್ಷರ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು, ಪರಿನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದ್ದು.

(9) ಪ್ರತಿಯೊಂದು ವ್ಯಾಸಂಗ ವಿಭಾಗವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ವ್ಯಾಸಂಗ ವಿಭಾಗದ ಡೀನ್;

(ii) ಕುಲಸಚಿವರು;

(iii) ವ್ಯಾಸಂಗ ವಿಭಾಗದಲ್ಲಿನ ಅಧ್ಯಯನ ವಿಭಾಗಗಳ ಅಧ್ಯಕ್ಷರು;

(iv) ಎಲ್ಲಾ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಗೈರು ಹಾಜರಿಯಲ್ಲಿ ವ್ಯಾಸಂಗ ವಿಭಾಗದಲ್ಲಿನ ಪ್ರತಿಯೊಂದು ವಿಭಾಗದ ಸಹ-ಪ್ರಾಧ್ಯಾಪಕರು;

(v) ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ಸೇವಾ ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಪ್ರತಿಯೊಂದು ಅಧ್ಯಯನ ವಿಭಾಗದಿಂದ ನಾಮನಿರ್ದೇಶನ ಮಾಡಿದ ಒಬ್ಬ ಸಹ-ಪ್ರಾಧ್ಯಾಪಕರು ಮತ್ತು ಒಬ್ಬ ಸಹಾಯಕ ಪ್ರಾಧ್ಯಾಪಕರು;

(vi) ಎರಡು ವರ್ಷಗಳ ಅವಧಿಗಾಗಿ ಕುಲಪತಿಯು ನಾಮನಿರ್ದೇಶನ ಮಾಡಿದ ಇಬ್ಬರು ಜಾನಪದ ತಜ್ಞರು; ಮತ್ತು

(vii) ಪರಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಇತರ ವ್ಯಕ್ತಿಗಳು.

(10) ವ್ಯಾಸಂಗ ವಿಭಾಗಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

31. ಅಧ್ಯಯನಗಳ ಮಂಡಳಿಗಳು.- (1) ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂತೆ ಪ್ರತಿಯೊಂದು ವಿಷಯಕ್ಕೆ ಅಥವಾ ವಿಷಯಗಳ ಸಮೂಹಕ್ಕೆ ಒಂದು ಅಧ್ಯಯನಗಳ ಮಂಡಳಿ ಇರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಧ್ಯಯನಗಳ ಮಂಡಳಿಯ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

32. ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ.- (1) ಶೈಕ್ಷಣಿಕ ವ್ಯಾಸಂಗ ಕ್ರಮಗಳ, ಸಂಶೋಧನಾ ಕಾರ್ಯಕ್ರಮಗಳ, ಆಂತರಿಕ ಶಿಸ್ತು ಕಾರ್ಯ ಚಟುವಟಿಕೆಗಳ, ತರಬೇತಿ, ವಿಸ್ತರಣೆ ಮತ್ತು ಸಂಶೋಧನೆಗಾಗಿ ಬಾಹ್ಯ ಏಜೆನ್ಸಿಗಳೊಂದಿಗೆ ಸಂವಾದ ಚಟುವಟಿಕೆ ನಡೆಸುವುದಕ್ಕಾಗಿ ಮತ್ತು ಅದರಿಂದ ರೂಪಿಸಲಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಜಾರಿಗೊಳಿಸುವುದರ ಮೇಲ್ವಿಚಾರಣೆ ಮಾಡುವುದಕ್ಕಾಗಿ ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಇರತಕ್ಕದ್ದು.

(2) ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(i) ಕುಲಪತಿಯವರು ಅಧ್ಯಕ್ಷರಾಗಿರತಕ್ಕದ್ದು;

(ii) ಕುಲಸಚಿವರು (ಮೌಲ್ಯಮಾಪನ);

(iii) ಸರದಿಯ ಮೇಲೆ, ಒಂದು ವರ್ಷದ ಅವಧಿಗೆ ಕುಲಪತಿಯವರ ಶಿಫಾರಸ್ಸಿನಂತೆ ವ್ಯಾಸಂಗ ವಿಭಾಗದ ಇಬ್ಬರು ಅತ್ಯಂತ ಹಿರಿಯ ಡೀನ್‌ಗಳು;

(iv) ಎರಡು ವರ್ಷಗಳ ಅವಧಿಗಾಗಿ, ಇಬ್ಬರು ಅತ್ಯಂತ ಹಿರಿಯ ಪ್ರಾಧ್ಯಾಪಕರು, ಅವರಲ್ಲಿ ಪರಂಪರೆ, ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಒಬ್ಬರು ಹಾಗೂ ಕುಲಪತಿಯವರಿಂದ ನಾಮನಿರ್ದೇಶಿತರಾದ ಪ್ರಾಧ್ಯಾಪಕರ ಪೈಕಿಯಿಂದ ಮತ್ತೊಬ್ಬರು;

(v) ಎರಡು ವರ್ಷಗಳ ಅವಧಿಗಾಗಿ ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬರು ಜಾನಪದ ತಜ್ಞರು ಅಥವಾ ಬೋಧನೆ ಮತ್ತು ಸಂಶೋಧನೆಯಲ್ಲಿ ಹಾಗೂ ಶೈಕ್ಷಣಿಕ ಆಡಳಿತದಲ್ಲಿ ಅಪಾರ ಅನುಭವ ಹೊಂದಿರುವ ಶಿಕ್ಷಣ ತಜ್ಞರು;

(vi) ಸರ್ಕಾರದಿಂದ ನಾಮನಿರ್ದೇಶಿತರಾದ ಯೋಜನಾ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಯವರ ಅಥವಾ ಯೋಜನಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಸರ್ಕಾರದ ಒಬ್ಬ ಅಧಿಕಾರಿ.

(3) ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು, ಕನಿಷ್ಠಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು. ಅಧ್ಯಯನಾಂಗ, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು ಪ್ರತಿಯೊಂದು ನಿರ್ಣಯವನ್ನು ಪರಿಗಣನೆಗಾಗಿ ಮತ್ತು ಅವುಗಳ ಬಗ್ಗೆ ಕ್ರಮ ಕೈಗೊಳ್ಳುವುದಕ್ಕಾಗಿ ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟಿನ ಮುಂದೆ ಇಡತಕ್ಕದ್ದು.

33. ಪರೀಕ್ಷಕರ ನೇಮಕಾತಿ ಮಂಡಳಿ.– (1) ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ, ಪ್ರತಿವರ್ಷಕ್ಕಾಗಿ ಪರೀಕ್ಷಕರ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ, ಪರೀಕ್ಷಕರ ನೇಮಕಾತಿ ಮಂಡಳಿಯನ್ನು ರಚಿಸತಕ್ಕದ್ದು.

(2) ಅಂಥ ಪ್ರತಿಯೊಂದು ಪರೀಕ್ಷಕರ ನೇಮಕಾತಿ ಮಂಡಳಿಯು, ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:–

(i) ಕುಲಪತಿಯವರು ಅಧ್ಯಕ್ಷರಾಗಿರತಕ್ಕದ್ದು;

(ii) ಕುಲಸಚಿವರು (ಮೌಲ್ಯಮಾಪನ);

(iii) ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್;

(iv) ನಿರ್ದಿಷ್ಟ ವಿಷಯದಲ್ಲಿನ ಅಧ್ಯಯನ ಮಂಡಳಿಯ ಅಧ್ಯಕ್ಷರು;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ, ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿ ಬೋಧಿಸುವ ಇಬ್ಬರು ಅಧ್ಯಾಪಕರು; ಮತ್ತು

(vi) ಕುಲಪತಿಯವರು ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿರುವ ಸ್ನಾತಕೋತ್ತರ ಪದವಿ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರು.

(3) ಪರೀಕ್ಷಕರ ನೇಮಕಾತಿ ಮಂಡಳಿಯು, ಅಧ್ಯಯನ ಮಂಡಳಿಯು ಸಿದ್ಧಪಡಿಸಬೇಕಾದ ಪಟ್ಟಿಗಳಲ್ಲಿ ಒಳಗೊಂಡ ವ್ಯಕ್ತಿಗಳ ಪೈಕಿಯಿಂದ ಪರೀಕ್ಷಕರ ಪಟ್ಟಿಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಸಿಂಡಿಕೇಟಿನ ಅನುಮೋದನೆಗೆ ಒಪ್ಪಿಸತಕ್ಕದ್ದು.

(4) ಯಾವ ಕಾರಣದ ಮೇಲೆ ಬದಲಾವಣೆಯನ್ನು ಸೂಚಿಸಲಾಗಿದೆಯೋ ಅಥವಾ ಮಾಡಲಾಗಿದೆಯೋ, ಆ ನಿರ್ದಿಷ್ಟ ಕಾರಣವನ್ನು ನಿರೂಪಿಸುವ ನಿರ್ಣಯವನ್ನು ಅಂಗೀಕರಿಸದ ಹೊರತು, ಸಿಂಡಿಕೇಟು ಆ ಪಟ್ಟಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

(5) ಸಿಂಡಿಕೇಟಿನಿಂದ ನೇಮಕಗೊಂಡ ಯಾವೊಬ್ಬ ಪರೀಕ್ಷಕರು, ಯಾವುದೇ ಕಾರಣಕ್ಕಾಗಿ, ಪರೀಕ್ಷಕರ ಕೆಲಸವನ್ನು ಅಂಗೀಕರಿಸಲು ಅಸಮರ್ಥರಾದಲ್ಲಿ ಮತ್ತು ಸಿಂಡಿಕೇಟು ಸಕಾಲದಲ್ಲಿ ಹೊಸ ನೇಮಕಾತಿಯನ್ನು ಮಾಡಲಾಗದಿದ್ದಲ್ಲಿ, ಕುಲಪತಿಯು ಬೇರೊಬ್ಬ ಪರೀಕ್ಷಕರನ್ನು ನೇಮಕ ಮಾಡತಕ್ಕದ್ದು ಮತ್ತು ಅಂಥ ನೇಮಕಾತಿಯನ್ನು ಸಿಂಡಿಕೇಟಿಗೆ ವರದಿ ಮಾಡತಕ್ಕದ್ದು.

(6) ಹಾಜರಿದ್ದ ಮೂರನೇ ಎರಡರಷ್ಟು ಸದಸ್ಯರು ಸಿಂಡಿಕೇಟಿನ ನಿರ್ಣಯವನ್ನು ಅಂಗೀಕರಿಸದ ಹೊರತು, ಮಂಡಳಿಯ ಯಾವೊಬ್ಬ ಸದಸ್ಯರನ್ನು ಪರೀಕ್ಷಕರನ್ನಾಗಿ ನೇಮಕ ಮಾಡತಕ್ಕದ್ದಲ್ಲ.

34. ಇತರ ಮಂಡಳಿಗಳು.– (1) ವಿಶ್ವವಿದ್ಯಾಲಯವು, ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಮಂಡಳಿಗಳನ್ನು ಸ್ಥಾಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಮಂಡಳಿಗಳ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

35. ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟಿನ ಸದಸ್ಯರ ಪದಾವಧಿ.– (1) ಅನ್ಯಥಾ ಉಪಬಂಧಿಸಿದ್ದುದ್ದನ್ನುಳಿದು, ಶೈಕ್ಷಣಿಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಉಳಿದ ಸದಸ್ಯರ ಪದಾವಧಿಯು, ಮೂರು ವರ್ಷಗಳು ಆಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟು ಮೂರು ವರ್ಷಕ್ಕೊಮ್ಮೆ ಏಕಕಾಲದಲ್ಲಿ ಪುನಾರಚನೆಯಾಗತಕ್ಕದ್ದು.

36. ಪ್ರಾಧಿಕಾರಗಳ ಸದಸ್ಯತ್ವವನ್ನು ಹೊಂದಲು ನಿರ್ಬಂಧ.– (1) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾದ ಯಾವೊಬ್ಬ ಸದಸ್ಯರು, ಸಂಬಂಧಪಟ್ಟ ನಾಮನಿರ್ದೇಶನ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾದ ಯಾವೊಬ್ಬ ವ್ಯಕ್ತಿಯು, ಎರಡನೇ ಅವಧಿಗಾಗಿ ನಾಮನಿರ್ದೇಶಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(3) ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶನಗೊಂಡ ಯಾವೊಬ್ಬ ವ್ಯಕ್ತಿಯನ್ನು, ಅವರ ದುರ್ವರ್ತನೆ, ದುರ್ನಡತೆಯ ಆಧಾರದ ಮೇಲೆ ಅಥವಾ ಅನ್ಯಥಾ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ, ಕುಲಾಧಿಪತಿಯು, ಯಾವುದೇ ಸಮಯದಲ್ಲಿ ಅಂಥ ಸದಸ್ಯತ್ವದಿಂದ ಅವರನ್ನು ತೆಗೆದುಹಾಕತಕ್ಕದ್ದು.

(4) ಈ ಅಧಿನಿಯಮದಲ್ಲಿ ಒಳಗೊಂಡಿರುವುದಾವುದೂ, ಅನ್ಯಥಾ ಉಪಬಂಧಿಸಿದ್ದುದ್ದನ್ನುಳಿದು, ವಿಶ್ವವಿದ್ಯಾಲಯದ ಯಾವೊಬ್ಬ ನೌಕರನು, ಬೋಧನೆ ಮತ್ತು ಬೋಧಕೇತರ ಎರಡರಲ್ಲೂ ಅಥವಾ ಆಡಳಿತ ಸಿಬ್ಬಂದಿ ಅಥವಾ ಸಂಸ್ಥೆಯ ವ್ಯವಸ್ಥಾಪನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ಅವನು ಯಾವುದೇ ಸಾಮರ್ಥ್ಯ ಹೊಂದಿರಲಿ ಅವನು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದ ಸದಸ್ಯನೆಂಬುದಾಗಿ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

37. **ಸದಸ್ಯತ್ವಕ್ಕೆ ಅನರ್ಹತೆ.**– (1) ಯಾವೊಬ್ಬ ವ್ಯಕ್ತಿಯು ಅಂಥ ಚುನಾವಣೆ ಅಥವಾ ನಾಮ ನಿರ್ದೇಶನದ ದಿನಾಂಕದಂದು,

(ಎ) ಅಸ್ವಸ್ಥಚಿತ್ತದವನಾಗಿದ್ದರೆ,

(ಬಿ) ದಿವಾಳಿಯೆಂದು ಅಥವಾ ಅವಿಮುಕ್ತ ದಿವಾಳಿಯೆಂದು ನಿರ್ಣೀತನಾಗಿದ್ದರೆ, ಅಥವಾ

(ಸಿ) ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ,

– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಗಳ ಸದಸ್ಯರೆಂದು ಚುನಾಯಿತರಾಗಲು ಅಥವಾ ನಾಮನಿರ್ದೇಶಿತರಾಗಲು ಅನರ್ಹರಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು (1) ನೇ ಉಪಪ್ರಕರಣದ ಅಡಿಯಲ್ಲಿ ಅನರ್ಹನೇ ಇಲ್ಲವೇ ಎಂಬ ಬಗ್ಗೆ ಯಾವುದೇ ವಿವಾದ ಅಥವಾ ಸಂದೇಹ ಉಂಟಾದ ಸಂದರ್ಭದಲ್ಲಿ, ಅದನ್ನು ಸಿಂಡಿಕೇಟ್ ತೀರ್ಮಾನಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

38. **ಕೆಲವು ಸಂದರ್ಭಗಳಲ್ಲಿ ಶೈಕ್ಷಣಿಕ ಪರಿಷತ್ತು ಮತ್ತು ಸಿಂಡಿಕೇಟ್‌ಗೆ ನಾಮ ನಿರ್ದೇಶಿತನಾಗಲು ಅನರ್ಹತೆ.**– (1) 27ನೇ ಅಥವಾ 24ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನ ಯಾವುದೇ ಒಂದು ಅಥವಾ ಎರಡು ಪ್ರಾಧಿಕಾರಗಳು, ಎಂದರೆ:–

(ಎ) ಶೈಕ್ಷಣಿಕ ಪರಿಷತ್ತು; ಮತ್ತು

(ಬಿ) ಸಿಂಡಿಕೇಟ್,

– ಇವುಗಳಲ್ಲಿ ಒಟ್ಟು ಆರು ವರ್ಷಗಳ ಅವಧಿಯವರೆಗೆ ಸದಸ್ಯರಾಗಿ ಪದಧಾರಣೆ ಮಾಡಿದ ಯಾವೊಬ್ಬ ವ್ಯಕ್ತಿಯು ಸದರಿ ಎರಡೂ ಪ್ರಾಧಿಕಾರಗಳಲ್ಲಿ ಯಾವುದಕ್ಕೇ ಆಗಲಿ ನಾಮನಿರ್ದೇಶಿತರಾಗಲು ಅರ್ಹರಾಗತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ಸರ್ಕಾರವು ವಿಶ್ವವಿದ್ಯಾಲಯಕ್ಕೆ ಒಂದು ಅವಕಾಶವನ್ನು ಕೊಡತಕ್ಕದ್ದು.

ವಿವರಣೆ.– ಈ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆರು ವರ್ಷಗಳ ಒಟ್ಟು ಅವಧಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ, ಒಂದು ಪ್ರಾಧಿಕಾರದಲ್ಲಿ ಒಬ್ಬ ವ್ಯಕ್ತಿಯು ನಾಮ ನಿರ್ದೇಶನದ ಮೂಲಕ ಪದಧಾರಣ ಮಾಡಿದ್ದ ಮೂರು ವರ್ಷಗಳ ಅವಧಿ ಮತ್ತು ಇನ್ನೊಂದು ಪ್ರಾಧಿಕಾರದಲ್ಲಿ ಅವರು ನಾಮ ನಿರ್ದೇಶನದ ಮೂಲಕ ಪದಧಾರಣ ಮಾಡಿದ್ದ ಮೂರು ವರ್ಷಗಳ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ತದನುಸಾರವಾಗಿ ಅಂಥ ವ್ಯಕ್ತಿಯು ಸದರಿ ಎರಡು ಪ್ರಾಧಿಕಾರಗಳಲ್ಲಿ ಯಾವುದೇ ಒಂದಕ್ಕೆ ನಾಮ ನಿರ್ದೇಶಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಆಕಸ್ಮಿಕ ಖಾಲಿ ಸ್ಥಾನದಲ್ಲಿರುವ ಸದರಿ ಎರಡೂ ಪ್ರಾಧಿಕಾರಗಳ ಪೈಕಿ ಯಾವುದೇ ಒಂದರಲ್ಲಿ ಪದಧಾರಣ ಮಾಡಿದ ಒಬ್ಬ ವ್ಯಕ್ತಿಯು, ಆ ಪ್ರಾಧಿಕಾರದಲ್ಲಿ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿದ್ದರೆಂದು ಭಾವಿಸತಕ್ಕದ್ದು:

ಅಲ್ಲದೆ ಪರಂತು, ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಒಂದು ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾಗಿದ್ದು, ಅಂಥ ವ್ಯಕ್ತಿಯು ಮೊದಲು ನಮೂದಿಸಲಾದ ಪ್ರಾಧಿಕಾರದಲ್ಲಿನ ಸದಸ್ಯತ್ವದ ಆಧಾರದ ಮೇಲೆ ಇನ್ನೊಂದು ಪ್ರಾಧಿಕಾರದ ಸದಸ್ಯನಾದರೆ, ಮೊದಲು ನಮೂದಿಸಲಾದ ಪ್ರಾಧಿಕಾರದಲ್ಲಿ ಆತನು ಪದಧಾರಣ ಮಾಡಿದ್ದ ಅವಧಿಯೊಂದನ್ನೇ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿರುವುದಾವುದೂ,

(ಎ) ಸಿಂಡಿಕೇಟ್ ಸದಸ್ಯರಲ್ಲದ ಶೈಕ್ಷಣಿಕ ಪರಿಷತ್ತಿನ ಸದಸ್ಯರನ್ನು ಅನ್ಯಥಾ ಒಳಗೊಂಡಿಲ್ಲದ 27ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸದಸ್ಯರ; ಮತ್ತು

(ಬಿ) ಪದನಿಮಿತ್ತ ಸದಸ್ಯರಂತೆ ಉಲ್ಲೇಖಿಸಿದ ಸದಸ್ಯರ,

– ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.

ಅಧ್ಯಾಯ – V

ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

39. ಪರಿನಿಯಮಗಳು.– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಪರಿನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದಂಥ ಇತರ ನಿಕಾಯಗಳ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು;

(ii) ಮೊದಲಿನ ಸದಸ್ಯರು ಪದದಲ್ಲಿ ಮುಂದುವರಿಯುವುದು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ನೇಮಕ ಮತ್ತು ಅವರು ಪದದಲ್ಲಿ ಮುಂದುವರೆಯುವುದು ಹಾಗೂ ಸದಸ್ಯರ ಖಾಲಿ ಸ್ಥಾನಗಳನ್ನು ತುಂಬುವುದು ಮತ್ತು ಪ್ರಾಧಿಕಾರಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯವಾಗಬಹುದೋ ಆ ಎಲ್ಲ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು;

(iii) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(iv) ಪದವಿ ಮತ್ತು ಡಿಪ್ಲೊಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು ಮತ್ತು ತುರ್ತು ಸಂದರ್ಭದಲ್ಲಿ ಘಟಿಕೋತ್ಸವಕ್ಕೆ ಮೊದಲು ಪದವಿ ಪ್ರಮಾಣ ಪತ್ರಗಳನ್ನು ನೀಡುವುದು;

(v) ಪದವಿಗಳ, ಡಿಪ್ಲೊಮಾಗಳ, ಸರ್ಟಿಫಿಕೇಟ್‌ಗಳ ಹಾಗೂ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(vi) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿನಿಲಯಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವುದು;

(vii) ಸಂಸ್ಥೆಗಳನ್ನು ಮಾನ್ಯ ಮಾಡುವ ಮತ್ತು ಅಂಥ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬಹುದಾದ ಬಗೆಗಿನ ಷರತ್ತುಗಳು;

(viii) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳ ಸ್ಥಾಪನೆ;

(ix) ಪ್ರಾಧ್ಯಾಪಕರ, ಸಹ–ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ, ಆಡಳಿತ ಸಿಬ್ಬಂದಿಯ ಹುದ್ದೆಗಳ ಸ್ಥಾಪನೆ, ಅಮಾನತ್ತು ಅಥವಾ ರದ್ದುಪಡಿಸುವುದು;

(x) ಹುದ್ದೆಗಳ ಸೃಜನೆ;

(xi) ವಿಶ್ವವಿದ್ಯಾಲಯಗಳಲ್ಲಿ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅಧ್ಯಾಪಕರ ನೇಮಕಾತಿಯ ವಿಧಾನ:

ಪರಂತು, ವಿಶ್ವವಿದ್ಯಾಲಯ ಅನುದಾನ ಆಯೋಗದ ವೇತನ ಶ್ರೇಣಿ ಪಡೆಯುತ್ತಿರುವವರನ್ನು ಹೊರತುಪಡಿಸಿ, ನೌಕರರ ವೇತನ ಶ್ರೇಣಿಗಳು, ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳಿಗೆ ಅನುಗುಣವಾಗಿರತಕ್ಕದ್ದು.

(xii) ಉಯಿಲಿನ ಮೂಲಕ ಬರುವ ಸ್ವತ್ತಿನ, ದೇಣಿಗೆಗಳ ಮತ್ತು ದತ್ತಿಗಳ ಸ್ವೀಕಾರ ಮತ್ತು ನಿರ್ವಹಣೆ;

(xiii) ವಿಶ್ವವಿದ್ಯಾಲಯದಲ್ಲಿ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ವ್ಯಾಸಂಗ ಕ್ರಮಗಳಿಗೆ ಮತ್ತು ವಿಶ್ವವಿದ್ಯಾಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೊಮಾಗಳ ಪ್ರವೇಶಗಳಿಗಾಗಿ ವಿಧಿಸಬೇಕಾದ ಫೀಜುಗಳು;

(xiv) ವಿಶ್ವವಿದ್ಯಾಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಫೀಜುಗಳು;

(xv) ಉಪಲಬ್ಧಿಗಳನ್ನು ಒಳಗೊಂಡಂತೆ ನೌಕರರ ಸೇವಾ ಷರತ್ತುಗಳು; ಮತ್ತು

(xvi) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ಅಥವಾ ಉಪಬಂಧ ಕಲ್ಪಿಸಬಹುದಾದ ಎಲ್ಲ ಇತರ ವಿಷಯಗಳು.

(2) ಪರಿನಿಯಮಗಳು, ಕುಲಾಧಿಪತಿಯವರ ಅನುಮೋದನೆಯ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಇತರ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(3) ಉಪಲಬ್ಧಿಗಳು ಒಳಗೊಂಡಂತೆ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಪರಿನಿಯಮಗಳು ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರತಕ್ಕದ್ದು.

40. ಪರಿನಿಯಮಗಳ ಅಧಿನಿಯಮಿತಿ ಮತ್ತು ಅವುಗಳ ರಚನೆ.– (1) ಸಿಂಡಿಕೇಟ್, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಪರಿನಿಯಮಗಳನ್ನು ರಚಿಸತಕ್ಕದ್ದು, ತಿದ್ದುಪಡಿ ಮಾಡತಕ್ಕದ್ದು ಅಥವಾ ನಿರಸನಗೊಳಿಸತಕ್ಕದ್ದು.

(2) ಸಿಂಡಿಕೇಟ್ ತಾನಾಗಿಯೇ ಆಗಲಿ ಅಥವಾ ಶೈಕ್ಷಣಿಕ ಪರಿಷತ್ತು ಮಾಡಿದ ಪ್ರಸ್ತಾವನೆಯ ಮೇಲಾಗಲಿ ಪರಿನಿಯಮದ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು. ಶೈಕ್ಷಣಿಕ ಪರಿಷತ್ತು ಕರಡನ್ನು ಪ್ರಸ್ತಾವಿಸದೇ ಇದ್ದಲ್ಲಿ, ಸಿಂಡಿಕೇಟ್ ಅದನ್ನು ಪರಿಗಣಿಸುವುದಕ್ಕೆ ಮೊದಲು ಶೈಕ್ಷಣಿಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದ್ದು.

(3) ಸಿಂಡಿಕೇಟು, ಹಣಕಾಸಿನ ಪರಿಣಾಮಗಳನ್ನು ಒಳಗೊಂಡಿದ್ದ ಪರಿನಿಯಮಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಪಡೆಯತಕ್ಕದ್ದು.

(4) ಸಿಂಡಿಕೇಟು, ತಾನು ಅವಶ್ಯವೆಂದು ಭಾವಿಸಿದರೆ, ಕರಡು ಪರಿನಿಯಮಗಳ ಸಂಬಂಧದಲ್ಲಿ ಸಿಂಡಿಕೇಟ್ ಅವುಗಳನ್ನು ಪರಿಗಣಿಸುವುದಕ್ಕೆ ಮೊದಲು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

(5) ಸಿಂಡಿಕೇಟ್ ಅಂಗೀಕರಿಸಿದ ಪ್ರತಿಯೊಂದು ಪರಿನಿಯಮವನ್ನು, ತನ್ನ ನಿರ್ದಿಷ್ಟ ಶಿಫಾರಸ್ಸುಗಳೊಡನೆ ಅನುಮೋದನೆಗಾಗಿ ಕುಲಾಧಿಪತಿಯವರಿಗೆ ಒಪ್ಪಿಸುವುದಕ್ಕಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ಸರ್ಕಾರವು, ಕರಡು ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಅಂಥ ಕರಡು ಪರಿನಿಯಮಗಳನ್ನು ತನ್ನ ಟೀಕೆ ಟಿಪ್ಪಣಿಗಳು ಮತ್ತು ನಿರ್ದಿಷ್ಟ ಶಿಫಾರಸ್ಸುಗಳೊಡನೆ, ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಕುಲಾಧಿಪತಿಯವರು, ಸರ್ಕಾರದಿಂದ ಕರಡು ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ತನ್ನ ಅನುಮೋದನೆಯನ್ನು ನೀಡಬಹುದು ಅಥವಾ ತನ್ನ ಅನುಮೋದನೆಯನ್ನು ತಡೆಹಿಡಿಯಬಹುದು ಅಥವಾ ಅದನ್ನು ಮತ್ತಷ್ಟು ಪರಿಗಣನೆಗಾಗಿ ಸಿಂಡಿಕೇಟಿಗೆ ಕಳುಹಿಸಬಹುದು.

(7) ಸಿಂಡಿಕೇಟ್ ಅಂಗೀಕರಿಸಿದ ಪರಿನಿಯಮವನ್ನು, ಅದಕ್ಕೆ ಕುಲಾಧಿಪತಿಯವರು ಅನುಮೋದನೆಯನ್ನು ನೀಡಿದ ಹೊರತು ಜಾರಿಗೊಳಿಸತಕ್ಕದ್ದಲ್ಲ.

41. ಆರ್ಡಿನೆನ್ಸ್‌ಗಳು.– (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಆರ್ಡಿನೆನ್ಸ್‌ಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ಅವರನ್ನು ಹಾಗೆ ವಿದ್ಯಾರ್ಥಿಗಳ ಪಟ್ಟಿಗೆ ಸೇರಿಸುವುದು;

(ii) ವಿಶ್ವವಿದ್ಯಾಲಯದ ಎಲ್ಲ ಪದವಿಗಳ, ಡಿಪ್ಲೊಮಾಗಳ ಮತ್ತು ಪ್ರಮಾಣ ಪತ್ರಗಳ ಬಗ್ಗೆ ವ್ಯಾಸಂಗ ಕ್ರಮಗಳು;

(iii) ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳು ಹಾಗೂ ಅವುಗಳಿಗಾಗಿ ಇತರ ಅಗತ್ಯತೆಗಳು ಮತ್ತು ಅವುಗಳನ್ನು ನೀಡುವುದಕ್ಕೆ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು;

(iv) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(v) ಪರೀಕ್ಷಾ ನಿಕಾಯಗಳು, ಪರೀಕ್ಷಕರು ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳು ಸೇರಿದಂತೆ, ಪರೀಕ್ಷೆಗಳನ್ನು ನಡೆಸುವುದು;

(vi) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸದ ಬಗ್ಗೆ ಷರತ್ತುಗಳು;

(vii) ವಿದ್ಯಾರ್ಥಿನಿಯರ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳು, ಏನಾದರೂ ಇದ್ದರೆ, ಅವುಗಳನ್ನು ಮಾಡುವುದು ಮತ್ತು ಅವಶ್ಯವಿರುವಲ್ಲಿ ಅವರಿಗಾಗಿ ವಿಶೇಷ ವ್ಯಾಸಂಗ ಕ್ರಮಗಳನ್ನು ನಿಯಮಿಸುವುದು;

(viii) ಧಾರ್ಮಿಕ ಶಿಕ್ಷಣ ನೀಡುವುದನ್ನು ನಿಯಂತ್ರಿಸುವುದು;

(ix) ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಅಧ್ಯಯನ ಕೇಂದ್ರಗಳು ಮತ್ತು ಇತರ ಸಂಸ್ಥೆಗಳ ವ್ಯವಸ್ಥಾಪನ;

(x) ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆಗಳ ಮತ್ತು ಇತರ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ;

(xi) ವಿಶ್ವವಿದ್ಯಾಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು;

(xii) ವಿಶ್ವವಿದ್ಯಾಲಯದಲ್ಲಿ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಹಾಗೂ ಅವರ ವಿರುದ್ಧ ಶಿಸ್ತು ವ್ಯವಹರಣಗಳು;

(xiii) ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಸಂಸ್ಥೆಗಳ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳು ಅನುಸರಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ನಿಯಮಗಳು; ಮತ್ತು

(xiv) ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ, ಆರ್ಡಿನೆನ್ಸ್‌ಗಳಿಂದ ಉಪಬಂಧ ಕಲ್ಪಿಸಬೇಕಾದ ಅಥವಾ ಉಪಬಂಧ ಕಲ್ಪಿಸಬಹುದಾದ ಇತರ ಎಲ್ಲ ವಿಷಯಗಳು.

(2) ಜಾರಿಯಲ್ಲಿರುವ ವಿನಿಯಮಗಳ ಅಥವಾ ಪರಿನಿಯಮಗಳ ತಿದ್ದುಪಡಿಗಾಗಿ ಯಾವುದೇ ಆರ್ಡಿನೆನ್ಸನ್ನು ರಚಿಸತಕ್ಕದ್ದಲ್ಲ.

42. **ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ.**– (1) ಸಿಂಡಿಕೇಟು, ಇದರಲ್ಲಿ ಇನ್ನು ಮುಂದೆ ಉಪಬಂಧ ಕಲ್ಪಿಸಿದ ರೀತಿಯಲ್ಲಿ ಆರ್ಡಿನೆನ್ಸ್‌ಗಳನ್ನು ರಚಿಸಬಹುದು.

(2) ಆರ್ಡಿನೆನ್ಸ್‌ಗಳನ್ನು ರಚಿಸುವಲ್ಲಿ ಸಿಂಡಿಕೇಟು.–

(i) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ಸಂಬಂಧಪಟ್ಟ ಮಂಡಳಿ ಅಥವಾ ವ್ಯಾಸಂಗ ಮಂಡಳಿಗಳೊಡನೆ; ಮತ್ತು

(ii) ವ್ಯಾಸಂಗ ಕ್ರಮಗಳು, ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ

ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ಶೈಕ್ಷಣಿಕ ಪರಿಷತ್ತಿನೊಡನೆ,

– ಸಮಾಲೋಚಿಸತಕ್ಕದ್ದು.

(3) ಶೈಕ್ಷಣಿಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಆರ್ಡಿನೆನ್ಸಿನ ಕರಡನ್ನು ತಿದ್ದುಪಡಿ ಮಾಡಲು ಸಿಂಡಿಕೇಟಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಸಿಂಡಿಕೇಟು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶಃ ಮರುಪರಿಶೀಲನೆಗಾಗಿ ಕರಡನ್ನು ಶೈಕ್ಷಣಿಕ ಪರಿಷತ್ತಿಗೆ ಹಿಂದಿರುಗಿಸಬಹುದು.

(4) ಸಿಂಡಿಕೇಟು ರಚಿಸಿದ ಎಲ್ಲಾ ಆರ್ಡಿನೆನ್ಸ್‌ಗಳು, ಅದು ನಿರ್ದೇಶಿಸಬಹುದಾದ ಅಂಥ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು. ಆದರೆ ಪ್ರತಿಯೊಂದು ಆರ್ಡಿನೆನ್ಸನ್ನು ಅದನ್ನು ರಚಿಸಿದ ದಿನದಿಂದ ಎರಡು ವಾರಗಳೊಳಗಾಗಿ, ಕುಲಾಧಿಪತಿಯವರಿಗೆ ಅವರ ಅನುಮೋದನೆಗಾಗಿ ಒಪ್ಪಿಸತಕ್ಕದ್ದು. ಕುಲಾಧಿಪತಿಯವರು, ಆರ್ಡಿನೆನ್ಸನ್ನು ಸ್ವೀಕರಿಸಿದ ನಾಲ್ಕು ವಾರಗಳೊಳಗಾಗಿ, ಯಾವುದೇ ಆರ್ಡಿನೆನ್ಸಿನ ಪ್ರವರ್ತನೆಯು ಅಮಾನತ್ತಿನಲ್ಲಿರತಕ್ಕದೆಂದು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಅದಕ್ಕೆ ತಮ್ಮ ಆಕ್ಷೇಪಣೆಯನ್ನು ಸಾಧ್ಯವಾದಷ್ಟು ಬೇಗನೆ ಸಿಂಡಿಕೇಟಿಗೆ ತಿಳಿಸತಕ್ಕದ್ದು. ಸಿಂಡಿಕೇಟಿನ ಟೀಕೆ ಟಿಪ್ಪಣಿಗಳನ್ನು ಅವರು ಸ್ವೀಕರಿಸಿದ ತರುವಾಯ, ಅಮಾನತ್ತಿನ ಆದೇಶವನ್ನು ಹಿಂತೆಗೆದುಕೊಳ್ಳಬಹುದು ಅಥವಾ ಆರ್ಡಿನೆನ್ಸನ್ನು ಅಂಗೀಕರಿಸದಿರಬಹುದು. ಅವರ ನಿರ್ಣಯವು ಅಂತಿಮವಾಗಿರತಕ್ಕದ್ದು:

ಪರಂತು, ರಾಜ್ಯ ಸಂಚಿತನಿಧಿಯಿಂದ ವೆಚ್ಚಕ್ಕೆ ಸಂಬಂಧಿಸಿದ ವೆಚ್ಚವನ್ನು ಒಳಗೊಂಡ ಆರ್ಡಿನೆನ್ಸ್ ಸಂಬಂಧದಲ್ಲಿ ಕುಲಾಧಿಪತಿಯವರು ತಮ್ಮ ಅನುಮೋದನೆ ನೀಡುವ ಮೊದಲು ಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

(5) ಶೈಕ್ಷಣಿಕ ಪರಿಷತ್ತು ಪ್ರಸ್ತಾವಿಸಿದ ಆರ್ಡಿನೆನ್ಸಿನ ಕರಡನ್ನು ಸಿಂಡಿಕೇಟು ತಿರಸ್ಕರಿಸಿದಲ್ಲಿ, ಶೈಕ್ಷಣಿಕ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿ ಮಾಡಿಕೊಳ್ಳಬಹುದು.

(6) ಕುಲಾಧಿಪತಿಯವರು, ಸಿಂಡಿಕೇಟಿನ ಟೀಕೆ ಟಿಪ್ಪಣಿಗಳನ್ನು ಪಡೆದ ತರುವಾಯ ಮೇಲ್ಮನವಿಯನ್ನು ತಿರಸ್ಕರಿಸಬಹುದು ಇಲ್ಲವೇ ಶೈಕ್ಷಣಿಕ ಪರಿಷತ್ತು ಪ್ರಸ್ತಾವಿಸಿದಂತೆ ಆರ್ಡಿನೆನ್ಸನ್ನು ಅನುಮೋದಿಸಬಹುದು. ತದನಂತರ ಆರ್ಡಿನೆನ್ಸನ್ನು ಸಿಂಡಿಕೇಟು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

43. **ವಿನಿಯಮಗಳು.**– (1) ಶೈಕ್ಷಣಿಕ ಪರಿಷತ್ತು, ತನಗೆ ಪ್ರದತ್ತವಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧ ಕಲ್ಪಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಈ ಅಧಿನಿಯಮ; ಪರಿನಿಯಮ ಮತ್ತು ಆರ್ಡಿನೆನ್ಸ್‌ಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ii) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮನಾದುವೆಂದು ಮನ್ನಣೆ ನೀಡುವುದು;

(iii) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾಲಯದ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳ ಅಥವಾ ಇತರ ವಿಶ್ವವಿದ್ಯಾಲಯಗಳ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ಸರ್ಟಿಫಿಕೇಟುಗಳಿಗೆ ಸೇರಿಸಿಕೊಳ್ಳತಕ್ಕದ್ದೋ, ಆ ಷರತ್ತುಗಳು;

(iv) ವಿನಾಯಿತಿಗಳನ್ನು ನೀಡುವುದು.

(2) ಶೈಕ್ಷಣಿಕ ಪರಿಷತ್ತು ಅಂಗೀಕರಿಸಿದ ಎಲ್ಲ ವಿನಿಯಮಗಳನ್ನು ಕುಲಾಧಿಪತಿಯವರ ಅನುಮೋದನೆಗಾಗಿ ಒಪ್ಪಿಸಲು ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರವು, ವಿಶ್ವವಿದ್ಯಾಲಯದಿಂದ ಸ್ವೀಕರಿಸಿದ ವಿನಿಯಮಗಳನ್ನು ಅವುಗಳನ್ನು ಸ್ವೀಕರಿಸಿದ ದಿನದಿಂದ ಎರಡು ತಿಂಗಳೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರು, ವಿನಿಯಮಗಳನ್ನು ಸರ್ಕಾರದಿಂದ ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಅವುಗಳನ್ನು ಅನುಮೋದಿಸಬಹುದು ಅಥವಾ ಮತ್ತಷ್ಟುಪರಿಶೀಲನೆಗಾಗಿ ಅವುಗಳನ್ನು ಶೈಕ್ಷಣಿಕ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಪ್ರತಿಯೊಂದು ವಿನಿಯಮವು, ಕುಲಾಧಿಪತಿಯವರು ಅವುಗಳನ್ನು ಅನುಮೋದಿಸಿದ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಇತರ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

44. ನಿಯಮಗಳು.– (1) ಸಿಂಡಿಕೇಟು, ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಿಗೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

(2) ನಿಯಮಗಳು,–

(i) ಪ್ರತಿಯೊಂದು ಪ್ರಾಧಿಕಾರದ ಅಥವಾ ಮಂಡಳಿಯ ಸದಸ್ಯರಿಗೆ, ಸಭೆಗಳ ದಿನಾಂಕ ಮತ್ತು ಆ ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರದ ಬಗ್ಗೆ ನೋಟೀಸನ್ನು ಕೊಡುವುದು ಹಾಗೂ ಆ ಸಭೆಗಳ ನಡವಳಿಗಳ ದಾಖಲೆಯನ್ನು ಇಡುವುದು;

(ii) ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಸಭೆಗಳ ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ; ಮತ್ತು

(iii) ಅಂಥ ಪ್ರಾಧಿಕಾರ ಅಥವಾ ಮಂಡಳಿಗೆ ಮಾತ್ರವೇ ಸಂಬಂಧಿಸಿದ ಮತ್ತು ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸದೆ ಇರುವ ಎಲ್ಲ ವಿಷಯಗಳು,

– ಇವುಗಳಿಗಾಗಿ ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ರಚಿತವಾದ ಪ್ರತಿಯೊಂದು ನಿಯಮವು, ಸಿಂಡಿಕೇಟಿನ ಅನುಮೋದನೆ ಪಡೆದ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಅಧ್ಯಾಯ – VI

ಹಣಕಾಸು ಮತ್ತು ಲೆಕ್ಕಪತ್ರಗಳು

45. ವಿಶ್ವವಿದ್ಯಾಲಯದ ನಿಧಿಗಳು.– (1) ಈ ಕೆಳಕಂಡ ಯಾವುವೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು ವಿಶ್ವವಿದ್ಯಾಲಯದ ನಿಧಿಯ ಭಾಗವಾಗಿರತಕ್ಕದ್ದು,–

(i) ವಿಶ್ವವಿದ್ಯಾಲಯದ ಅನುದಾನಗಳ ಆಯೋಗವು ಅಥವಾ ಕೇಂದ್ರ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ii) ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(iii) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಉಯಿಲಿನ ಮೂಲಕವಾಗಿ ದೊರೆತ ಸ್ವತ್ತು, ದೇಣಿಗೆಗಳು, ದತ್ತಿಗಳು ಅಥವಾ ಇತರ ಅನುದಾನಗಳು;

(iv) ಫೀಜು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾಲಯವು ಸ್ವೀಕರಿಸಿದ ಆದಾಯ;

(v) ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ವಂತಿಗೆ ಅಥವಾ ಉಯಿಲಿನ ಮೂಲಕವಾಗಿ ದೊರೆತ ಸ್ವತ್ತು;

(vi) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ವಿದೇಶಿ ಸರ್ಕಾರಗಳಿಂದ ಅಥವಾ ಯಾವುದೇ ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ದತ್ತಿಗಳು; ಮತ್ತು

(vii) ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(2) ಸದರಿ ನಿಧಿಯನ್ನು, ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಸಿಂಡಿಕೇಟು ತೀರ್ಮಾನಿಸಬಹುದಾದಂತೆ, ಭಾರತ ನ್ಯಾಸ ಅಧಿನಿಯಮ, 1882ರ ಮೂಲಕ ಪ್ರಾಧಿಕೃತವಾದ ಭದ್ರತೆಗಳಲ್ಲಿ ಹೂಡಬಹುದು.

(3) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ, ವಿಶ್ವವಿದ್ಯಾಲಯದ ಯಾವುದೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

46. ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.– (1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟಿನ ನಿರ್ದೇಶನದ ಮೇರೆಗೆ ತಯಾರಿಸತಕ್ಕದ್ದು.

(2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕ ಪತ್ರಗಳನ್ನು, ಶೈಕ್ಷಣಿಕ ಪರಿಷತ್ತು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು. ಶೈಕ್ಷಣಿಕ ಪರಿಷತ್ತು ಆ ಸಂಬಂಧವಾಗಿ ಒಂದು ನಿರ್ಣಯವನ್ನು ಅಂಗೀಕರಿಸಬಹುದು ಮತ್ತು ಅದನ್ನು ಸಿಂಡಿಕೇಟಿಗೆ ತಿಳಿಸತಕ್ಕದ್ದು. ಶೈಕ್ಷಣಿಕ ಪರಿಷತ್ತು ಮಾಡಿದ ಸಲಹೆಗಳನ್ನು ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಹಾಗೂ ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ಅದರ ಮುಂದಿನ ಸಭೆಯಲ್ಲಿ ಶೈಕ್ಷಣಿಕ ಪರಿಷತ್ತಿಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳನ್ನು ವರ್ಷಕ್ಕೊಮ್ಮೆ, ಏಪ್ರಿಲ್ ತಿಂಗಳಲ್ಲಿ ರಾಜ್ಯ ಲೆಕ್ಕ ಪತ್ರ ನಿಯಂತ್ರಕರು ಪರಿಶೋಧಿಸತಕ್ಕದ್ದು.

(4) ಹಾಗೆ ಪರಿಶೋಧಿಸಿದ ಲೆಕ್ಕ ಪತ್ರಗಳನ್ನು ಶೈಕ್ಷಣಿಕ ಪರಿಷತ್ತಿನ ಮುಂದೆ ಮತ್ತು ಸಿಂಡಿಕೇಟಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಸರ್ಕಾರವು ಅದನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

47. ಹಣಕಾಸಿನ ಅಂದಾಜುಗಳು.– (1) ಸಿಂಡಿಕೇಟು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮುಂಬರುವ ವರ್ಷದ ಹಣಕಾಸು ಅಂದಾಜುಗಳನ್ನು ಹಣಕಾಸು ಅಧಿಕಾರಿಯ ನೆರವಿನೊಡನೆ ತಯಾರಿಸತಕ್ಕದ್ದು ಮತ್ತು ಅವುಗಳನ್ನು ಹಣಕಾಸು ಸಮಿತಿಯಿಂದ ಪರಿಶೋಧಿಸುವಂತೆ ಮಾಡತಕ್ಕದ್ದು ಹಾಗೂ ಅವುಗಳನ್ನು ಶೈಕ್ಷಣಿಕ ಪರಿಷತ್ತಿನ ಮುಂದೆ ಇಡತಕ್ಕದ್ದು.

(2) ಸಿಂಡಿಕೇಟು, ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಶೈಕ್ಷಣಿಕ ಪರಿಷತ್ತಿಗೆ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

(3) ವಿಶ್ವವಿದ್ಯಾಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದೂ ಒಳಗೊಂಡಂತೆ ಸರ್ಕಾರದಿಂದ ಮತ್ತು ಎಲ್ಲ ಇತರ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು. ಆದಾಗ್ಯೂ, ಪೂರಕ ಬಜೆಟನ್ನು ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಪ್ರತಿ ವರ್ಷದ ಅಕ್ಟೋಬರ್‌ನಲ್ಲಿ ಸಿಂಡಿಕೇಟಿನ ಮುಂದೆ ಇಡಬಹುದು. ಆದರೆ, ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

(4) ವಿಶ್ವವಿದ್ಯಾಲಯವು, ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಗೆಗಳನ್ನು ಒಳಗೊಳ್ಳುವಂಥ ಯಾವುವೇ ಯೋಜನೆಗಳನ್ನು ಅಥವಾ ಪ್ರಾಯೋಜಕ ಪ್ರಾಧಿಕಾರಿಗಳಿಂದ ಸಹಾಯವು ನಿಂತುಹೋದ ತರುವಾಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವ ಯೋಜನೆ ಅಥವಾ ಕಾರ್ಯಕ್ರಮಕ್ಕೆ, ಆದರೆ, ವಿಶ್ವವಿದ್ಯಾಲಯದ ಅನುದಾನಗಳ ಆಯೋಗದಿಂದ, ಕೇಂದ್ರ ಸರ್ಕಾರದಿಂದ ಅಥವಾ ಸಂಸ್ಥೆಗಳಿಂದ ಪ್ರಾಪ್ತವಾದ ಬಡ್ಡಿಯಿಂದ ಅಥವಾ ವಂತಿಗೆಯಿಂದ ಅಥವಾ ದೇಣಿಗೆಗಳಿಂದ ಅಥವಾ ವ್ಯಕ್ತಿಗಳಿಂದ ಅಥವಾ ವೈಯಕ್ತಿಕ ಅಥವಾ ಸಂಸ್ಥೆಗಳಿಂದ ದತ್ತಿಯಾಗಿ ಬಂದ ಮೊಬಲಗಿಗೆ ಪೂರ್ವಾನುಮೋದನೆಯ ಆವಶ್ಯಕತೆ ಇರುವುದಿಲ್ಲ ಮತ್ತು ಅಂಥ ಆವರ್ತಕ ಹೊಣೆಗಾರಿಕೆಯು ಸರ್ಕಾರದ ಮೇಲೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಆ ಸಂಬಂಧವ ಸಂಪೂರ್ಣ ವೆಚ್ಚವನ್ನು ವಿಶ್ವವಿದ್ಯಾಲಯದ ನಿಧಿಯಿಂದ ಭರಿಸತಕ್ಕದ್ದು.

48. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.– (1) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಸಂಸ್ಥೆಗಳೂ ಒಳಗೊಂಡಂತೆ ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲಾ ಅದು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.

(2) ಮಹಾಲೇಖಪಾಲರಿಂದ ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳ ಪರಿಶೋಧನೆಯಾದಾಗ ಮತ್ತು ಆಕ್ಷೇಪಗಳೊಡನೆ ವರದಿಯನ್ನು ಅಥವಾ ಸ್ಪಷ್ಟೀಕರಣಗಳಿಗಾಗಿ ತಡೆಹಿಡಿದ ಬಾಬುಗಳ ಸಂಬಂಧದಲ್ಲಿ ಹೆಚ್ಚಿನ ಟೀಕೆಟಿಪ್ಪಣಿಗಳು ಅಥವಾ ಷರಾಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು. ವಿಶ್ವವಿದ್ಯಾಲಯವು ಅಂಥ ವರದಿಯನ್ನು ಸ್ವೀಕರಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ತನ್ನ ಟೀಕೆಟಿಪ್ಪಣಿಗಳನ್ನು ಅಥವಾ ಷರಾಗಳನ್ನು ಸರ್ಕಾರದ ಮೂಲಕ ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು.

49. ವಾರ್ಷಿಕ ವರದಿ.– (1) ಸಿಂಡಿಕೇಟು, ಪ್ರತಿ ಹಣಕಾಸು ವರ್ಷಕ್ಕೆ ವಿಶ್ವವಿದ್ಯಾಲಯದ ಚಟುವಟಿಕೆಗಳು, ಗುರಿ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ವಿವರಿಸುವ ಎಲ್ಲ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಜೂನ್ 30ನೇ

ದಿನಾಂಕದೊಳಗೆ ಶೈಕ್ಷಣಿಕ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಶೈಕ್ಷಣಿಕ ಪರಿಷತ್ತು ಅದರ ಮೇಲೆ ನಿರ್ಣಯಗಳನ್ನು ಅಂಗೀಕರಿಸಬಹುದು ಮತ್ತು ಅದರ ಪಾಲನೆಗಾಗಿ ವಾರ್ಷಿಕ ವರದಿಯನ್ನು ಸಿಂಡಿಕೇಟಿಗೆ ಹಿಂದಿರುಗಿಸತಕ್ಕದ್ದು. ಸಿಂಡಿಕೇಟು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ಶೈಕ್ಷಣಿಕ ಪರಿಷತ್ತಿಗೆ, ಶೀಘ್ರದಲ್ಲಿ ಬರುವ ಅದರ ಮುಂಬರುವ ಸಭೆಯಲ್ಲಿ ತಿಳಿಸತಕ್ಕದ್ದು.

(2) ಶೈಕ್ಷಣಿಕ ಪರಿಷತ್ತಿನ ನಿರ್ಣಯಗಳನ್ನು ಅಳವಡಿಸಿದ ವಾರ್ಷಿಕ ವರದಿಯ ಪ್ರತಿಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕೆ ಮೊದಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಸರ್ಕಾರವು, ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

ಅಧ್ಯಾಯ- VII

ಪ್ರಾಧಿಕಾರಗಳಲ್ಲಿ ಖಾಲಿ ಸ್ಥಾನಗಳು

50. ಪದವನ್ನು ತೆರವುಗೊಳಿಸುವುದು.- (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಯಾವೊಬ್ಬ ಸದಸ್ಯರು, ತಮ್ಮ ಪದಕ್ಕೆ ರಾಜೀನಾಮೆ ನೀಡಬಹುದು. ಸದಸ್ಯರು ತಮ್ಮ ಹಸ್ತಾಕ್ಷರದಲ್ಲಿ ಬರೆದ ರಾಜೀನಾಮೆ ಪತ್ರವನ್ನು ಕುಲಪತಿಯವರಿಗೆ ಕಳುಹಿಸತಕ್ಕದ್ದು. ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮತ್ತು ಸಂಬಂಧಪಟ್ಟವರಿಗೆ ಅದನ್ನು ತಿಳಿಸಿದ ಕೂಡಲೇ ಅದು ಜಾರಿಗೆ ಬರತಕ್ಕದ್ದು.

(2) ವಿಶ್ವವಿದ್ಯಾಲಯದ ಪ್ರಾಧಿಕಾರದಲ್ಲಿ ಅಥವಾ ನಿಕಾಯದಲ್ಲಿ ಯಾವೊಬ್ಬ ಸದಸ್ಯನು, ತನ್ನ ಸಾಮರ್ಥ್ಯದಲ್ಲಿ ಒಂದು ನಿರ್ದಿಷ್ಟ ನಿಕಾಯದ ಸದಸ್ಯನಾಗಿ ಅಥವಾ ಅಧ್ಯಾಪಕನಾಗಿ ನಾಮ ನಿರ್ದೇಶಿತನಾಗಿದ್ದರೆ ಅಥವಾ ಒಂದು ನಿರ್ದಿಷ್ಟ ನೇಮಕಾತಿಯನ್ನು ಹೊಂದಿರುವನೆಂದು ಸ್ಪಷ್ಟವಾಗಿ ಹಾಗೆ ಹೇಳಿದ್ದರೆ, ಆ ನಿರ್ದಿಷ್ಟ ನಿಕಾಯದ ಸದಸ್ಯನಾಗಿ ಅಥವಾ ಅಧ್ಯಾಪಕನಾಗಿ ಅಥವಾ ನಿರ್ದಿಷ್ಟ ನೇಮಕಾತಿಯಲ್ಲಿ ಆತನು ಮುಂದುವರೆಯುವವರೆಗೆ ಮಾತ್ರವೇ, ಅಂಥ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿ ಮುಂದುವರೆಯತಕ್ಕದ್ದು:

ಪರಂತು, ವಯೋನಿವೃತ್ತಿ ಹೊಂದಿದ ನಂತರ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮರು ನೇಮಕಾತಿ ಆಧಾರದ ಮೇಲೆ ಮುಂದುವರಿದಂಥ ಅಧ್ಯಾಪಕರು ವಯೋನಿವೃತ್ತಿ ನಂತರ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು.

(3) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಒಬ್ಬ ಸದಸ್ಯನು, ನೈತಿಕ ಅಧ:ಪತನದ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾದ ಮೇಲೆ, ಆತನು ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು.

51. ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.- ನಿಧನ, ರಾಜೀನಾಮೆ, ವಜಾ ಅಥವಾ ಅನ್ಯಥಾ ಕಾರಣದಿಂದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪದದಲ್ಲಿ ಉಂಟಾದ ಎಲ್ಲಾ ಖಾಲಿ ಸ್ಥಾನಗಳನ್ನು, ಖಾಲಿಯಾದ ಸ್ಥಾನದ ಸದಸ್ಯರನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯದಿಂದ ಆದಷ್ಟು ಶೀಘ್ರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಅಂಥ ಪ್ರಾಧಿಕಾರ ಅಥವಾ ನಿಕಾಯದಲ್ಲಿ ಯಾವ ಸದಸ್ಯರ ಸ್ಥಾನಕ್ಕೆ ನಾಮನಿರ್ದೇಶನಗೊಂಡಿರುವರೋ ಅಂಥ ಸದಸ್ಯರು ಆ ಪದದಲ್ಲಿ ಮುಂದುವರಿಯುತಿದ್ದಿರಬಹುದಾದಂಥ ಉಳಿದ ಅವಧಿಗೆ ಸದಸ್ಯರಾಗಿರತಕ್ಕದ್ದು:

ಪರಂತು, ಮೇಲೆ ಹೇಳಿದ ರೀತಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ ಯಾವುದೇ ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡುವವರೆಗೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಂಥ ಖಾಲಿ ಸ್ಥಾನದ ಭರ್ತಿಗೆ ಅರ್ಹರಾದಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವ ವ್ಯಕ್ತಿ ಅಥವಾ ನಿಕಾಯವು, ನಾಮನಿರ್ದೇಶನ ಮಾಡುವ ಮೂಲಕ ಆ ಖಾಲಿ ಸ್ಥಾನವನ್ನು ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬೇರೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದು:

ಮತ್ತು ಪರಂತು, ಅಂಥ ಯಾವುದೇ ಆಕಸ್ಮಿಕ ಖಾಲಿ ಸ್ಥಾನವು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯರ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚಿನ ಆರು ತಿಂಗಳೊಳಗಾಗಿ ಉಂಟಾದರೆ, ಅಂಥ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡತಕ್ಕದ್ದಲ್ಲ.

ಅಧ್ಯಾಯ - VIII

ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಇತರ ನೌಕರರ ನೇಮಕಾತಿ

52. ಅಧ್ಯಾಪಕರ ಮತ್ತು ಗ್ರಂಥಪಾಲರ ನೇಮಕಾತಿ.- (1) ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರು ಮತ್ತು ಗ್ರಂಥಪಾಲರಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳ ಆಯ್ಕೆಗಾಗಿ ಒಂದು ನೇಮಕಾತಿ ಮಂಡಳಿಯು ಇರತಕ್ಕದ್ದು.

(2) ಅಂಥ ಪ್ರತಿಯೊಂದು ಮಂಡಳಿಯು,-

(ಎ) ಪ್ರಾಧ್ಯಾಪಕರು, ಸಹ-ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರ ಆಯ್ಕೆಗಾಗಿ, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ ಪದನಿಮಿತ್ತ-ಅಧ್ಯಕ್ಷರು;

(ii) ಸಂಬಂಧಪಟ್ಟ ವಿಭಾಗೀಯ ಪರಿಷತ್ತಿನ ಅಧ್ಯಕ್ಷರು ಪ್ರಾಧ್ಯಾಪಕರಾಗಿದ್ದರೆ, ಅವರು ಮತ್ತು ಅವರು ಪ್ರಾಧ್ಯಾಪಕರಾಗಿರದಿದ್ದರೆ ಅದೇ ವಿಭಾಗದಿಂದ ಒಬ್ಬ ಪ್ರಾಧ್ಯಾಪಕರು, ಮತ್ತು ಪ್ರಾಧ್ಯಾಪಕರು ಇರದಿದ್ದರೆ, ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದಂಥ ರಾಜ್ಯದಲ್ಲಿನ ಯಾವುದೇ ಇತರ ವಿಶ್ವವಿದ್ಯಾಲಯದಿಂದ ಸಂಬಂಧಪಟ್ಟ ವಿಭಾಗದ ಒಬ್ಬ ಪ್ರಾಧ್ಯಾಪಕರು:

ಪರಂತು, ರಾಜ್ಯದಲ್ಲಿನ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಿರದಿದ್ದರೆ, ರಾಜ್ಯದೊಳಗಿನ ಕೇಂದ್ರೀಯ ಸಂಸ್ಥೆಯ ಅಥವಾ ಯಾವುದೇ ಇತರ ರಾಜ್ಯದ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದಲ್ಲಿನ ಅಂಥ ಪ್ರಾಧ್ಯಾಪಕರೊಬ್ಬರನ್ನು ನಾಮನಿರ್ದೇಶಿಸತಕ್ಕದ್ದು.

(iii) ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಥವಾ ಸರ್ಕಾರದಿಂದ ಮನ್ನಣೆ ಪಡೆದ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಪೈಕಿಯಿಂದ ಸರ್ಕಾರದ ಶಿಫಾರಸ್ಸಿನೊಂದಿಗೆ ಕುಲಾಧಿಪತಿಯವರು ನಾಮ ನಿರ್ದೇಶನ ಮಾಡಿರುವ ನಾಲ್ವರು ತಜ್ಞರು. ಇವರಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತೊಬ್ಬ ವ್ಯಕ್ತಿ ಇರತಕ್ಕದ್ದು:

ಪರಂತು, ರಾಜ್ಯದಲ್ಲಿನ ಯಾವುವೇ ವಿಶ್ವವಿದ್ಯಾಲಯಗಳಲ್ಲಿ ಅಂಥ ವ್ಯಕ್ತಿಗಳು ಲಭ್ಯವಿರದಿದ್ದರೆ, ಭಾರತದಲ್ಲಿನ ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುವ ಅಂಥ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಬಿ) ಉಪನ್ಯಾಸಕರ ಹುದ್ದೆಯ ಆಯ್ಕೆಗಾಗಿ, ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ ಪದನಿಮಿತ್ತ-ಅಧ್ಯಕ್ಷರು;

(ii) ವಿಶ್ವವಿದ್ಯಾಲಯ ಅನುದಾನ ಆಯೋಗದ ಪಟ್ಟಿಯಿಂದ ಕುಲಾಧಿಪತಿಯವರು ನಾಮನಿರ್ದೇಶಿಸುವಂಥ ಮೂವರು ತಜ್ಞರು, ಇವರಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತೊಬ್ಬ ವ್ಯಕ್ತಿ ಇರತಕ್ಕದ್ದು;

(iii) ಸಂಬಂಧಪಟ್ಟ ವಿಭಾಗೀಯ ಪರಿಷತ್ತಿನ ಅಧ್ಯಕ್ಷರು ಪ್ರಾಧ್ಯಾಪಕರಾಗಿದ್ದರೆ, ಅವರು ಮತ್ತು ಅವರು ಪ್ರಾಧ್ಯಾಪಕರಾಗಿರದಿದ್ದರೆ, ಅದೇ ವಿಭಾಗದ ಒಬ್ಬ ಪ್ರಾಧ್ಯಾಪಕರು, ಮತ್ತು ಆ ವಿಭಾಗದಲ್ಲಿ ಪ್ರಾಧ್ಯಾಪಕರು ಇರದಿದ್ದರೆ, ರಾಜ್ಯದಲ್ಲಿ ಯಾವುದೇ ಇತರ ವಿಶ್ವವಿದ್ಯಾಲಯದ ಅದೇ ವಿಭಾಗದ, ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬರು ಪ್ರಾಧ್ಯಾಪಕರು ಮತ್ತು ರಾಜ್ಯದಲ್ಲಿಯ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಿರದಿದ್ದರೆ, ರಾಜ್ಯದೊಳಗಿನ ಕೇಂದ್ರೀಯ ಸಂಸ್ಥೆಯ ಅಥವಾ ಯಾವುದೇ ಇತರ ರಾಜ್ಯದಲ್ಲಿಯ ವಿಶ್ವವಿದ್ಯಾಲಯದಿಂದ ಸಂಬಂಧಪಟ್ಟ ವಿಭಾಗದ, ಸರ್ಕಾರವು ನಾಮನಿರ್ದೇಶಿಸುವ ಒಬ್ಬರು ಪ್ರಾಧ್ಯಾಪಕರು.

(ಸಿ) ಗ್ರಂಥಪಾಲ ಹುದ್ದೆಯ ಆಯ್ಕೆಗಾಗಿ ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ ಪದನಿಮಿತ್ತ-ಅಧ್ಯಕ್ಷರು;

(ii) ವಿಶ್ವವಿದ್ಯಾಲಯ ಅನುದಾನ ಆಯೋಗದ ಪಟ್ಟಿಯಿಂದ ಕುಲಾಧಿಪತಿಯವರು ನಾಮನಿರ್ದೇಶನ ಮಾಡುವ ಮೂವರು ಗ್ರಂಥಾಲಯ ತಜ್ಞರು, ಇವರಲ್ಲಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತೊಬ್ಬ ವ್ಯಕ್ತಿ ಇರತಕ್ಕದ್ದು.

(iii) ರಾಜ್ಯದ ಯಾವುದೇ ಇತರ ವಿಶ್ವವಿದ್ಯಾಲಯದ ಗ್ರಂಥಾಲಯದ ಗ್ರಂಥಪಾಲರ ಪೈಕಿಯಿಂದ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ಗ್ರಂಥಪಾಲರು ಮತ್ತು ರಾಜ್ಯದಲ್ಲಿಯ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂಥ ಗ್ರಂಥಪಾಲರು ಲಭ್ಯವಿರದಿದ್ದರೆ, ರಾಜ್ಯದೊಳಗಿನ ಕೇಂದ್ರೀಯ ಸಂಸ್ಥೆಯ ಒಬ್ಬ ಗ್ರಂಥಪಾಲರು.

(3) ಕುಲಸಚಿವರು ಮಂಡಳಿಯ ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

(4) ಆಯ್ಕೆಯ ಮೂಲಕ ಭರ್ತಿ ಮಾಡಬೇಕಾದ ಪ್ರಾಧ್ಯಾಪಕ, ಸಹ-ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ ಅಥವಾ ಉಪನ್ಯಾಸಕರ ಪ್ರತಿಯೊಂದು ಹುದ್ದೆಯನ್ನು, ಕನಿಷ್ಠ ಮತ್ತು ಇತರ ಅರ್ಹತೆಗಳು, ಅನುಭವ, ವೇತನ ಶ್ರೇಣಿ, ಹುದ್ದೆಗಳ ಸಂಖ್ಯೆ, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಖಾಲಿ ಸ್ಥಾನಗಳ ವರ್ಗೀಕರಣ, ಇವುಗಳೊಂದಿಗೆ ವ್ಯಾಪಕವಾಗಿ ಜಾಹಿರಾತು ಮಾಡತಕ್ಕದ್ದು:

ಪರಂತು, ಈಗಾಗಲೇ ವಿಶ್ವವಿದ್ಯಾಲಯದ ಸೇವೆಗಳಲ್ಲಿರುವ, ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಮತ್ತು ಜಾಹಿರಾತುಗಳಲ್ಲಿ ನಿರ್ದಿಷ್ಟಪಡಿಸಿರುವ ಇತರ ಅಗತ್ಯತೆಗಳನ್ನು ಪೂರೈಸುವಂಥ ಅಧ್ಯಾಪಕರನ್ನು ಸಹ ಸಂದರ್ಶನಕ್ಕೆ ಕರೆಯತಕ್ಕದ್ದು ಮತ್ತು ಅವರ ಪ್ರಕರಣಗಳನ್ನು ಇತರ ಅರ್ಜಿದಾರರಿಗೆ ಸಮಾನವಾಗಿ ಪರಿಗಣಿಸತಕ್ಕದ್ದು.

(5) ಮಂಡಳಿಯ ಸಭೆಗೆ ಕೋರಂ ನಾಲ್ಕು ಆಗಿರತಕ್ಕದ್ದು. ಅವರ ಪೈಕಿ ಪ್ರಾಧ್ಯಾಪಕರ, ಸಹ- ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಮತ್ತು ಗ್ರಂಥಪಾಲರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ, ಕನಿಷ್ಠ ಪಕ್ಷ ಇಬ್ಬರು ತಜ್ಞರು ಇರತಕ್ಕದ್ದು ಮತ್ತು ಇತರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕನಿಷ್ಠ ಪಕ್ಷ ಒಬ್ಬ ತಜ್ಞರು ಇರತಕ್ಕದ್ದು.

(6) ಮಂಡಳಿಯು ಸಂದರ್ಶನವನ್ನು ನಡೆಸತಕ್ಕದ್ದು ಮತ್ತು ಜಾಹೀರಾತು ಮಾಡಿದ ಅರ್ಹತೆಗಳನ್ನು ಹೊಂದಿರುವುದರ ಮತ್ತು ಸಂದರ್ಶನದಲ್ಲಿಯ ನಿರ್ವಹಣೆಗೆ ಅನುಸಾರವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಹತೆಯನ್ನು ನಿರ್ಣಯಿಸತಕ್ಕದ್ದು. ಸಂದರ್ಶನದ ವಿಧಾನವು ಪರಿನಿಯಮಗಳು ನಿಯಮಿಸಿದಂತೆ ಇರತಕ್ಕದ್ದು.

(7) ಮಂಡಳಿಯು, ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅವರು ಅರ್ಹತಾದಾಯಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಶೇಕಡವಾರಿನ, ಹೆಚ್ಚಿನ ವಿದ್ಯಾರ್ಹತೆಗಾಗಿ ನೀಡಲಾದ ವೈಟೇಜಿನ ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾದಂತೆ ಆದ್ಯತಾನುಕ್ರಮದಲ್ಲಿ ನಮೂದಿಸತಕ್ಕದ್ದು. ಆಯ್ಕೆ ಪಟ್ಟಿಯನ್ನು ಸಿಂಡಿಕೇಟಿಗೆ ಕಳುಹಿಸತಕ್ಕದ್ದು. ನಂತರ ಸಿಂಡಿಕೇಟ್ ಅದನ್ನು ಪರಿಗಣಿಸಿ ಅನುಮೋದಿಸತಕ್ಕದ್ದು. ಅನಂತರ ಸಿಂಡಿಕೇಟ್ ಆಯ್ಕೆ ಪಟ್ಟಿಯನ್ನು ಅನುಸರಿಸುವ ಮೂಲಕ ಆಯ್ಕೆಯಾದ ಮತ್ತು ಆದ್ಯತಾನುಕ್ರಮದಲ್ಲಿ ನಮೂದಿಸಲಾದ ಅಭ್ಯರ್ಥಿಗಳ ಪೈಕಿಯಿಂದ ನೇಮಕಾತಿಗಳನ್ನು ಮಾಡತಕ್ಕದ್ದು:

ಪರಂತು, ಸಿಂಡಿಕೇಟ್ ಮತ್ತು ನೇಮಕಾತಿ ಮಂಡಳಿಯ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ ಮತ್ತು ಆಯ್ಕೆ ಪಟ್ಟಿಯು ಅಧಿನಿಯಮದ ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅಥವಾ ವಿಶ್ವವಿದ್ಯಾಲಯ ಅನುದಾನ ಆಯೋಗದ ಅಥವಾ ಅದೇ ತರಹದ ಶಾಸನಬದ್ಧ ಪ್ರಾಧಿಕಾರಗಳು ಕಾಲಕಾಲಕ್ಕೆ ಹೊರಡಿಸಿದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಅದು ಹೊಸ ಸಂದರ್ಶನ ಮತ್ತು ಆಯ್ಕೆಗಾಗಿ ವಿಷಯವನ್ನು ಮಂಡಳಿಗಳಿಗೆ ವಾಪಸು ಕಳುಹಿಸತಕ್ಕದ್ದು.

(8) (7)ನೇ ಉಪಪ್ರಕರಣದ ಅಡಿಯಲ್ಲಿ ಪಟ್ಟಿಯನ್ನು ತಯಾರಿಸುವಾಗ ನೇಮಕಾತಿ ಮಂಡಳಿಯು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ನೇಮಕಾತಿ ಮತ್ತು ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(9) ವಿಶ್ವವಿದ್ಯಾಲಯದಲ್ಲಿ ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗ ಅಥವಾ ಯಾವುದೇ ಹೊಸ ವಿಭಾಗವನ್ನು ತೆರೆದಾಗಲೆಲ್ಲ ಅಂಥ ವಿಷಯದಲ್ಲಿ ಅಥವಾ ಸಂದರ್ಭಾನುಸಾರ ಅಂಥ ವಿಭಾಗದಲ್ಲಿ ಪ್ರಾಧ್ಯಾಪಕ, ಸಹ-ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕರ ಮತ್ತು ಉಪನ್ಯಾಸಕರ ನೇಮಕವನ್ನು ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾಡತಕ್ಕದ್ದು.

(10) ಹಿಂದಿನ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಸಿಂಡಿಕೇಟು, ಕುಲಪತಿಯವರ ಶಿಫಾರಸ್ಸಿನ ಮೇಲೆ ಜಾನಪದ ಕ್ಷೇತ್ರದಲ್ಲಿ ಉನ್ನತ ಶೈಕ್ಷಣಿಕ ಅರ್ಹತೆ ಮತ್ತು ವೃತ್ತಿ ಸಾಧನೆಗಳನ್ನು ಪಡೆದಿರುವ ವ್ಯಕ್ತಿಯನ್ನು ಅಥವಾ ಯಾವ ತಾಂತ್ರಿಕ ಅರ್ಹತೆಗಳನ್ನೂ ಗಳಿಸಿಲ್ಲದ ಆದರೆ ವೃತ್ತಿ ನೈಪುಣ್ಯತೆಯನ್ನು ಸಾಧಿಸಿರುವ ಜಾನಪದ ಪ್ರತಿಭಾಶಾಲಿಯನ್ನು ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಲು ಪರಸ್ಪರ ಒಪ್ಪಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಆಹ್ವಾನಿಸಲು ಸಕ್ಷಮವಾಗಿರತಕ್ಕದ್ದು. ಒಂದು ನಿಗದಿತ ಅವಧಿಯಲ್ಲಿ ಅಂಥ ಸಂದರ್ಶಕ ಪ್ರಾಧ್ಯಾಪಕರುಗಳು ಹದಿನಾಲ್ಕಕ್ಕಿಂತ ಹೆಚ್ಚಿಗೆ ಇರತಕ್ಕದ್ದಲ್ಲ.

53. ಬಡ್ತಿ ಯೋಜನೆಗಳಿಗನುಸಾರ ನೇಮಕಾತಿ.- (1) 52ನೇ ಪ್ರಕರಣದಲ್ಲಿ ಏನೇ ಇದ್ದರೂ ಆದರೆ, ಸಂವಿಧಾನದ ಅನುಚ್ಛೇದ 16(4) ಮತ್ತು 15(4ಎ) ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ನೇಮಕ ಮತ್ತು ಹುದ್ದೆಗಳಿಗೆ ಸಂಬಂಧಿಸಿದ ಮೀಸಲಾತಿ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಲಾದ ನಿಯಮಗಳು ಮತ್ತು ಆದೇಶಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಹ-ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು ಹಾಗೂ ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರು, ಸಹಾಯಕ ಪ್ರಾಧ್ಯಾಪಕರು ಮತ್ತು ಉಪನ್ಯಾಸಕರ ಹುದ್ದೆಗೆ ನೇಮಕವನ್ನು ಸಿಂಡಿಕೇಟು, ವಿಶ್ವವಿದ್ಯಾಲಯ ಅನುದಾನ ಆಯೋಗವು ರೂಪಿಸಿದ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿರುವ ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಬಡ್ತಿಗಳಿಗೆ ಸಂಬಂಧಿಸಿದ ಯೋಜನೆಯ ಪ್ರಕಾರ ಮಾಡತಕ್ಕದ್ದು.

(2) ಆಯ್ಕೆಯು ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ವಿಧಿ ವಿಧಾನ ಮತ್ತು ಮಾರ್ಗದರ್ಶಿ ಸೂತ್ರಗಳಿಗೊಳಪಟ್ಟು ಇರತಕ್ಕದ್ದು.

54. ತಾತ್ಕಾಲಿಕ ನೇಮಕಾತಿ.-(1) 52, 53 ಮತ್ತು 55ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಕುಲಪತಿಯವರ, ತಾತ್ಕಾಲಿಕವಾಗಿಯಾಗಲೀ ಅಥವಾ 52, 53 ಮತ್ತು 55ನೇ ಪ್ರಕರಣಗಳಿಗೆ ಅನುಸಾರವಾಗಿ ನೇಮಕಾತಿಗಳನ್ನು ಮಾಡಲಾಗದಂಥ ಉಪನ್ಯಾಸಕರ ಹುದ್ದೆಗಳಿಗೆ ಮತ್ತು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ, ವಿಳಂಬವಿಲ್ಲದೆ, ಒಂದು ವರ್ಷಕ್ಕೆ ಮೀರದ ಅವಧಿಗೆ ತಾತ್ಕಾಲಿಕ ನೇಮಕಾತಿಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಾತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮತ್ತು ಪರಿನಿಯಮಗಳ ಮೂಲಕ ನಿಯಮಿಸಲಾದ ವಿಧಾನದಲ್ಲಿ ಮಾತ್ರ ಮಾಡತಕ್ಕದ್ದು.

55. ಆಡಳಿತ, ಲಿಪಿಕ ಮತ್ತು ಇತರ ಸಿಬ್ಬಂದಿಯ ನೇಮಕ.– (1) ವಿಶ್ವವಿದ್ಯಾಲಯದಲ್ಲಿ ಆಡಳಿತ, ಲಿಪಿಕ ಮತ್ತು ಇತರ ಹುದ್ದೆಗಳ ನೇಮಕಾತಿಗಾಗಿ ಅಭ್ಯರ್ಥಿಗಳ ಆಯ್ಕೆಗೆ ಒಂದು ನೇಮಕಾತಿ ಮಂಡಳಿಯನ್ನು ರಚಿಸತಕ್ಕದ್ದು.

(2) ಮಂಡಳಿಯು,–

(i) ಕುಲಪತಿ ಪದನಿಮಿತ್ತ–ಅಧ್ಯಕ್ಷರು;

(ii) ಶೈಕ್ಷಣಿಕ ಪರಿಷತ್ತಿನಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯರು;

(iii) ಸಿಂಡಿಕೇಟಿನಿಂದ ನಾಮನಿರ್ದೇಶಿತರಾದ ಒಬ್ಬ ಸದಸ್ಯರು;

(iv) ಮೂವರು ಆಡಳಿತ ತಜ್ಞರು;

(v) ಕುಲಪತಿಯವರು ನಾಮನಿರ್ದೇಶಿಸಿದ ಒಬ್ಬ ತಜ್ಞರು;

(vi) ಕುಲಸಚಿವರು,

–ಇವರುಗಳನ್ನು ಒಳಗೊಂಡಿರತಕ್ಕದ್ದು.

(3) ಮಂಡಳಿಯು, ನೇರನೇಮಕಾತಿಯ ಖಾಲಿ ಸ್ಥಾನಗಳ ನೇಮಕಾತಿಗೆ ಅಭ್ಯರ್ಥಿಗಳ ಪಟ್ಟಿಯನ್ನು, ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡಾವಾರು ಅಂಕಗಳು ಮತ್ತು ಸಂದರ್ಶನದಲ್ಲಿ ನೀಡಲಾದ ಅಂಕಗಳ ಆಧಾರದ ಮೇಲೆ ನಿರ್ಧರಿಸಿದಂತೆ ಆಧರಿಸಿ, ಆಯ್ಕೆಗಾಗಿ ಮೆರಿಟ್ ಕ್ರಮದಲ್ಲಿ ಹೆಸರುಗಳನ್ನು ಜೋಡಿಸಿ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(4) (3)ನೇ ಉಪಪ್ರಕರಣದ ಅಡಿಯಲ್ಲಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನೇಮಕಾತಿಗಳು ಅಥವಾ ಹುದ್ದೆಗಳನ್ನು ಮೀಸಲಿಡುವ ವಿಷಯದಲ್ಲಿ ಕಾಲಕಾಲಕ್ಕೆ ಸರ್ಕಾರವು, ಸಂವಿಧಾನದ 16(4)ನೇ ಅನುಚ್ಛೇದದಡಿಯಲ್ಲಿ ಹೊರಡಿಸಬಹುದಾದಂಥ ನಿಯಮಗಳನ್ನು ಅಥವಾ ಆದೇಶಗಳನ್ನು ಮಂಡಳಿಯು ಅನುಸರಿಸತಕ್ಕದ್ದು.

(5) ಸಿಂಡಿಕೇಟು, ಹೆಸರುಗಳನ್ನು ಮೆರಿಟ್ ಕ್ರಮದಲ್ಲಿ ಮಂಡಳಿಯು ಸಿದ್ಧಪಡಿಸಿದ ಆಯ್ಕೆ ಪಟ್ಟಿಯನ್ನು ಅನುಸರಿಸುವ ಮೂಲಕ, ಎಲ್ಲಾ ನೇಮಕಾತಿಗಳನ್ನು ಮಾಡತಕ್ಕದ್ದು. ಮಂಡಳಿ ಮತ್ತು ಸಿಂಡಿಕೇಟ್‌ನ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದರೆ ಆ ವಿಷಯವನ್ನು ಸರ್ಕಾರದ ಶಿಕ್ಷಣ ಇಲಾಖೆಯ ಮೂಲಕ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಉಲ್ಲೇಖಿಸಿದ ಅಂಥ ವಿಷಯದ ಮೇಲೆ ಕುಲಾಧಿಪತಿಯವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(6) ಸಭೆಯ ಕೋರಂ ನಾಲ್ಕು ಆಗಿರತಕ್ಕದ್ದು.

ಅಧ್ಯಾಯ – IX

ಕೆಲವು ಸಂಸ್ಥೆಗಳಿಗೆ ಮನ್ನಣೆ

56. ಕೆಲವು ಸಂಸ್ಥೆಗಳ ಮನ್ನಣೆ.– (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ಪರಿಣಿತ ಅಧ್ಯಯನಗಳನ್ನು ನಡೆಸುವ ಸಂಸ್ಥೆಯನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಜಾನಪದ ಸಂಗ್ರಹಣೆ, ಸಂರಕ್ಷಣೆ ಹಾಗೂ ಸಂವರ್ಧನ ಕಾರ್ಯದಲ್ಲಿ ತೊಡಗಿಕೊಂಡಿರುವ ಯಾವುದೇ ಸಂಸ್ಥೆಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ರೀತಿಯಲ್ಲಿ ಹಾಗೂ ಅಂಥ ಷರತ್ತುಗಳಿಗೆ ಒಳಪಟ್ಟು, ಸಿಂಡಿಕೇಟು, ಮನ್ನಣೆ ಪಡೆದ ಸಂಸ್ಥೆಯೆಂದು ಮನ್ನಣೆ ನೀಡಬಹುದು.

(2) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಕಾರಣಗಳಿಗಾಗಿ, ಅಂಥ ಮನ್ನಣೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟುಮಾಡಬಹುದು.

57. ಸಂಸ್ಥೆಗಳ ಪರಿವೀಕ್ಷಣೆ.– (1) ಖಾಯಂ ಆಗಿ ಮನ್ನಣೆ ಪಡೆದ ಸಂಸ್ಥೆಯೂ ಒಳಗೊಂಡಂತೆ ಮನ್ನಣೆ ಪಡೆದ ಪ್ರತಿಯೊಂದು ಸಂಸ್ಥೆಯು, ಸಿಂಡಿಕೇಟು ಶೈಕ್ಷಣಿಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಸಂಸ್ಥೆಯ ದಕ್ಷತೆಯನ್ನು ಮತ್ತು ಸಂಸ್ಥೆಯು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ತೀರ್ಮಾನಿಸುವುದಕ್ಕೆ, ಅಗತ್ಯಪಡಿಸಬಹುದಾದ ಅಂಥ ವರದಿಗಳನ್ನು, ವಿವರ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ಕುಲಸಚಿವರಿಗೆ ಒದಗಿಸತಕ್ಕದ್ದು.

(2) ಸಿಂಡಿಕೇಟು, ಅಂಥ ಪ್ರತಿಯೊಂದು ಸಂಸ್ಥೆಯನ್ನು, ಈ ಉದ್ದೇಶಕ್ಕಾಗಿ ರಚಿತವಾದ ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಸಿಂಡಿಕೇಟು, ಹಾಗೆ ಪರಿವೀಕ್ಷಿಸಲಾದ ಯಾವುದೇ ಸಂಸ್ಥೆಯನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ತನಗೆ ಅವಶ್ಯವೆಂದು ಕಂಡು ಬರಬಹುದಾದ ಅಂಥ ಕ್ರಮ ಕೈಗೊಳ್ಳಲು ಕೋರಬಹುದು.

(4) ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಅದಕ್ಕೆ ಪೂರಕವಾದ ಎಲ್ಲಾ ವಿಷಯಗಳ ಸಂಬಂಧವಾಗಿ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪ್ರತಿಯೊಂದು ಸಂಸ್ಥೆಯು ಪಾಲಿಸತಕ್ಕದ್ದು.

ಅಧ್ಯಾಯ – X

ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

58. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ.–ಯಾವೊಬ್ಬ ವಿದ್ಯಾರ್ಥಿಯು, ಕಾಲಕಾಲಕ್ಕೆ ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಅರ್ಹತೆಗಳನ್ನು ಜಾನಪದ ಕ್ಷೇತ್ರದಲ್ಲಿ ಅವರು ಹೊಂದಿದ್ದ ಹೊರತು, ಪದವಿ ಅಥವಾ ಡಿಪ್ಲೊಮಾ ಅಧ್ಯಯನ ಕ್ರಮಗಳ ಪ್ರವೇಶಕ್ಕೆ ಅರ್ಹರಾಗಿರತಕ್ಕದ್ದಲ್ಲ.

59. ಗೌರವ ಪದವಿಗಳು.– (1) ಸಿಂಡಿಕೇಟ್‌ನ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಅವರ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ ಅಂಥ ಗೌರವ ಪದವಿ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ಶೈಕ್ಷಣಿಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಸಿಂಡಿಕೇಟು, ಸಂಬಂಧಪಟ್ಟ ವ್ಯಕ್ತಿಗೆ ಅಂಥ ಪದವಿಯನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.

(2) ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡಬಹುದು. ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಮೌಖಿಕ ಜಾನಪದ, ಜಾನಪದ ಕಲೆಗಳ ಅಧ್ಯಯನ, ಜಾನಪದ ಸಂಗೀತ ಅಥವಾ ಜಾನಪದ ಅಧ್ಯಯನದ ವ್ಯಾಸಂಗ ವಿಭಾಗಗಳಿಗೆ ವಹಿಸಿದ ಯಾವುದೇ ಇತರೆ ವಿಷಯದಲ್ಲಿನ, ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು.

60. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.– (1) ಯಾವೊಬ್ಬ ವ್ಯಕ್ತಿಯು, ಒಂದು ಪದವಿಯನ್ನು ಅಥವಾ ಡಿಪ್ಲೊಮಾವನ್ನು ಅಥವಾ ಸರ್ಟಿಫಿಕೇಟನ್ನು ಮೋಸದಿಂದ ಅಥವಾ ಸುಳ್ಳು ಜಾತಿ ಪ್ರಮಾಣಪತ್ರದ ಮೂಲಕ ಪ್ರವೇಶವನ್ನು ಪಡೆದುಕೊಂಡಿದ್ದಾನೆಂದು ಕಂಡುಬಂದರೆ, ಸಿಂಡಿಕೇಟಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಮೂರನೇ ಎರಡರಷ್ಟಕ್ಕೆ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ನಿರ್ಣಯವನ್ನು ಅಂಗೀಕರಿಸುವ ಮೂಲಕ, ಶೈಕ್ಷಣಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಸಿಂಡಿಕೇಟ್, ಅಂಥ ಯಾವೊಬ್ಬ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಈ ಪ್ರಕರಣದ ಅಡಿಯಲ್ಲಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವರಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(3) ಸಿಂಡಿಕೇಟು ಅಂಗೀಕರಿಸಿದ ನಿರ್ಣಯದ ಒಂದು ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಕೂಡಲೇ ಕಳುಹಿಸತಕ್ಕದ್ದು.

(4) ಸಿಂಡಿಕೇಟು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಕುಲಾಧಿಪತಿಗೆ ಮೇಲ್ಮನವಿಯನ್ನು ಸಲ್ಲಿಸಬಹುದು.

(5) ಅಂಥ ಮೇಲ್ಮನವಿಯ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಅಧ್ಯಾಯ – XI

ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

61. ಶಿಸ್ತು.– (1) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಯ್ದುಕೊಂಡು ಬರುವ ಅಂತಿಮ ಪ್ರಾಧಿಕಾರಿಯು ಕುಲಪತಿಯಾಗಿರತಕ್ಕದ್ದು. ಈ ಸಂಬಂಧದಲ್ಲಿ ಅವರ ನಿರ್ದೇಶನಗಳನ್ನು ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಸಂಸ್ಥೆಗಳ ಮತ್ತು ವಿದ್ಯಾರ್ಥಿನಿಲಯಗಳ ಮುಖ್ಯಸ್ಥರು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,–

(i) ಪರೀಕ್ಷೆಗಳಿಂದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡುವ ಶಿಕ್ಷೆಯನ್ನು, ಕುಲಪತಿಯ ವರದಿಯ ಮೇಲೆ ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ವಿಧಿಸತಕ್ಕದ್ದು; ಮತ್ತು

(ii) ಸಂಸ್ಥೆಯಿಂದ ಅಥವಾ ವಿದ್ಯಾರ್ಥಿನಿಲಯದಿಂದ ತಾತ್ಕಾಲಿಕವಾಗಿ ಹೊರಹಾಕುವ ಶಿಕ್ಷೆಯನ್ನು, ಸಂಬಂಧಪಟ್ಟ ಸಂಸ್ಥೆಯ ಅಥವಾ ವಿದ್ಯಾರ್ಥಿನಿಲಯದ ಮುಖ್ಯಸ್ಥರು ವಿಧಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ನಿರ್ಣಯವನ್ನು, ಯಾವೊಬ್ಬ ಸದಸ್ಯರಿಗೆ ನೋಟೀಸನ್ನು ಜಾರಿ ಮಾಡುವಲ್ಲಿಯ ಯಾವುದೇ ಅಕ್ರಮತೆಯ ಕಾರಣದಿಂದಾಗಿ ಅಸಿಂಧುವೆಂದು ಭಾವಿಸತಕ್ಕದ್ದಲ್ಲ:

ಪರಂತು, ಅಂಥ ಪ್ರಾಧಿಕಾರದ ಅಥವಾ ನಿಕಾಯದ ನಡವಳಿಗಳು, ಅಂಥ ಅಕ್ರಮತೆಯಿಂದ ಪ್ರತಿಕೂಲವಾಗಿ, ಬಾಧಕವಾಗತಕ್ಕದ್ದಲ್ಲ.

62. ಈ ಅಧಿನಿಯಮವು ಇತರ ಅಧಿನಿಯಮಗಳ ಮೇಲೆ ಹೆಚ್ಚಿನ ಪ್ರಭಾರವುಳ್ಳದ್ದಾಗಿರುವುದು.– ಈ ಅಧಿನಿಯಮವು ಮತ್ತು ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು ಅಥವಾ ವಿನಿಯಮಗಳು ಅಥವಾ ನಿಯಮಗಳು ಅಥವಾ ಆರ್ಡಿನೆನ್ಸ್‌ಗಳು, . ವಿಶ್ವವಿದ್ಯಾಲಯದ ಪ್ರದೇಶದಲ್ಲಿರುವ ಯಾವುದೇ ಸಂಸ್ಥೆಯ ಸಂಬಂಧದಲ್ಲಿ, ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಮೂದು ಮಾಡಿದ ವಿಷಯಗಳ ಸಂಬಂಧದಲ್ಲಿ ಯಾವುದೇ ಇತರ ಅಧಿನಿಯಮದಲ್ಲಿ ಇದಕ್ಕೆ ಅಸಂಗತವಾದುದೇನೇ ಒಳಗೊಂಡಿದ್ದರೂ ಪರಿಣಾಮವುಳ್ಳವುಗಳಾಗಿರತಕ್ಕದ್ದು.

63. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಮಯಗಳು ಅಥವಾ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಅಥವಾ ಅದರ ಪ್ರಾಧಿಕಾರಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕದ್ದಲ್ಲ ಮತ್ತು ಅದರಿಂದ ಯಾವುದೇ ಹಾನಿಗಳನ್ನು ಕ್ಲೇಮು ಮಾಡತಕ್ಕದ್ದಲ್ಲ.

64. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ವ್ಯವಹರಣೆಗಳು ಖಾಲಿಸ್ಥಾನಗಳು ಇರುವುದರಿಂದಾಗಿ ಅಸಿಂಧುವಾಗತಕ್ಕದ್ದಲ್ಲ.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಯಾವುದೇ ಖಾಲಿಸ್ಥಾನ ಇದೆ ಎಂಬ ಅಥವಾ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ರಚನೆಯಲ್ಲಿಯ ಅಥವಾ ಸದಸ್ಯರ ನೇಮಕಾತಿಯಲ್ಲಿಯ ಯಾವುದೇ ದೋಷ ಅಥವಾ ಅಕ್ರಮತೆಯ ಅಥವಾ ಪ್ರಕರಣದ ಗುಣಗಳಿಗೆ ಬಾಧಕವಾಗದ, ಅಂಥ ಕೃತ್ಯ ಅಥವಾ ವ್ಯವಹರಣೆಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

65. ವಿಶ್ವವಿದ್ಯಾಲಯದ ಸದಸ್ಯತ್ವದಿಂದ ತೆಗೆದುಹಾಕುವುದು.– (1) ಸಿಂಡಿಕೇಟ್, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅಂಥ ವ್ಯಕ್ತಿಯು, ಸಿಂಡಿಕೇಟ್‌ನ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಸಿದ್ಧದೋಷಿಯಾಗಿದ್ದರೆ ಅಥವಾ ಗುರುತರ ದುರ್ವರ್ತನೆಯ ದೋಷಿಯಾಗಿದ್ದರೆ, ಸಿಂಡಿಕೇಟ್‌ನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಸಿಂಡಿಕೇಟ್‌ನ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರಿಗಿಂತ ಕಡಿಮೆಯಿಲ್ಲದ ಬಹುಮತದಿಂದ ಒಂದು ನಿರ್ಣಯವನ್ನು ಅಂಗೀಕರಿಸಿ ಆ ಬಗ್ಗೆ ಲಿಖಿತದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ತೆಗೆದುಹಾಕಬಹುದು ಮತ್ತು ಅದೇ ಕಾರಣಕ್ಕಾಗಿ ಸಿಂಡಿಕೇಟ್, ವಿಶ್ವವಿದ್ಯಾಲಯವು ಆ ವ್ಯಕ್ತಿಗೆ ಪ್ರದಾನ ಮಾಡಿರುವ ಅಥವಾ ನೀಡಿರುವ ಯಾವುದೇ ಪದವಿ ಅಥವಾ ಡಿಪ್ಲೊಮಾವನ್ನು ಹಿಂತೆಗೆದುಕೊಳ್ಳಬಹುದು.

(2) ಸಿಂಡಿಕೇಟ್, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅವನು ಅಸ್ವಸ್ಥಚಿತ್ತದವನಾದರೆ ಅಥವಾ ದಿವಾಳಿಯೆಂದು ನ್ಯಾಯ ನಿರ್ಣಯಿಸಬೇಕೆಂದು ಅರ್ಜಿ ಸಲ್ಲಿಸಿದ್ದರೆ ಅಥವಾ ಹಾಗೆಂದು ನ್ಯಾಯ ನಿರ್ಣೀತರಾಗಿದ್ದರೆ, ಆ ಬಗ್ಗೆ ಹೊರಡಿಸಲಾದ ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು.

(3) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವರಿಗೆ ಒಂದು ಯುಕ್ತ ಅವಕಾಶವನ್ನು ನೀಡದ ಹೊರತು, ಅವರ ಮೇಲೆ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) (1)ನೇ ಉಪಪ್ರಕರಣದ ಅಥವಾ ಸಂದರ್ಭಾನುಸಾರ (2)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು, ಅದನ್ನು ಹಾಗೆ ಹೊರಡಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ನಿಯಮಿಸಲಾದ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಕಳುಹಿಸತಕ್ಕದ್ದು.

66. ವಿಶ್ವವಿದ್ಯಾಲಯದೊಡನೆ ಮನ್ನಣೆ ಪಡೆದ ಸಂಸ್ಥೆಗಳ ಸಂಬಂಧ.– ವಿಶ್ವವಿದ್ಯಾಲಯದೊಡನೆ ಮನ್ನಣೆ ಪಡೆದ ಸಂಸ್ಥೆಗಳ ಸಂಬಂಧವು, ಈ ಸಂಬಂಧದಲ್ಲಿ ರಚಿಸಲಾಗುವ ಪರಿನಿಯಮಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಪರಿನಿಯಮಗಳು, ವಿಶೇಷವಾಗಿ, ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಸಂಸ್ಥೆಗಳ ಸಂಬಂಧದಲ್ಲಿ ಗ್ರಂಥಾಲಯಗಳು, ಪ್ರಯೋಗ ಶಾಲೆಗಳು ಮತ್ತು ಬೋಧನೆ ಮತ್ತು ಸಂಶೋಧನೆಗಾಗಿ ಇತರ ಸಲಕರಣೆಗಳ ಸಂಬಂಧದಲ್ಲಿ ಅಂಥ ಸಂಸ್ಥೆಗಳು ಒದಗಿಸಿದ ಸೌಲಭ್ಯಗಳು ಮತ್ತು ಆ ಬಗ್ಗೆ ವಹಿಸಿದ ವೆಚ್ಚದ ಸಂಬಂಧದಲ್ಲಿ ಸಮನ್ವಯ ಮತ್ತು ನಿಯಂತ್ರಣ ಮಾಡಲು ಅಧಿಕಾರಗಳನ್ನು ವಿಶ್ವವಿದ್ಯಾಲಯವು ಚಲಾಯಿಸತಕ್ಕದ್ದು.

67. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಪಟ್ಟ ವಿವಾದಗಳು.– ಯಾವೊಬ್ಬ ವ್ಯಕ್ತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಇತರ ನಿಕಾಯದ ಸದಸ್ಯನಾಗಿ ಯಥೋಚಿತವಾಗಿ ನಾಮನಿರ್ದೇಶಿತ ನಾಗಿದ್ದಾನೆಯೇ ಅಥವಾ ಸದಸ್ಯನಾಗಿರಲು ಹಕ್ಕುಳ್ಳವರಾಗಿದ್ದಾನೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಪ್ರಶ್ನೆಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

68. ಸಮಿತಿಗಳ ರಚನೆ.– ವಿಶ್ವವಿದ್ಯಾಲಯದ ಎಲ್ಲ ಪ್ರಾಧಿಕಾರಗಳು, ಸಮಿತಿಗಳನ್ನು ರಚಿಸಲು ಅಥವಾ ಪುನರ್‌ರಚಿಸಲು ಮತ್ತು ಅವು ಉಚಿತವೆಂದು ಭಾವಿಸುವ ತಮ್ಮ ಅಂಥ ಅಧಿಕಾರಗಳನ್ನು ಅವುಗಳಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕದ್ದು. ಅಂಥ ಸಮಿತಿಗಳು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಸಂಬಂಧಪಟ್ಟ ಪ್ರಾಧಿಕಾರದ ಸದಸ್ಯರನ್ನು ಮತ್ತು ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ವ್ಯಕ್ತಿಗಳು ಯಾರಾದರೂ ಇದ್ದರೆ, ಅವರನ್ನು ಒಳಗೊಂಡಿರತಕ್ಕದ್ದು.

69. ಮಾಹಿತಿಗಳನ್ನು ಪಡೆಯಲು ಅಧಿಕಾರ.– ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾಲಯದಿಂದ ಲಿಖಿತ ಆದೇಶದ ಮೂಲಕ ತರಿಸಿಕೊಳ್ಳಬಹುದು ಮತ್ತು ವಿಶ್ವವಿದ್ಯಾಲಯವು, ಅಂಥ ಮಾಹಿತಿಯು ಲಭ್ಯವಿದ್ದಲ್ಲಿ ಯುಕ್ತ ಅವಧಿಯೊಳಗೆ ಅಂಥ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು:

ಪರಂತು, ವಿಶ್ವವಿದ್ಯಾಲಯವು ರಹಸ್ಯವೆಂದು ಪರಿಗಣಿಸುವ ಮಾಹಿತಿಯ ಸಂದರ್ಭದಲ್ಲಿ, ವಿಶ್ವವಿದ್ಯಾಲಯವು ಅದನ್ನು ಸಹ ಕುಲಾಧಿಪತಿಗಳ ಮುಂದೆ ಇಡಬಹುದು.

70. ಪ್ರಥಮ ಕುಲಪತಿಯವರ ನೇಮಕಾತಿ.– 13ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಸರ್ಕಾರವು, ಪ್ರಥಮ ಕುಲಪತಿಯವರನ್ನು ನಾಲ್ಕು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು:

ಪರಂತು, ಪ್ರಥಮ ಕುಲಪತಿಯವರಾಗಿ ನೇಮಕಗೊಂಡ ವ್ಯಕ್ತಿಯು, ತನ್ನ ಪದಾವಧಿಯಲ್ಲಿ ಅರವತ್ತೇಳು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ್ದರೆ ತನ್ನ ಪದದಿಂದ ನಿವೃತ್ತನಾಗತಕ್ಕದ್ದು.

71. ಪ್ರಥಮ ಕುಲಪತಿಯವರ ತಾತ್ಕಾಲಿಕ ಅಧಿಕಾರಗಳು.– (1) ಸರ್ಕಾರವು, ಅಧಿಸೂಚನೆ ಮೂಲಕ ನಿರ್ದೇಶಿಸ ಬಹುದಾದಂತೆ, ಅಧಿಸೂಚಿತ ದಿನಾಂಕದಿಂದ ಆರು ತಿಂಗಳೊಳಗಾಗಿ ಅಥವಾ ಒಂದು ವರ್ಷಕ್ಕೆ ಮೀರದ ಅಂಥ ದೀರ್ಘ ಅವಧಿಯೊಳಗಾಗಿ, ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು, ಸಿಂಡಿಕೇಟ್ ಮತ್ತು ಅಂಥ ಇತರ ಪ್ರಾಧಿಕಾರಗಳನ್ನು ರಚಿಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

(2) ಪ್ರಥಮ ಕುಲಪತಿಯವರು, ಸರ್ಕಾರದೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗೆ ಅಗತ್ಯವಿರಬಹುದಾದ ಅಂಥ ನಿಯಮಗಳನ್ನು ರಚಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ರಚಿತವಾದ ಪ್ರಾಧಿಕಾರಗಳು, ಸರ್ಕಾರವು ಅಧಿಸೂಚನೆಯ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಂದು ಪ್ರಕಾರ್ಯಗಳನ್ನು ಚಲಾಯಿಸಲು ಪ್ರಾರಂಭ ಮಾಡತಕ್ಕದ್ದು.

(4) ಅವಶ್ಯವಿರಬಹುದಾದ ಅಂಥ ಪರಿನಿಯಮಗಳ ಕರಡನ್ನು ಸಿದ್ಧಪಡಿಸಿ, ಅನುಮೋದನೆಗಾಗಿ ಸಿಂಡಿಕೇಟ್‌ಗೆ ಒಪ್ಪಿಸುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು. ಅಂಥ ಪರಿನಿಯಮಗಳು ರಚಿತವಾದಾಗ ಅವುಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು.

(5) ಈ ಅಧಿನಿಯಮ ಮತ್ತು ಪರಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಒಂದು ಪ್ರಾಧಿಕಾರವು ಯಥೋಚಿತವಾಗಿ ರಚಿತವಾಗುವ ಅಂಥ ಕಾಲದವರೆಗೂ ಪ್ರಥಮ ಕುಲಪತಿಯವರು, ಈ ಅಧಿನಿಯಮ ಮತ್ತು ಪರಿನಿಯಮಗಳ ಅಡಿಯಲ್ಲಿ, ಅಂಥ ಪ್ರಾಧಿಕಾರದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಿಸಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

72. ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು ಸಾರ್ವಜನಿಕ ನೌಕರರಾಗಿರಬೇಕು.– ಕುಲಪತಿಯವರು, ಕುಲಸಚಿವರು, ಹಣಕಾಸು ಅಧಿಕಾರಿ ಮತ್ತು ವಿಶ್ವವಿದ್ಯಾಲಯದ ಇತರ ಉದ್ಯೋಗಿಗಳು, ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ, ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರಾಗಿರುವರೆಂದು ಭಾವಿಸತಕ್ಕದ್ದು.

73. ನೇಮಕಾತಿಯ ವಿಶೇಷ ವಿಧಾನ.– (1) ಸಿಂಡಿಕೇಟ್ ತಾನು ಉಚಿತವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಉನ್ನತ ವಿದ್ಯಾರ್ಹತೆ ಮತ್ತು ವೃತ್ತಿ ಪರಿಣತಿಯುಳ್ಳ ಒಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾಲಯದ ಅಧ್ಯಾಪಕ ಅಥವಾ ಸಂಶೋಧನಾಧಿಕಾರಿ ಹುದ್ದೆಯನ್ನು ಸ್ವೀಕರಿಸಲು ಆಹ್ವಾನಿಸಬಹುದು ಮತ್ತು ಹಾಗೆ ಮಾಡಲು ಆ ವ್ಯಕ್ತಿಯು ಒಪ್ಪಿಕೊಂಡ ಮೇಲೆ, ಕುಲಾಧಿಪತಿಯವರ ಅನುಮೋದನೆಗೆ ಒಳಪಟ್ಟು ಆ ಹುದ್ದೆಗೆ ಅವರನ್ನು ನೇಮಿಸಬಹುದು.

(2) ಸಿಂಡಿಕೇಟ್, ನಿಯಮಿಸಲಾದ ರೀತಿಗೆ ಅನುಸಾರವಾಗಿ ಸಂಯುಕ್ತ ಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ಇತರ ಯಾವುದೇ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕ ಅಥವಾ ಶೈಕ್ಷಣಿಕ ಸಿಬ್ಬಂದಿಯ ಇತರ ಯಾವೊಬ್ಬ ಸದಸ್ಯರನ್ನು ನೇಮಕ ಮಾಡಬಹುದು.

74. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯವರು, ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

75. ತೊಂದರೆಗಳನ್ನು ನಿವಾರಿಸಲು ಅಧಿಕಾರ.– (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ ಪುನರ್ ರಚನೆಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ಸೂಕ್ತವೆಂದು ತನಗೆ ಕಂಡು ಬರಬಹುದಾದಂತೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ಅಧಿಸೂಚನೆ ಮೂಲಕ ರಚಿಸಬಹುದು:

ಪರಂತು, ಅಂಥ ಯಾವುದೇ ಅಧಿಸೂಚನೆಯನ್ನು, ಈ ಅಧಿನಿಯಮದ ಆರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯದ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅಂಥ ಅವಧಿಯು ಮುಕ್ತಾಯವಾಗುವ ಮೊದಲು, ರಾಜ್ಯ ವಿಧಾನ ಮಂಡಲದ ಯಾವುದೇ ಒಂದು ಸದನವು ಯಾವುದೇ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ಅಧಿಸೂಚನೆಯು ಪರಿಣಾಮಕಾರಿಯಾಗಬಾರದೆಂದು ನಿರ್ದೇಶಿಸಿದರೆ ಮತ್ತು ಇನ್ನೊಂದು ಸದನವು ಅಂಥ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಒಪ್ಪಿದರೆ, ಅಂಥ ಅಧಿಸೂಚನೆಯು ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದತಿಯು ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರ ತಕ್ಕದ್ದಲ್ಲ.

76. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧ್ಯಾದೇಶ, 2011ನ್ನು (2011ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 01) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ.ಬೋರೇಗೌಡ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಸೋಮವಾರ, ಫೆಬ್ರವರಿ ೨೭, ೨೦೧೨ (ಫಾಲ್ಗುಣ ೮, ಶಕ ವರ್ಷ ೧೯೩೩)	ನಂ. ೧೩೮

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 28 ಇಕಾಅ 2012, ಬೆಂಗಳೂರು, ದಿನಾಂಕ: 27.02.2012

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 01) ರ 1ನೇ ಪ್ರಕರಣ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ಪೈಲಟ್ ಲಾಂಚ್ ಮಾಡಲಿರುವ ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕು, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಜಯನಗರ, ಬೆಂಗಳೂರು ಇವುಗಳಿಗೆ

ದಿನಾಂಕ 1ನೇ ಮಾರ್ಚ್ 2012 ನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ಜಾರಿಗೆ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಜಿ. ಶಶಿಕಲಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಆಸು–ನಾಗರಿಕ ಸೇವೆಗಳು)

PERSONNEL AND ADMINISTRATIVE REFORMS SECRETARIAT

NOTIFICATION

No.DPAR 28 EeKaAa 2012, Bangalore, Dated: 27th February 2012

In exercise of the powers conferred under Section (1) of sub-section (2) of the Karnataka Guarantee of Services to the Citizens Act, 2011 (Karnataka Act No. 1 of 2012), the State Government specify **1st of March 2012** to be the date of effect of the provisions of the Karnataka Guarantee of Services to the Citizens Act in the Four talukas viz., Dharwad Taluk of Dharwad District, Aurad Taluk of Bidar District, Chitradurga Taluk of Chitradurga District and Puttur Taluk of Dakshina Kannada District and Office of the Assistant Revenue Officer, Jayanagar, Bangalore of Bruhath Bangalore Mahanaraga Palike where pilot is being launched.

By Order and in the name of the Governor of Karnataka,

K.G.Shashikala
Under Secretary to Government
Department of Personnel & Administrative
Reforms (AR-Citizen Services)

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಸೋಮವಾರ, ಫೆಬ್ರವರಿ ೨೭, ೨೦೧೨ (ಫಾಲ್ಗುಣ ೮, ಶಕ ವರ್ಷ ೧೯೩೩	ನಂ. ೧೩೯

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 26 ಎಸ್ಎಂಆರ್ 2011, ಬೆಂಗಳೂರು, ದಿನಾಂಕ: 25.02.2012

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978 (1990 ರ ಕರ್ನಾಟಕ ಅಧಿನಿಯಮ 14) ರ 8 ನೇ ಪ್ರಕರಣದೊಂದಿಗೆ ಓದಲಾದ, 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಉದ್ದೇಶದಿಂದ ಈ ಮುಂದಿನ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 3 ನೇ ಪ್ರಕರಣದ (2) ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಮೇಲೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಯಾರೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು – 560001 ಇವರಿಗೆ ಸಲ್ಲಿಸಬಹುದು.

ಕರಡು ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) (ತಿದ್ದುಪಡಿ) ನಿಯಮಗಳು 2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 2 ರ ತಿದ್ದುಪಡಿ:- ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 2 ರ 'ವಿವರಣೆ'ಯ ಖಂಡ (ii) ರಲ್ಲಿರುವ "ನಾಲ್ಕು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಆರು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ. ನಾಗೇಶ್ ಪಾಟಕ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 26 SMR 2011, Bangalore, dated: 25.02.2012

The draft of the following rules further to amend the Karnataka Government Servants' (Medical Attendance) Rules, 1963, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Principal Secretary to Government, Department of Personnel and Administrative Reforms, Vidhana Soudha, Bangalore - 560 001.

DRAFT RULES

1. Title and commencement:- (1) These rules may be called the Karnataka Government Servants' (Medical Attendance) (Amendment) Rules, 2012.

(2) They shall come into force from the date of their publication in the official Gazette.

2. Amendment of rule 2:- In the Karnataka Government Servants' (Medical Attendance) Rules, 1963, in rule 2, in 'Explanation', in clause (ii), for the words "four thousand rupees", the words "six thousand rupees" shall be substituted.

By Order and in the name of the Governor of Karnataka,

D. NAGESH PHATAK
Under Secretary to Government
Department of Personnel and Administrative Reforms (Service Rules)

ವಿಶೇಷ ಪತ್ರಿಕೆ

ಭಾಗ - IV-A	ಬೆಂಗಳೂರು, ಸೋಮವಾರ, ಫೆಬ್ರವರಿ ೨೭, ೨೦೧೨ (ಫಾಲ್ಗುಣ ೮, ಶಕ ವರ್ಷ ೧೯೩೩	ನಂ. ೧೪೦

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 69 ಸೇನಿಸಿ 2011, ಬೆಂಗಳೂರು, ದಿನಾಂಕ: 27/02/2012

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ನಿಯಮ 8ರೊಂದಿಗೆ ಓದಲಾದ ನಿಯಮ 3ರ ಉಪ ನಿಯಮ (1) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 1966ಕ್ಕೆ ತಿದ್ದುಪಡಿ ಮಾಡಲು ಉದ್ದೇಶಿಸಿ ಮೇಲೆ ಹೇಳಿದ ಅಧಿನಿಯಮ 3 ರ ಉಪನಿಯಮ 2 ರ ಕಲಂ (ಎ) ನಲ್ಲಿ ಅಗತ್ಯಪಡಿಸಲಾದಂತೆ ಅದರಿಂದ

ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಅದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಈ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ, ಮೇಲೆ ನಿಗಧಿಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಯಾರೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಮತ್ತು ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು – 560001 ಇವರಿಗೆ ಸಲ್ಲಿಸಬಹುದು.

ಕರಡು ನಿಯಮಗಳು

1. **ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ನಡತೆ) (ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಈ ನಿಯಮವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 21 ಕ್ಕೆ ತಿದ್ದುಪಡಿ:–** ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 21 ರ ಉಪನಿಯಮ (4) ರ ಖಂಡ (i) ರ ಉಪಖಂಡ (ಬಿ) ಪರಂತುಕದಲ್ಲಿರುವ "ತನ್ನ ಒಟ್ಟು ತಿಂಗಳ ಉಪಲಬ್ಧಗಳನ್ನು ಮೀರದಷ್ಟು ಮೊತ್ತವನ್ನು ಎಂಬ ಪದಗಳ ಬದಲಾಗಿ ತನ್ನ ಮೂರು ತಿಂಗಳ ಒಟ್ಟು ಉಪಲಬ್ಧಗಳನ್ನು ಮೀರದಷ್ಟು ಮೊತ್ತವನ್ನು" ಎಂದು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ದೇವರಾಜು
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾನಿಯಮಗಳು)

PERSONNEL AND ADMINISTRATIVE REFORMS SECRETARIAT

NOTIFICATION

No. DPAR 69 SRC 2011, Bangalore, dated: 27.02.2012

Draft of the following rules further to amend the Karnataka Civil Services (Conduct) Rules, 1966, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Principal Secretary to Government, Department of Personnel and Administrative Reforms, Vidhana Soudha, Bangalore - 560001.

DRAFT RULES

1. **Title and Commencement**:- (1) These rules may be called the Karnataka Civil Services (Conduct) (Amendment) Rules, 2012.

(2) They shall come into force from the date of their publication in the Official Gazette.

2. **Amendment of Rule 21**:- In the Karnataka Civil Services (Conduct) Rules, 1966, in rule 21, in sub – rule (4), in clause (i), in sub–clause (b), in proviso for the words "an amount not exceeding his total monthly emoluments", the words "an amount not exceeding his three months emoluments" shall be substituted.

By order and in the name of the Governor of Karnataka

DEVARAJU
Deputy Secretary to Government
Department of Personnel and Administrative
Reforms (Service Rules)

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಸೋಮವಾರ, ಫೆಬ್ರವರಿ ೨೭, ೨೦೧೨ (ಫಾಲ್ಗುಣ ೮, ಶಕ ವರ್ಷ ೧೯೩೩	ನಂ. ೧೪೧

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಡಿಸಿಎ 18 ಎಆರ್‌ಬಿ 2011, ಬೆಂಗಳೂರು, ದಿನಾಂಕ : 27/02/2012

ಭಾರತ ಸಂವಿಧಾನದ 166ನೇ ಅನುಚ್ಛೇದದ ಕಲಮು (2) ಮತ್ತು (3) ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲರು, ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು 1977, ಇದಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದ್ದಾರೆ. ಎಂದರೆ:–

1. **ಶೀರ್ಷಿಕೆ ಮತ್ತು ಪ್ರಾರಂಭ:**– (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) (ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

   (2) ಇವುಗಳು ದಿನಾಂಕ: 01/12/2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರತಕ್ಕದ್ದೆಂದು ಭಾವಿಸತಕ್ಕದ್ದು.

2. **ಅನುಸೂಚಿ IV ಗೆ ತಿದ್ದುಪಡಿ:**– ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು 1977 (ಇನ್ನುಮುಂದೆ ಸದರಿ ನಿಯಮಗಳು ಎಂದು ಕರೆಯಲ್ಪಡುವವು) ರ ಅನುಸೂಚಿ **IV** ರಲ್ಲಿ "ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ" ಶೀರ್ಷಿಕೆಯಡಿಯಲ್ಲಿನ "ಬಿ. ಸಣ್ಣ ಪ್ರಮಾಣದ ಕೈಗಾರಿಕೆಗಳು" ಉಪಶೀರ್ಷಿಕೆಯಲ್ಲಿನ ಕ್ರಮ ಸಂಖ್ಯೆ: 8 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಕೈಬಿಡತಕ್ಕದ್ದು.

3. **ಅನುಸೂಚಿ XVI ಗೆ ತಿದ್ದುಪಡಿ:**– ಸದರಿ ನಿಯಮಗಳಲ್ಲಿನ ಅನುಸೂಚಿ XVI ನಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಶೀರ್ಷಿಕೆಯಡಿಯಲ್ಲಿನ "ಎ – ಸಮಾಜ ಕಲ್ಯಾಣ" ಉಪಶೀರ್ಷಿಕೆಯಡಿ ಕ್ರಮ ಸಂಖ್ಯೆ 14 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ ಈ ಕೆಳಕಂಡದ್ದನ್ನು ಸೇರ್ಪಡೆ ಮಾಡತಕ್ಕದ್ದು. ಎಂದರೆ:–

   "15. ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಒಳಗೊಂಡಂತೆ ಚರ್ಮ ಕೈಗಾರಿಕೆ"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವರಾಜು

ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು)

PERSONNEL AND ADMINISTRATIVE REFORMS SECRETARIAT

NOTIFICATION

No. DCA 18 ARB 2011, Bangalore, Dated: 27/02/2012

In exercise of the powers conferred by clauses (2) and (3) of Article 166 of the Constitution of India, the Governor of Karnataka hereby makes the following rules further to amend the Karnataka Government (Allocation of Business) Rules, 1977, namely:-

RULES

1. **Title and Commencement:**- 1) These rules may be called the Karnataka Government (Allocation of Business) (Amendment) Rules, 2012.

   2) They shall be deemed to have come into force with effect from First day of December 2011.

2. **Amendment of Schedule IV:**- In the Karnataka Government (Allocation of Business) Rules, 1977 (hereinafter referred to as the said rules), in Schedule IV, under the heading "Commerce and Industries Department", under the sub heading "B - Small Scale Industries" **item No. 8 and the entries relating thereto** shall be omitted.

3. **Amendment of Schedule XVI:-** In Schedule **XVI** to the said rules, under the heading "Social Welfare Department", under the sub heading "A - Social Welfare" after item No. 14 and the entries relating thereto, the following shall be inserted, namely:-

"15. Leather Industry including the Leather Industry Development Corporation"

By order and in the name of the Governor of Karnataka

DEVARAJU
Deputy Secretary to Government
Department of Personnel and Administrative
Reforms (Service Rules)

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಫೆಬ್ರವರಿ ೨೮, ೨೦೧೨ (ಫಾಲ್ಗುಣ ೯, ಶಕ ವರ್ಷ ೧೯೩೩	ನಂ. ೧೪೨

URBAN DEVELOPMENT SECRETARIAT

NOTIFICATION

No. UDD 911 MNY 2010, Bangalore, Dated : 28-02-2012

The draft of the Karnataka Municipal Corporations (Absorption of Junior Engineer appointed on deputation basis in Bruhath Bangalore Mahanagara Palike) (Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with Section 421 of the Karnataka Municipal Corporations Act, 1976 (Karnataka Act 14 of 1977) is hereby published as required by clause (a) of sub-section (3) of section 421 for the information of all persons likely to be affected thereby and notice is hereby given that the said draft will be taken into consideration after thirty days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections and suggestions may be addressed to the Additional Chief Secretary to Government, Urban Development Department, Vikasa Soudha, Bangalore-560 001.

DRAFT RULES

1. **Title and commencement**.-(1) These rules may be called the Karnataka Municipal Corporations (Absorption of Junior Engineer appointed on deputation basis in Bruhath Bangalore Mahanagara Palike) (Special) Rules, 2011.

(2) They shall come into force from the date of their publication in the Official Gazette.

2. **Definitions**.- (1) In these rules, unless the context otherwise requires.-

(a) "Deputation Junior Engineer" means a Junior Engineer (Electrical) appointed in the Bruhath Bangalore Mahanagara Palike on deputation basis from Mysore Lamps Works Limited.

(b) "Schedule" means schedule appended to these rules.

(c) Other words and expressions used in these rules but not defined shall have the same meaning respectively assigned to them in the Karnataka Municipal Corporations Rules, 1977.

3. **Absorption of Deputation Junior Engineer in the Bruhath Bangalore Mahanagara Palike**.-

(1) Notwithstanding anything contained in the Karnataka Municipal Corporation Rules, 1977 or any other rules made or deemed to have been made under the provisions of the Karnataka Municipal Corporations Act, 1976

(Karnataka Act 14 of 1977), governing the method of recruitment of the employees of the Bruhath Bangalore Mahanagara Palike the Deputation Junior Engineer specified in Column (2) of the Schedule and continues as such in the Bruhath Bangalore Mahanagara Palike on the date of commencement of these rules, be absorbed in the corresponding category of post and scale of pay specified in columns (5) and (6) respectively, in the Bruhath Bangalore Mahanagara Palike Services.

Provided that no such person shall be absorbed.-

(i) If he was disqualified for appointment under the Karnataka Municipal Corporations Rules, 1977 on the date of appointment as Junior Engineer in the Mysore Lamps Works Limited,

(ii) If he does not possess the minimum academic qualification, if any, specified in the rules of recruitment applicable for the recruitment to the post, in which he is absorbed,

(iii) In any post reserved for the persons belonging to the category of Schedule Castes or Scheduled Tribes or other backward classes to which he was appointed as deputation Junior Engineer if he is found to be not belonging to such category. Otherwise such post shall be treated as backlog to be filled by process of Special recruitment from among these classes.

4. Pay, Pension, Leave and Seniority of persons absorbed under these rules.-

Notwithstanding anything contained in the Karnataka Municipal Corporations Rules, 1977,

(i) The initial basic pay of deputation Junior Engineer absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Junior Engineer prior to the date of absorption shall count for the purpose of leave, pension, but not for pay and seniority and grant of selection time scale of pay under Karnataka Civil Services (Time Bound Advancement) Rules, 1983 or for grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

(iii) As regards pension and other retirement benefits, he shall be governed by terms and conditions as stipulated in Government Order No. FD (Spl) 04 PET 2005, dated 31.03.2006, i.e., New Defined contributory pension scheme introduced w.e.f. 01.04.2006 and/or pension policy of the Bruhath Bangalore Mahanagara Palike.

(iv) The deputationist so absorbed shall not receive any ex-gratia amount from his parent organization under the Voluntary Retirement Scheme and would be deemed to have resigned in the parent organization.

SCHEDULE

(See rule 3)

Sl. No.	**Name of the deputation Engineer**	**Designation**	**Date of Deputation in the BBMP**	**Post in which absorbed**	**Scale of pay of the post in which absorbed**
(1)	(2)	(3)	(4)	(5)	(6)
1	K.N.Babureddy	Junior Engineer (Electrical)	27.06.2003	Junior Engineer (Electrical)	8825-16000

By order and in the name of the Governor of Karnataka,

S.RENUKARADHYA
Under Secretary to Government
Urban Development Department

ವಿಶೇಷ ಪತ್ರಿಕೆ

ಭಾಗ - V	ಬೆಂಗಳೂರು, ಮಂಗಳವಾರ, ಫೆಬ್ರವರಿ ೨೮, ೨೦೧೨ (ಫಾಲ್ಗುಣ ೯, ಶಕ ವರ್ಷ ೧೯೩೩)	ನಂ. ೧೪೩

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಪ:ಆ-1:19:ಖಾಹುಭ:2012, ಬೆಂಗಳೂರು, ದಿನಾಂಕ: 28.02.2012

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಲಿ ಇರುವ ಸಹಾಯಕರು, ಕಿರಿಯ ಸಹಾಯಕರು, ಬೆರಳಚ್ಚುಗಾರರು, ಬಡಗಿ, ಸ್ವೀಪರ್-ಕಂ-ಸ್ಕ್ಯಾವೆಂಜರ್/ ಕಾವಲುಗಾರ/ದಲಾಯತ್ ಮತ್ತು ಸೆಕ್ಯೂರಿಟಿ ಗಾರ್ಡ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮಗಳು 2003ರ ತಿದ್ದುಪಡಿ ಅಧಿಸೂಚನೆ 2005 ಮತ್ತು 2011ರ ರೀತ್ಯಾ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಲಿ ಇರುವ ಸಹಾಯಕರು, ಕಿರಿಯ ಸಹಾಯಕರು, ಬೆರಳಚ್ಚುಗಾರರು, ಬಡಗಿ, ಸ್ವೀಪರ್-ಕಂ-ಸ್ಕ್ಯಾವೆಂಜರ್/ಕಾವಲುಗಾರ/ ದಲಾಯತ್ ಮತ್ತು ಸೆಕ್ಯೂರಿಟಿ ಗಾರ್ಡ್ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

ಸಹಾಯಕರ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01	ಪರಿಶಿಷ್ಟ ಜಾತಿ	01	–	–	–	–	–	–	01
02	ಸಾಮಾನ್ಯ	01	–	–	–	–	–	–	01
	ಒಟ್ಟು	**02**	–	–	–	–	–	–	**02**

ಕಿರಿಯ ಸಹಾಯಕರ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01.	2ಎ	–	–	01	–	–	–	–	01
	ಒಟ್ಟು	–	–	01	–	–	–	–	01

ಬೆರಳಚ್ಚುಗಾರರ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01.	ಪರಿಶಿಷ್ಟ ಜಾತಿ	01	–	–	–	–	–	–	01
	ಒಟ್ಟು	01	–	–	–	–	–	–	01

ಬಡಗಿ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01.	ಪರಿಶಿಷ್ಟ ಪಂಗಡ	01	–	–	–	–	–	–	01
	ಒಟ್ಟು	01	–	–	–	–	–	–	01

ಸ್ವೀಪರ್-ಕಂ-ಸ್ಕ್ಯಾವೆಂಜರ್/ಕಾವಲುಗಾರ/ದಲಾಯತ್ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01.	ಸಾಮಾನ್ಯ	02	01	01	01	–	–	–	05
02.	ಪರಿಶಿಷ್ಟ ಜಾತಿ	01	–	–	–	–	–	–	01
03.	ಪರಿಶಿಷ್ಟ ಪಂಗಡ	–	01	–	–	–	–	–	01
04.	ಪ್ರವರ್ಗ-II ಎ	01	–	–	–	–	–	–	01
05.	ಪ್ರವರ್ಗ-III ಎ	–	01	–	–	–	–	–	01
06	ಪ್ರವರ್ಗ-III ಬಿ	–	01	–	–	–	–	–	01
	ಒಟ್ಟು	04	04	01	01	–	–	–	10

ಸೆಕ್ಯೂರಿಟಿ ಗಾರ್ಡ್ ಹುದ್ದೆಗಳ ಮೀಸಲಾತಿ ವರ್ಗೀಕರಣ

ಕ್ರ ಸಂ.	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನೆಗಳಿಂದ ನಿರ್ವಸಿತರಾದವರು	ಅಂಗವಿಕಲರು	ಒಟ್ಟು
01.	ಪರಿಶಿಷ್ಟ ಜಾತಿ	01	–	–	–	–	–	–	01
	ಒಟ್ಟು	01	–	–	–	–	–	–	01

01. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **28.03.2012**

02. ಅರ್ಜಿ ಸಲ್ಲಿಸಬೇಕಾದ ವಿಳಾಸ: ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಅಂಚೆ ಪೆಟ್ಟಿಗೆ ಸಂಖ್ಯೆ: 5079, ಮೊದಲನೆ ಮಹಡಿ, ವಿಧಾನಸೌಧ, ಬೆಂಗಳೂರು-560001.

03. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ನಿಯಮಾವಳಿಗನುಸಾರ ಮೇಲ್ಕಂಡ ಹುದ್ದೆಗಳ ಭರ್ತಿಗಾಗಿ ಅರ್ಹತೆಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆ-1ರ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸರ್ಕಾರಿ ಮುಸ್ತಕ ಮಳಿಗೆಯಿಂದ ಪಡೆದು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಸಲ್ಲಿಸಬೇಕು.

04. ಶುಲ್ಕ:

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವಿರುವುದಿಲ್ಲ.

ಆ) ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಕ್ರಾಸ್ ಮಾಡಿದ ರೂ. 25.00 ಗಳ ಇಂಡಿಯನ್ ಪೋಸ್ಟಲ್ ಆರ್ಡರನ್ನು ಅರ್ಜಿ ಸಲ್ಲಿಸುವ ದಿನಾಂಕದ 15 ದಿನಗಳೊಳಗಿರುವಂತೆ ಖರೀದಿಸಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನಸೌಧ, ಬೆಂಗಳೂರು – 560 001 ಈ ವಿಳಾಸಕ್ಕೆ ಪಾವತಿ ಮಾಡಬೇಕು. ಅರ್ಜಿ ಶುಲ್ಕವನ್ನು ಒಮ್ಮೆ ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.

05. ವಿದ್ಯಾರ್ಹತೆ:

ಕ್ರ ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
01	ಸಹಾಯಕರು	ರೂ.8000–200–8600–225–9500–250–10500–300–12300–350–14400–400–14800	02	1) ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಅಥವಾ ರಾಜ್ಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಮತ್ತು ಗಣಕ ಯಂತ್ರದಲ್ಲಿ ಸಾಮಾನ್ಯ ಜ್ಞಾನವನ್ನು ಹೊಂದಿದವರಿಗೆ ಆದ್ಯತೆ ನೀಡಲಾಗುವುದು. 2) ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಕಿರಿಯ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಹಾಗೂ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಹೊಂದಿರುವ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು.
02	ಕಿರಿಯ ಸಹಾಯಕರು	ರೂ.5800–100–6000–125–6500–150–7100–175–7800–200–8600–225–9500–250–10500	01	1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. 2) ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಗ್ರೂಪ್ ಡಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹಾಗೂ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರುವ ಅಭ್ಯರ್ಥಿಗೆ ಆದ್ಯತೆ ನೀಡಲಾಗುವುದು.
03	ಬೆರಳಚ್ಚುಗಾರರು	ರೂ.5800–100–6000–125–6500–150–7100–175–7800–200–8600–225–9500–250–10500	01	1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಹಾಗೂ ಮಾನ್ಯತೆ ಪಡೆದಿರುವ ಸಂಸ್ಥೆಯಿಂದ ಒಂದು ವರ್ಷದ ಕಂಪ್ಯೂಟರ್ ಕೋರ್ಸ್‌ನ್ನು ಮಾಡಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. 2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಮತ್ತು ಆಂಗ್ಲ ಭಾಷೆಯ ಹಿರಿಯ ಶ್ರೇಣಿ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಶೀಘ್ರಲಿಪಿಯಲ್ಲಿ ಪರಿಣತಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
4	ಬಡಗಿ	ರೂ.5200–100–6000–125–6500–150–7100–175–7800–200–8200	01	ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು ಮತ್ತು ಮಾನ್ಯತೆ ಪಡೆದ ಸಂಸ್ಥೆಯಿಂದ ಬಡಗಿ ಕೋರ್ಸ್ ಅಥವಾ ಜಿಲ್ಲಾ ಕೈಗಾರಿಕಾ ತರಬೇತಿ ಕೇಂದ್ರದಿಂದ ಸರ್ಟಿಫಿಕೇಟ್ ಹೊಂದಿರಬೇಕು.
5	ಸ್ವೀಪರ್–ಕಂ–ಸ್ಕ್ಯಾವೆಂಜರ್/ ಕಾವಲುಗಾರ/ ದಲಾಯತ್	ರೂ.4800–100–6000–125–6500–150–7100–175–7275	10	7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.
6	ಸೆಕ್ಯೂರಿಟಿ ಗಾರ್ಡ್	ರೂ.4800–100–6000–125–6500–150–7100–175–7275	01	7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

06. ಕನಿಷ್ಠ ವಯೋಮಿತಿ:

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಗರಿಷ್ಠ ವಯೋಮಿತಿ:–

ಸಾಮಾನ್ಯ ವರ್ಗ	:	35 ವರ್ಷ
ಪ್ರವರ್ಗ IIಎ, IIಬಿ, IIIಎ ಮತ್ತು IIIಬಿ	:	38 ವರ್ಷ
ಪ.ಜಾ/ಪ.ಪಂ/ಪ್ರವರ್ಗ – I	:	40 ವರ್ಷ

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ನಿಯಮ 6(3) ರಲ್ಲಿ ತಿಳಿಸಲಾಗಿರುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ರಿಯಾಯಿತಿ ನೀಡಲಾಗುವುದು.

07. ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದ ಮೂಲಕ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕು.

08. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ಪ್ರಕಾರ ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳಿಗೆ ನೇಮಕಾತಿ ಹೊಂದಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗೆ ಅರ್ಹರಾಗಿರುತ್ತಾರೆ.

09. ಆಯ್ಕೆಯಾದ ಯಾವುದೇ ಅಭ್ಯರ್ಥಿಯು ನೇಮಕಾತಿ ಪ್ರಾಧಿಕಾರಕ್ಕೆ ಅವನು/ಅವಳು ನೇಮಿಸಿರುವ ಕೆಲಸಕ್ಕೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಯೋಗ್ಯವೆನಿಸಿದ ಹೊರತು ಅವನನ್ನು/ಅವಳನ್ನು ಆ ಹುದ್ದೆಗೆ ನೇಮಿಸಲಾಗುವುದಿಲ್ಲ.

10. ಯಾವುದೇ ವ್ಯಕ್ತಿಯು ತನ್ನ ಉಮೇದುವಾರಿಕೆ ಬಗ್ಗೆ ಅಧಿಕಾರಿಗಳು ಮತ್ತು ಅಧಿಕಾರೇತರರುಗಳ ಒತ್ತಡ ತಂದಲ್ಲಿ ಸದರಿ ಹುದ್ದೆಯ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

11. ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಗೆ ತಿಳಿಸಲಾಗಿರುವ ದಾಖಲೆಗಳ ದ್ವಿಪ್ರತಿಗಳನ್ನು ಲಗತ್ತಿಸಬೇಕು.

(ಅ) ಹುಟ್ಟಿದ ತಾರೀಖಿಗೆ ಆಧಾರದ ದಾಖಲೆ ಪ್ರತಿ.

(ಆ) ಹುದ್ದೆಗೆ ಸೂಚಿಸಲಾಗಿರುವ ವಿದ್ಯಾರ್ಹತೆಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರದ ನಕಲು ಪ್ರತಿ. (ಅಂಕಪಟ್ಟಿಗಳ ನಕಲು ಪ್ರತಿಗಳ ಸಮೇತ).

(ಇ) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ದೃಢೀಕರಿಸುವ ಪ್ರಮಾಣ ಪತ್ರ.

(ಈ) ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸರ್ಕಾರದಿಂದ ನಿಗದಿಗೊಳಿಸಲ್ಪಟ್ಟಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

(ಉ) ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿರುವಂತೆ ಗಣ್ಯ ವ್ಯಕ್ತಿಗಳಿಂದ ಪಡೆದ ಇತ್ತೀಚಿನ ನಡವಳಿಕೆ ಹಾಗೂ ಶಾಲಾ ನಡವಳಿಕೆಯ ಪ್ರಮಾಣ ಪತ್ರ

(ಊ) 1 ರಿಂದ 10ನೇ ತರಗತಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.

ಸೂಚನೆ: ಅಭ್ಯರ್ಥಿಗಳು ಮೂಲ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದಲ್ಲ.

12. ಅರ್ಜಿಗಳನ್ನು ನಮೂನೆ –Iರ ದ್ವಿಪ್ರತಿಯಲ್ಲಿ ಅಗತ್ಯವುಳ್ಳ ದಾಖಲೆಗಳನ್ನು ಲಗತ್ತಿಸಿ, ಕೊನೆಯ ದಿನಾಂಕ: **28.03.2012** ರಂದು ಸಂಜೆ : 4.00 ಗಂಟೆಯ ಒಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸತಕ್ಕದ್ದು. ಸದರಿ ದಿನಾಂಕವು ಸಾರ್ವಜನಿಕ ರಜಾ ದಿನವಾದಲ್ಲಿ ಮುಂದಿನ ಕೆಲಸದ ದಿನದಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

13. 2003ನೇ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ರೀತ್ಯಾ ಸದರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯ ಕಾರ್ಯ ವಿಧಾನವನ್ನು ನಿಗಧಿಪಡಿಸುವ ಅಧಿಕಾರ ಮಾನ್ಯ ಸಭಾಪತಿಯವರಿಗೆ ಇರುತ್ತದೆ.

ಸೂಚನೆ: –

01. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ ನಂತರ ಆ ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

02. ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಇರುವ ಹಾಗೂ ಲೋಪ/ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

03. ಅರ್ಜಿಗಳ ಮೇಲೆ ಹುದ್ದೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.

04. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

ಎಸ್.ಶಕುಂತಳ

ಅಧೀನ ಕಾರ್ಯದರ್ಶಿ,

ಕರ್ನಾಟಕ ವಿಧಾನ ಪರಿಷತ್ತು.

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಗುರುವಾರ, ಮಾರ್ಚ್ ೧, ೨೦೧೨ (ಫಾಲ್ಗುಣ ೧೧, ಶಕ ವರ್ಷ ೧೯೩೩)	ನಂ. ೧೪೪

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 04 ಇಕಾಅ 2012, ಬೆಂಗಳೂರು, ದಿನಾಂಕ: 1ನೇ ಮಾರ್ಚ್, 2012

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) 19ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿದ್ದು, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012ರ ಕರಡನ್ನು ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ 14ನೇ ಫೆಬ್ರವರಿ 2012ರ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿ ಅವರಿಂದ ಆಕ್ಷೇಪಣೆ, ಸಲಹೆ ಅಥವಾ ಸೂಚನೆಗಳನ್ನು ಆಹ್ವಾನಿಸಲಾಗಿತ್ತು. ಹಾಗೂ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ **ಹದಿನೈದು ದಿನಗಳು** ಮುಕ್ತಾಯವಾದ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಗಿತ್ತು.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ದಿನಾಂಕ 29-02-2012ಕ್ಕೆ ಮುಕ್ತಾಯವಾಗಿದ್ದು ಸ್ವೀಕರಿಸಲಾಗಿರುವ ಆಕ್ಷೇಪಣೆ, ಸಲಹೆ ಅಥವಾ ಸೂಚನೆಗಳನ್ನು ಪರಿಶೀಲಿಸಿದ ನಂತರ ರಾಜ್ಯ ಸರ್ಕಾರವು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012ನ್ನು ಕೆಳಗಿನಂತೆ ಹೊರಡಿಸಿದೆ.

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012

1. **ಹೆಸರು ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಇವುಗಳು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**– (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) 'ಅಧಿನಿಯಮ' ಎಂದರೆ, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011(2012ರ ಕರ್ನಾಟಕ ಅಧಿನಿಯಮ 1);

(ಬಿ) 'ನಮೂನೆ' ಎಂದರೆ ಈ ನಿಯಮಗಳಿಗೆ ಲಗತ್ತಾದ ನಮೂನೆ;

(ಸಿ) 'ಪ್ರಕರಣ' ಎಂದರೆ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಿ ಅರ್ಥಗಳನ್ನು ಹೊಂದಿರತಕ್ಕದ್ದು.

3. **ಸೂಚನಾ ಫಲಕದ ಮೇಲೆ ಮಾಹಿತಿಯನ್ನು ಪ್ರದರ್ಶಿಸುವುದು.**– (1) ಸಾರ್ವಜನಿಕ ಪ್ರಾಧಿಕಾರದ ಹೆಸರಿಸಲಾದ ಅಧಿಕಾರಿ ಮತ್ತು ಆತನ ಅಧೀ ಸಾರ್ವಜನಿಕ ನೌಕರನು, ಸಾಮಾನ್ಯ ಸಾರ್ವಜನಿಕ ಅನುಕೂಲಕ್ಕಾಗಿ, ತನ್ನ ಕಚೇರಿಯಲ್ಲಿ ಲಭ್ಯವಿರುವ ಸೇವೆಗಳ ಬಗೆಗಿನ ಎಲ್ಲಾ ಯುಕ್ತ ಮಾಹಿತಿಯನ ಅಧಿನಿಯಮದ ಷೆಡ್ಯೂಲ್‌ನಲ್ಲಿ ನಿಗದಿಪಡಿಸಿರುವಂತೆ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಅಧಿನಿಯಮದ 3ನೇ ಪ್ರಕರಣದ (2) ಉಪಪ್ರಕರಣದನ್ವಯ ಸೇವೆಗಳನ್ನು ಸ್ವೀಕರಿಸುವುದಕ್ಕಾಗಿ ಕಾಲಮಿತಿಯನ್ನೊಳಗೊಂಡ ಗೊತ್ತುಪಡಿಸಲಾದ ಸೇವೆಗಳು, ದಾಖಲೆಗಳ ತಪಶೀಲು ಪ (ಚೆಕ್ ಲಿಸ್ಟ್), ನಿಗದಿತ ಶುಲ್ಕ, ಕಡ್ಡಾಯವಾಗಿ ನೀಡಬೇಕಾದ ಸ್ವೀಕೃತಿ ಪತ್ರ, ತಿರಸ್ಕರಿಸಿದ ಅರ್ಜಿಗಳಿಗೆ ನಿರ್ದಿಷ್ಟವಾದ ಕಾರಣ, ವಿಳಂಬ ಮ ಸೇವೆಯನ್ನು ಕಾಲಮಿತಿಯೊಳಗೆ ನೀಡದ ಕಾರಣ ಸಕ್ಷಮ ಅಧಿಕಾರಿಯಿಂದ ಪರಿಹಾರ ವೆಚ್ಚವನ್ನು ಪಡೆಯುವ ಕಾರ್ಯವಿಧಾನ, ಮೇಲ್ಮನ ಅಧಿಕಾರಿಯವರನ್ನು ಸಂಪರ್ಕಿಸಬೇಕಾದ ವಿವರಗಳನ್ನು, ಅರ್ಜಿಗಳ ಸ್ಥಿತಿಗತಿಗಳ ನಿರ್ವಹಣೆಗಾಗಿ ಕಾರ್ಯವಿಧಾನ ಪ್ರದರ್ಶಿಸತಕ್ಕದ್ದು. (**ನಮೂನೆ**– ಇಂತಹ ಸೂಚನಾ ಫಲಕವನ್ನು ಕಛೇರಿಯ ಮುಂಭಾಗದಲ್ಲಿ ಪ್ರದರ್ಶಿಸತಕ್ಕದ್ದು. ಹಾಗೂ ಅಧಿಕೃತ ಅರ್ಜಿಗಳ ಸಾಕಷ್ಟು ಪ್ರತಿಗಳನ್ನು ಅರ್ಜಿ ಸ್ವೀ ಕೌಂಟರುಗಳಲ್ಲಿ ಒದಗಿಸತಕ್ಕದ್ದು.

(2) ಸಾರ್ವಜನಿಕ ಆದಿಪತ್ಯದಲ್ಲಿ ಅಂಥ ಮಾಹಿತಿಯನ್ನು ಪ್ರದರ್ಶನ ಮಾಡಿರದ ಪ್ರಕರಣದಲ್ಲಿ, ಸಕ್ಷಮ ಅಧಿಕಾರಿಯು, ಹೆಸರಿಸಲಾದ ಅಧಿಕಾರಿ ಮೂಲಕ ಸುಧಾರಣಾ ಕ್ರಮವನ್ನು ಪ್ರಾರಂಭಿಸತಕ್ಕದ್ದು.

4. ಅರ್ಜಿಯನ್ನು ಸ್ವೀಕರಿಸುವ ಮತ್ತು ಅರ್ಜಿದಾರರಿಗೆ ಸ್ವೀಕೃತಿಯನ್ನು ನೀಡುವ ವಿಧಾನ:- (1) ಅನುಸೂಚಿಯಲ್ಲಿ ನಮೂದಿಸಿರುವ ಒಂದು ಅಥವಾ ಹೆಚ್ಚಿನ ಸೇವೆಗಳನ್ನು ಪಡೆಯಲು ಬಯಸುವ ನಾಗರೀಕರು ನಿಗದಿತ ಅರ್ಜಿ ನಮೂನೆಯಲ್ಲಿ ತಾಳೆಪಟ್ಟಿಯಲ್ಲಿ ಹೇಳಿರುವ ಎಲ್ಲಾ ದಾಖಲಾತಿಗಳೊಂದಿಗೆ ಹೆಸರಿಸಲಾದ ಅಧಿಕಾರಿಗೆ ಅರ್ಜಿಯನ್ನು ಸ್ವೀಕೃತ ಕೌಂಟರುಗಳಲ್ಲಿ / ನೋಂದಣಿ ಅಂಚೆ ಸ್ವೀಕೃತಿ ಬಾಕಿ/ ಅಂಚೆ/ಇ-ಮೈಲ್ ಸಲ್ಲಿಸಬಹುದಾಗಿದೆ.

(2) ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತ ವ್ಯಕ್ತಿಯು, ಲಿಖಿತ ರೂಪದಲ್ಲಿ ಅಥವಾ ನಿಯಮಿಸಿದೆಡೆಯಲ್ಲಿ ಅಂಥ ನಮೂನೆಯಲ್ಲಿ, ಅರ್ಜಿಯನ್ನು ಸ್ವೀಕರಿಸಿದಾಗ, **ನಮೂನೆ-ಅ** ಯಲ್ಲಿ ಅರ್ಜಿದಾರನಿಗೆ ಯುಕ್ತ ಸ್ವೀಕೃತಿಯನ್ನು ನೀಡತಕ್ಕದ್ದು. ಪ್ರತಿಯೊಂದು ಅರ್ಜಿಗೆ ಒಂದು ಗಣಕೀಕೃತ ಸ್ವೀಕೃತಿ ಸಂಖ್ಯೆಯನ್ನು ನೀಡತಕ್ಕದ್ದು.

(3) ಅರ್ಜಿಯೊಂದಿಗೆ ಯಾವುದೇ ಅವಶ್ಯಕ ದಸ್ತಾವೇಜುಗಳನ್ನು ಲಗತ್ತಿಸಿರದ ಸಂದರ್ಭದಲ್ಲಿ, ಅದನ್ನು ಸ್ವೀಕೃತಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು ಮತ್ತು ಅಂಥ ಸ್ವೀಕೃತಿಗಳಲ್ಲಿ ಸೇವೆ ಒದಗಿಸುವ ದಿನಾಂಕವನ್ನು ನಮೂದಿಸತಕ್ಕದ್ದಲ್ಲ.

(4) ಅರ್ಜಿಯೊಂದಿಗೆ ಎಲ್ಲಾ ಅವಶ್ಯಕ ದಸ್ತಾವೇಜುಗಳನ್ನು ಲಗತ್ತಿಸಿದ್ದಲ್ಲಿ ಮತ್ತು ಅರ್ಜಿಯು ಎಲ್ಲಾ ವಿಧಗಳಲ್ಲಿಯೂ ಪೂರ್ಣವಾಗಿದ್ದಲ್ಲಿ, ಆಗ ಸೇವೆ ಒದಗಿಸುವ ದಿನಾಂಕವನ್ನು ನಮೂದಿಸತಕ್ಕದ್ದು.

5. ಸಾರ್ವಜನಿಕ ರಜಾ ದಿನಗಳನ್ನು ಒಳಗೊಂಡಿರತಕ್ಕದ್ದಲ್ಲ:- ಸೇವೆಯ ವಿಲೆಗಾಗಿ ಗೊತ್ತುಪಡಿಸಿದ ಕಾಲಮಿತಿಯನ್ನು ಲೆಕ್ಕಹಾಕುವಾಗ ಸಾರ್ವಜನಿಕ ರಜಾದಿನಗಳನ್ನು ಒಳಗೊಂಡಿರತಕ್ಕದ್ದಲ್ಲ.

6. ಪರಿಹಾರ ವೆಚ್ಚವನ್ನು ಕೋರುವ ಮತ್ತು ಪಾವತಿಮಾಡುವ ವಿಧಾನ:- (1) ನಾಗರಿಕ ಸಂಬಂಧಿ ಸೇವೆಗಳಿಗಾಗಿ ಅರ್ಜಿಯನ್ನು ಸಲ್ಲಿಸಿರುವ ನಾಗರಿಕನು, ನಮೂನೆ- ಆ ಪ್ರತಿಯನ್ನು ಸಕ್ಷಮ ಅಧಿಕಾರಿಗೆ ಸಲ್ಲಿಸಿ/ಕರೆ ಕೇಂದ್ರದ ಮೂಲಕವೂ ದಾಖಲಿಸಿ ಪರಿಹಾರದ ವೆಚ್ಚವನ್ನು ಕೋರುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(2) ಸಕ್ಷಮ ಅಧಿಕಾರಿಯು, ಪರಿಹಾರದ ವೆಚ್ಚಕ್ಕಾಗಿನ ಅರ್ಜಿಯನ್ನು, ದಿನಾಂಕ ಮತ್ತು ಮೊಹರಿನೊಂದಿಗೆ, ಸ್ವೀಕರಿಸತಕ್ಕದ್ದು ಅಥವಾ ಸ್ವೀಕರಿಸುವಂತೆ ಮಾಡತಕ್ಕದ್ದು.

(3) ಪರಿಹಾರ ವೆಚ್ಚಕ್ಕಾಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅರ್ಜಿದಾರನು ಅರ್ಹನಾದ ಪರಿಹಾರ ವೆಚ್ಚವನ್ನು ಸಕ್ಷಮ ಅಧಿಕಾರಿಯು ಆನ್‌ಲೈನ್ ಮಾಹಿತಿ ಆಧಾರದ ಮೇಲೆ ಮೌಲ್ಯಮಾಪನ ಮಾಡತಕ್ಕದ್ದು ಮತ್ತು ಅದನ್ನು ಪಾವತಿ ಮಾಡುವುದಕ್ಕೆ ಕಚೇರಿಯ ಇಂಪ್ರೆಸ್ಟ್ ಮೊತ್ತದಿಂದ ತಕ್ಷಣ ಪಾವತಿಸಿ ಸ್ವೀಕೃತಿ ಸಹಿಯನ್ನು ಪಡೆಯತಕ್ಕದ್ದು. ತದನಂತರ ಆತನು 11ನೇ ಪ್ರಕರಣದ ಅಡಿಯಲ್ಲಿ ಅನುಸೂಚಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ತಪ್ಪಿತಸ್ಥ ಸಾರ್ವಜನಿಕ ನೌಕರನಿಂದ ಅದನ್ನು 30 ದಿನಗಳೊಳಗಾಗಿ ವಸೂಲು ಮಾಡಲು ಕ್ರಮವಹಿಸತಕ್ಕದ್ದು.

7. ನೋಟೀಸನ್ನು ನೀಡುವ ವಿಧಾನ:- ಸಕ್ಷಮ ಅಧಿಕಾರಿಯು, ಪರಿಹಾರವನ್ನು ಪಾವತಿ ಮಾಡಿದ ಅರ್ಜಿಯ ಪ್ರತಿಯನ್ನು ಆತನಿಗೆ ಒದಗಿಸುವಲ್ಲಿ ವಿಳಂಬಕ್ಕೆ ಅಥವಾ ತಪ್ಪಿಗೆ ಹೊಣೆಗಾರನಾದ ಹೆಸರಿಸಲಾದ ಅಧಿಕಾರಿ ಅಥವಾ ಅಧೀನ ಸಿಬ್ಬಂದಿಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಪಾವತಿ ಮಾಡಿದ ಪರಿಹಾರ ವೆಚ್ಚವನ್ನು ಆತನಿಂದ ಏಕೆ ವಸೂಲು ಮಾಡಬಾರದೆಂಬುದಕ್ಕೆ ಕಾರಣಗಳನ್ನು ಕೇಳತಕ್ಕದ್ದು. ತಪ್ಪಿತಸ್ಥ ಅಥವಾ ವಿಳಂಬ ಮಾಡಿದ ಅಧಿಕಾರಿ ಅಥವಾ ಸಿಬ್ಬಂದಿಗೆ ಕಾರಣಗಳನ್ನು ಯಾವ ಕಾಲಮಿತಿಯೊಳಗೆ ಒದಗಿಸಬೇಕೆಂಬುದನ್ನೂ ಆತನು ಸೂಚಿಸತಕ್ಕದ್ದು. **(ನಮೂನೆ-ಇ)**

8. ಶುಲ್ಕವನ್ನು ಸಡಿಲಗೊಳಿಸುವುದು:- ಸಕ್ಷಮ ಅಧಿಕಾರಿಗೆ ಅಥವಾ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಗಾಗಿ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

9. ಸಕ್ಷಮ ಅಧಿಕಾರಿಗೆ ಅರ್ಜಿ ಸಲ್ಲಿಸುವ ಕಾರ್ಯವಿಧಾನ.:- ಸಕ್ಷಮ ಅಧಿಕಾರಿಗೆ ಸಲ್ಲಿಸುವ ಅರ್ಜಿಯು **ನಮೂನೆ-ಬಿ** ಪ್ರತಿಯೊಂದಿಗೆ / ಕರೆ ಕೇಂದ್ರ ಮೂಲಕ ಸಲ್ಲಿಸುವುದು.

10.ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯೊಂದಿಗೆ ಲಗತ್ತಿಸಬೇಕಾದ ದಸ್ತಾವೇಜುಗಳು:- ನಮೂನೆ **"ಈ"** ಪ್ರತಿಯೊಂದಿಗೆ ಅರ್ಜಿ ಸಲ್ಲಿಸುವುದು.

ಸಕ್ಷಮ ಅಧಿಕಾರಿಯ ಆದೇಶದ ಮೇಲೆ ನೊಂದ ಹೆಸರಿಸಲಾದ ಅಧಿಕಾರಿ ಅಥವಾ ಯಾವುದೇ ಸಾರ್ವಜನಿಕ ನೌಕರನು ಅವರುಗಳ ಮೇಲ್ಮನವಿ ಅರ್ಜಿಯ ಜೊತೆಗೆ ಪರಿಹಾರ ವೆಚ್ಚವನ್ನು ಪಾವತಿಸಿರುವುದಕ್ಕೆ ದಾಖಲೆಯನ್ನು ಒದಗಿಸತಕ್ಕದ್ದು. ಅಂತಹ ದಾಖಲೆಯಿಲ್ಲದ ಅರ್ಜಿಗಳನ್ನು ಅಂಗೀಕರಿಸತಕ್ಕದ್ದಲ್ಲ.

11. ಮೊದಲ ಅಥವಾ ಎರಡನೇ ಮೇಲ್ಮನವಿಯ ಮೇಲೆ ತೀರ್ಮಾನದ ಕಾರ್ಯ ವಿಧಾನ:- ಹೆಸರಿಸಲಾದ ಪ್ರಾಧಿಕಾರದ ಅಥವಾ ಸಕ್ಷಮ ಪ್ರಾಧಿಕಾರದ ಆದೇಶಗಳ ಮೇಲಿನ ತೀರ್ಮಾನವು ಈ ಮುಂದಿನ ಹಂತಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(1) ಸಂಬಂಧಿಸಿದ ದಸ್ತಾವೇಜುಗಳು, ಸಾರ್ವಜನಿಕ ದಾಖಲೆಗಳು ಅಥವಾ ಅವುಗಳ ಪ್ರತಿಗಳ ಪುನರೀಕ್ಷಣೆ;

(2) ಅಸಾಧಾರಣ ಸಂದರ್ಭಗಳಲ್ಲಿ ಅಗತ್ಯ ತಪಾಸಣೆಗಾಗಿ ಯಾವೊಬ್ಬ ಇತರೆ ಅಧಿಕಾರಿಯನ್ನು ಪ್ರಾಧಿಕೃತಗೊಳಿಸ ಬಹುದು;

(3) ಅಹವಾಲನ್ನು ಕೇಳುವುದಕ್ಕಾಗಿ ಪುನರೀಕ್ಷಣೆಯ ಯಾವುದೇ ಸಮಯದಲ್ಲಿ ಹೆಸರಿಸಲಾದ ಅಧಿಕಾರಿ ಅಥವಾ ಸಕ್ಷಮ ಅಧಿಕಾರಿಯನ್ನು ಸಮನು ಮಾಡಬಹುದು.

12. ಕೇಳುವಿಕೆಯ (ಹಿಯರಿಂಗ್) ಮಾಹಿತಿಯನ್ನು ತಿಳಿಸುವ ಪ್ರಕ್ರಿಯೆ:– ಸಕ್ಷಮ ಅಧಿಕಾರಿ ಅಥವಾ ಮೇಲ್ಮನವಿ ಪ್ರಾಧಿಕಾರಿಯು ಅರ್ಜಿಯ ಮೇಲಿನ ಕೇಳುವಿಕೆಯ ಮಾಹಿತಿಯನ್ನು ಈ ಮುಂದಿನ ಯಾವುದಾದರೂ ಒಂದು ವಿಧಾನದಲ್ಲಿ ತಿಳಿಸತಕ್ಕದ್ದು, ಎಂದರೆ:–

(1) ಖುದ್ದಾಗಿ ನೀಡುವುದು;

(2) ಸ್ವೀಕೃತಿಯೊಡನೆ ನೋಂದಾಯಿತ ಅಂಚೆಯ ಮೂಲಕ; ಅಥವಾ

(3) ದೂರವಾಣಿ /ಫ್ಯಾಕ್ಸ್ / ಇ–ಮೇಲ್ / ಎಸ್.ಎಂ.ಎಸ್ ಮೂಲಕ (ಅರ್ಜಿದಾರರನ್ನು ಶೀಘ್ರ ಸಂಪರ್ಕ ಇರುವ ಯಾವುದೇ ವಿಧಾನದ ಮೂಲಕ).

(4) ಕೆ.ಜಿ.ಎಸ್.ಸಿ. ತಂತ್ರಾಂಶದಲ್ಲಿಯೂ ಈ ಮಾಹಿತಿಯನ್ನು ಅಳವಡಿಸತಕ್ಕದ್ದು.

13. ಅರ್ಜಿದಾರ ಅಥವಾ ಹೆಸರಿಸಲಾದ ಅಧಿಕಾರಿ ಅಥವಾ ಸಕ್ಷಮ ಅಧಿಕಾರಿಯ ವೈಯಕ್ತಿಕ ಹಾಜರಿ:– (1) ಎಲ್ಲಾ ಸನ್ನಿವೇಶಗಳಲ್ಲೂ ಕೇಳುವಿಕೆಯ (ಹಿಯರಿಂಗ್) ದಿನಾಂಕವನ್ನು ಕನಿಷ್ಠ ಏಳು ದಿನಗಳ ಮೊದಲು ಅರ್ಜಿದಾರನಿಗೆ ಅಥವಾ ಹೆಸರಿಸಲಾದ ಅಧಿಕಾರಿಗೆ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಅಧಿಕಾರಿಗೆ ತಿಳಿಸತಕ್ಕದ್ದು.

(2) ಅರ್ಜಿದಾರ ಅಥವಾ ಹೆಸರಿಸಲಾದ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಅಧಿಕಾರಿಯು ಕೇಳುವಿಕೆಯ ಸಂದರ್ಭದಲ್ಲಿ ಖುದ್ದಾಗಿ ಅಥವಾ ಆತನಿಂದ ಪ್ರಾಧಿಕೃತನಾದ ವ್ಯಕ್ತಿಯು ಹಾಜರಿರತಕ್ಕದ್ದು.

(3) ಕೇಳುವಿಕೆಯ ದಿನಾಂಕವನ್ನು ಸೂಕ್ತವಾಗಿ ತಿಳಿಸಿದ್ದಾಗ್ಯೂ ಯಾವೊಬ್ಬ ಪಕ್ಷಕಾರನು ಕೇಳುವಿಕೆಯ ದಿನಾಂಕದಂದು ಗೈರು ಹಾಜರಾದರೆ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಬಹುದು.

14. ಮೇಲ್ಮನವಿಯಲ್ಲಿ ಆದೇಶ:– (1) ಸಕ್ಷಮ ಅಧಿಕಾರಿ ಅಥವಾ ಸಂದರ್ಭಾನುಸಾರ ಮೇಲ್ಮನವಿ ಪ್ರಾಧಿಕಾರಿಯು ಆದೇಶವನ್ನು ಮುಕ್ತ ಕೇಳುವಿಕೆ (ಓಪನ್ ಹಿಯರಿಂಗ್) ಯಲ್ಲಿ ಘೋಷಿಸತಕ್ಕದ್ದು ಮತ್ತು ಇದು ಲಿಖಿತದಲ್ಲಿ ಇರತಕ್ಕದ್ದು (**ನಮೂನೆ–ಈ**).

(2) ಸಕ್ಷಮ ಅಧಿಕಾರಿಯು ಮೇಲ್ಮನವಿ ಆದೇಶದ ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಹೆಸರಿಸಲಾದ ಅಧಿಕಾರಿಗೆ ಆದೇಶದ ದಿನಾಂಕದಿಂದ ಏಳು ದಿನಗಳೊಳಗೆ ನೀಡತಕ್ಕದ್ದು.

(3) ಮೇಲ್ಮನವಿ ಪ್ರಾಧಿಕಾರಿಯು ಮೇಲ್ಮನವಿ ಆದೇಶದ ಪ್ರತಿಯನ್ನು ಅರ್ಜಿದಾರರಿಗೆ, ಹೆಸರಿಸಲಾದ ಅಧಿಕಾರಿಗೆ ಮತ್ತು ಸಕ್ಷಮ ಅಧಿಕಾರಿಗೆ ನೀಡತಕ್ಕದ್ದು.

(4) ಪರಿಹಾರ ವೆಚ್ಚವನ್ನು ವಿಧಿಸಿದ ಸಂದರ್ಭದಲ್ಲಿ, ಸಕ್ಷಮ ಅಧಿಕಾರಿ ಅಥವಾ ಸಂದರ್ಭನುಸಾರ ಮೇಲ್ಮನವಿ ಪ್ರಾಧಿಕಾರಿಯು ಅಂಥ ಆದೇಶದ ಪ್ರತಿಯನ್ನು ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿಯ ಸಾರ್ವಜನಿಕ ನೌಕರನ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಪ್ರಾಧಿಕಾರಿಯ ಸಂಬಳ ಅಥವಾ ಗೌರವ ಧನ ಅಥವಾ ಪರಿಶ್ರಮ ಧನದಿಂದ ಮೊಬಲಗನ್ನು ಕಡಿತಗೊಳಿಸುವುದಕ್ಕೆ ಸೂಚನೆಗಳೊಡನೆ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(5) ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿಯ ಸಾರ್ವಜನಿಕ ನೌಕರ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಿದ ಸಂದರ್ಭದಲ್ಲಿ, ಮೇಲ್ಮನವಿ ಪ್ರಾಧಿಕಾರಿಯು ಆತನ ವಿರುದ್ಧ ಹೊರಡಿಸಿದ ಆದೇಶವನ್ನು ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರ ಅಥವಾ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

15. ಪರಿಹಾರ ವೆಚ್ಚದ ವಸೂಲಿ:– ಸಕ್ಷಮ ಅಧಿಕಾರಿಯು, ಪರಿಹಾರ ವೆಚ್ಚವನ್ನು ವಿಧಿಸುವ ಆದೇಶದ ಪ್ರತಿಯನ್ನು ಸ್ವೀಕರಿಸಿದ ಮೇಲೆ ಹೆಸರಿಸಲಾದ ಅಧಿಕಾರಿ ಅಥವಾ ಸಂದರ್ಭಾನುಸಾರವಾಗಿ ಸಕ್ಷಮ ಅಧಿಕಾರಿ ಅಥವಾ ಮೇಲ್ಮನವಿ ಅಧಿಕಾರಿಯು ನಿರ್ಧರಿಸಬಹುದಾದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮುಂಬರುವ ವೇತನದಿಂದ ಅಥವಾ ಗೌರವಧನದಿಂದ ಅಥವಾ ಪರಿಶ್ರಮ ಧನದಿಂದ ಪರಿಹಾರ ವೆಚ್ಚವನ್ನು ವಸೂಲು ಮಾಡುವಂತೆ ಮಾಡತಕ್ಕದ್ದು ಮತ್ತು ಅದನ್ನು ಸಂಬಂಧಪಟ್ಟ ಇಲಾಖೆಗಳ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಜಮೆ ಮಾಡತಕ್ಕದ್ದು ಹಾಗೂ ಚಲನಿನ ಪ್ರತಿಯನ್ನು ಸಂಬಂಧಿಸಿದ ಹೆಸರಿಸಲಾದ ಅಧಿಕಾರಿಗೆ ಕಳುಹಿಸತಕ್ಕದ್ದು.

16. ಅಧಿನಿಯಮದಡಿಯಲ್ಲಿ ವಿಲೆಯಾದ ಎಲ್ಲಾ ಪ್ರಕರಣಗಳ ದಾಖಲೆಗಳ ನಿರ್ವಹಣೆ:- ಹೆಸರಿಸಲಾದ ಅಧಿಕಾರಿ, ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಗಳು ಅನುಕ್ರಮವಾಗಿ **ನಮೂನೆ-ಉ-1, ಉ-2, ಉ-3** ಗಳಲ್ಲಿ ಎಲ್ಲಾ ಪ್ರಕರಣಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ವಿಶೇಷವಾಗಿ ಉ-1 ನಮೂನೆ ಪ್ರಕಾರ ವಿಳಂಬ ಹಾಗೂ ವಿಫಲತೆ ಪ್ರಕರಣಗಳ ಬಗ್ಗೆ ತೆಗೆದುಕೊಂಡ ಕ್ರಮವನ್ನು ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥರಿಗೆ ನಿಯತಕಾಲಿಕ ವರದಿಯನ್ನು ಕಳುಹಿಸತಕ್ಕದ್ದು. 7 ಪ್ರಕರಣದಿಂದ ಹೆಚ್ಚು ವಿಳಂಬ/ವಿಫಲತೆಯನ್ನು ಹೊಂದಿರತಕ್ಕಂಥ ಸರ್ಕಾರಿ ನೌಕರರಿಗೆ ನಮೂನೆ ಉ-4 ರಂತೆ ಇ-ಮೇಲ್ ಮೂಲಕ ಕಾರಣ ಕೇಳುವ ನೋಟೀಸ್ ನೀಡತಕ್ಕದ್ದು. ಕಾರಣಗಳು ಸಮರ್ಪಕವಾಗದೆ ಇರುವ ಸಂದರ್ಭದಲ್ಲಿ ಶಿಸ್ತಿನ ಕ್ರಮ ಜರುಗಿಸುವುದು.

ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರ ತನ್ನ ಸಮಯ ಮಿತಿಯನ್ನು ಮೀರಿದ್ದರೆ, ನಮೂನೆ ಉ-5 ರಂತೆ ಇ-ಮೇಲ್ ಮೂಲಕ ಕಾರಣ ಕೇಳುವ ನೋಟೀಸ್ ನೀಡತಕ್ಕದ್ದು. ಇಂಥ ಪ್ರಕರಣಗಳನ್ನು ತಿಂಗಳ ಅಂತ್ಯಕ್ಕೆ ನಮೂನೆ ಉ-6ರಲ್ಲಿ ಸಿ.ಆ.ಸು.ಇಲಾಖೆಗೆ ವರದಿ ಮಾಡತಕ್ಕದ್ದು. ಸಾರ್ವಜನಿಕ ಪ್ರಾಧಿಕಾರದ ಮುಖ್ಯಸ್ಥರು ಈ ಕ್ರಮವನ್ನು ತನ್ನ ವಾರ್ಷಿಕ ವರದಿಯಲ್ಲಿ ಸೇರಿಸತಕ್ಕದ್ದು. ವರ್ಷ ಅಂತ್ಯಕ್ಕೆ ಯಾವುದೇ ವಿಫಲರಾಗದೇ ಇರುವ ಅಧಿಕಾರಿಯ ಪಟ್ಟಿಯನ್ನು ಪ್ರಕಟಿಸಿ, ಶ್ಲಾಘನೆಪತ್ರ ನೀಡತಕ್ಕದ್ದು. (ನಮೂನೆ ಉ-7).

17. **ಪ್ರಸಾರ ಮತ್ತು ತರಬೇತಿ:-** ರಾಜ್ಯ ಸರ್ಕಾರ ಹಾಗೂ ಸಾರ್ವಜನಿಕ ಪ್ರಾಧಿಕಾರಗಳು,

(1) ಈ ಅಧಿನಿಯಮದಡಿಯಲ್ಲಿ ಉದ್ದೇಶಿಸಲಾದ ಹಕ್ಕುಗಳನ್ನು ಹೇಗೆ ಚಲಾಯಿಸಬೇಕೆಂಬುದರ ಬಗ್ಗೆ, ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಅವಕಾಶವಂಚಿತ ಸಮುದಾಯಗಳಿಗೆ ಹೆಚ್ಚಿನ ಅರಿವನ್ನು ಮೂಡಿಸಲು ಶಿಬಿರಗಳನ್ನು ಮತ್ತು ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಂಘಟಿಸುವುದು;

(2) ಈ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅವಶ್ಯವಿರುವ ಸಿಬ್ಬಂದಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕದ್ದು.

(3) ಅಧಿಸೂಚಿತ ಸೇವೆಗಳು ಮತ್ತು ಅರ್ಜಿಗಳ ವಿಲೆ ವಿಧಾನಗಳ ಬಗ್ಗೆ ಸಾರ್ವಜನಿಕ ಪ್ರಾಧಿಕಾರಗಳಿಂದ ಸಕಾಲಿಕ ಹಾಗೂ ನಿಖರ ಮಾಹಿತಿಯನ್ನು ಪರಿಣಾಮಕಾರಿಯಾಗಿ ನಾಗರೀಕರಿಗೆ ನೀಡುವುದು.

(4) ಈ ಅಧಿನಿಯಮದಡಿಯಲ್ಲಿ ಹೆಸರಿಸಲಾದ ಅಧಿಕಾರಿ, ಸಕ್ಷಮ ಅಧಿಕಾರಿ ಮತ್ತು ಸಂದರ್ಭಾನುಸಾರ, ಮೇಲ್ಮನವಿ ಪ್ರಾಧಿಕಾರಗಳನ್ನು ಅವರುಗಳ ಕರ್ತವ್ಯಗಳ ಬಗ್ಗೆ ತರಬೇತಿ ನೀಡುವುದು ಹಾಗೂ ಕೈಪಿಡಿ ಹೊರಡಿಸುವುದು.

(5) ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಈ ಅಧಿನಿಯಮದಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಹಕ್ಕನ್ನು ಚಲಾಯಿಸಲು ಬಯಸುವಂಥ ವ್ಯಕ್ತಿಗೆ ಯುಕ್ತವಾಗಿ ಅಗತ್ಯವಾಗಬಹುದಾದಂಥ ಮತ್ತು ಸುಲಭವಾಗಿ ಒಟ್ಟುಗೂಡಿಸಿರಬಹುದಾದಂಥ ಮಾಹಿತಿ ಹಾಗೂ ವಿಧಾನಗಳನ್ನು ಒಳಗೊಂಡ ಮಾರ್ಗಸೂಚಿಗಳನ್ನು ರಚಿಸುವುದು.

(6) ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು, ಅವಶ್ಯಕವಾದಲ್ಲಿ, ಈ ಮುಂದಿನವುಗಳನ್ನು ಎಂದರೆ:-

(i) ಈ ಅಧಿನಿಯಮದ ಉದ್ದೇಶಗಳು;

(ii) ಹೆಸರಿಸಲಾದ ಅಧಿಕಾರಿ ಅಥವಾ ಸಕ್ಷಮ ಅಧಿಕಾರಿಗೆ ಸಲ್ಲಿಸತಕ್ಕಂಥ ಸೇವೆಗಳಿಗೆ ಸಂಬಂಧಿಸಿದ ಕೋರಿಕೆಯ ನಮೂನೆ ಮತ್ತು ವಿಧಾನ;

(iii) ಮೇಲ್ಮನವಿಗಳನ್ನು ದಾಖಲಿಸುವ ರೀತಿಯನ್ನು ಒಳಗೊಂಡಂತೆ ಸೇವೆಗಳ ವಿಳಂಬ ಅಥವಾ ತಿರಸ್ಕರಿಸುವುದಕ್ಕೆ ಸಂಬಂಧಿಸಿದಂತೆ ಕಾನೂನಿನಲ್ಲಿ ಲಭ್ಯವಿರುವ ಎಲ್ಲಾ ಪರಿಹಾರಗಳು;

(iv) ಈ ಅಧಿನಿಯಮಕ್ಕೆ ಅನುಸಾರವಾಗಿ ಸೇವೆಗಳನ್ನು ಪಡೆಯುವ ಸಂಬಂಧದಲ್ಲಿ ರಚಿಸಲಾದ ಅಥವಾ ಹೊರಡಿಸಲಾದ ಯಾವುವೇ ಹೆಚ್ಚುವರಿ ವಿನಿಯಮಗಳು ಅಥವಾ ಸುತ್ತೋಲೆಗಳು;

-ಇವುಗಳನ್ನು ಒಳಗೊಳ್ಳತಕ್ಕಂಥ, ನಿರ್ದಿಷ್ಟವಾಗಿ ಮತ್ತು ಮೇಲಿನ ಉಪನಿಯಮ (5)ರ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ನಿಯತಮಧ್ಯಂತರಗಳಲ್ಲಿ ಮೇಲಿನ (5)ನೇ ಉಪನಿಯಮದ ಅಡಿಯಲ್ಲಿ ಉಲ್ಲೇಖಿಸಿದ ಮಾರ್ಗಸೂಚಿಗಳನ್ನು ಇಂದೀಕರಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

18. ಅನುಷ್ಠಾನದ ಮೇಲ್ವಿಚಾರಣೆ:- ರಾಜ್ಯ ಸರ್ಕಾರವು, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆಯ ಮೂಲಕ, ಅಧಿಸೂಚಿತ ಸೇವೆಗಳ ಸಕಾಲಿಕ ವಿಲೆಯ ಕೇಂದ್ರೀಕೃತ ಮೇಲ್ವಿಚಾರಣೆಗಾಗಿ ಹಾಗೂ ಈ ಅಧಿನಿಯಮ ವಿವಿಧ ಉಪಬಂಧಗಳ ಮೇಲ್ವಿಚಾರಣೆಗಾಗಿ ಒಂದು ವ್ಯವಸ್ಥೆಯನ್ನು ಪರಿಚಯಿಸತಕ್ಕದ್ದು.

ನಮೂನೆ – ಆ

(ನಿಯಮ 4(1)ನ್ನು ನೋಡಿ)

ಹೆಸರಿಸಲಾದ ಅಧಿಕಾರಿ/ಪ್ರಾಧಿಕೃತ ಅಧಿಕಾರಿಯಿಂದ ಸ್ವೀಕೃತ ಪತ್ರ

1	ಅರ್ಜಿದಾರನ ಹೆಸರು ಮತ್ತು ವಿಳಾಸ	
2	ಅರ್ಜಿಯ ದಿನಾಂಕ	
3	ಅರ್ಜಿಯ ಸ್ವೀಕೃತ ಸಂಖ್ಯೆ	
4	ಹೆಸರಿಸಲಾದ ಅಧಿಕಾರಿಯ ಹೆಸರು ಹಾಗೂ ಅವರ ಪದನಾಮ ಮತ್ತು ವಿಳಾಸ	
5	ಕೋರಿದ ಸೇವೆಗಳ ವಿವರ	
6	ಅರ್ಜಿಯೊಡನೆ ಲಗತ್ತಿಸಿದ ಸಂಬಂಧಿಸಿದ ದಾಖಲೆಗಳ ವಿವರ	
7	ಒದಗಿಸುವುದು (ಹೌದು/ಇಲ್ಲ)	
8	ಸೇವೆ ಒದಗಿಸುವ ದಿನಾಂಕ	
9	ತಿರಸ್ಕಾರ (ಕಾರಣಗಳೊಂದಿಗೆ)	

ಸ್ಥಳ: ಹೆಸರಿಸಲಾದ ಅಧಿಕಾರಿ/
ದಿನಾಂಕ: ಪ್ರಾಧಿಕೃತ ಅಧಿಕಾರಿಯ ಸಹಿ

ನಮೂನೆ – ಇ

ಪರಿಹಾರ ವೆಚ್ಚದ ವಸೂಲಿಗೆ ನೋಟೀಸ್ ನೀಡುವ ನಮೂನೆ

(ಸಕ್ಷಮ ಅಧಿಕಾರಿಯಿಂದ)

ನೀವು ಅಂಗೀಕಾರದ ರಸೀದಿಯ ಸಂಖ್ಯೆಯ-----------ಮೂಲಕ ಅರ್ಜಿದಾರರಾದ ಶ್ರೀ----------------------ರವರಿಂದ ಸ್ವೀಕರಿಸಿದ ಅರ್ಜಿ/ಅರ್ಜಿಗಳನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರ ಅಡಿಯಲ್ಲಿ ನಿಗದಿಪಡಿಸಿದ ಸೇವೆಯನ್ನು ಕಾಲಮಿತಿಯೊಳಗೆ ನೀಡಲು ವಿಫಲರಾಗಿರುತ್ತೀರಿ/ವಿಳಂಬ ಮಾಡಿರುತ್ತೀರಿ. ಇದರಿಂದಾಗಿ ಅರ್ಜಿದಾರರಿಗೆ------ದಿನಗಳ/ವಿಳಂಬ/ವಿಫಲತೆಗೆ ದಿನವೊಂದಕ್ಕೆ ರೂ.20/-ರಂತೆ ಪರಿಹಾರ ಶುಲ್ಕವಾಗಿ ಪಾವತಿಸಲಾಗಿರುತ್ತದೆ. ಈಗಾಗಲೇ ದಿನಾಂಕ:----------ರಂದು ಸದರಿ ಅರ್ಜಿದಾರರಿಗೆ ಅಧಿನಿಯಮದ 11(1) ರಂತೆ ರೂ.------------ಅನ್ನು ಪಾವತಿಸಲಾಗಿದೆ. ಈ ಪರಿಹಾರ ವೆಚ್ಚವಾದ ರೂ.------/- ಗಳನ್ನು ತಮ್ಮ ಆಯಾ ತಿಂಗಳ ವೇತನದಿಂದ ವಸೂಲಿ ಮಾಡಲಾಗುವುದು. ಈ ಬಗ್ಗೆ ನಿಮ್ಮ ಸ್ಪಷ್ಟ ವಿವರಣೆಯನ್ನು 7 ದಿನಗಳೊಳಗಾಗಿ ನೀಡಲು ಸೂಚಿಸಿದೆ.

ಈ ಬಗ್ಗೆ ಇನ್ನು ಮುಂದೆ ಈ ರೀತಿಯ ವಿಫಲತೆ/ವಿಳಂಬಕ್ಕೆ ಕಾರಣ ನೀಡದೆ ಸೇವೆಯನ್ನು ಸಕಾಲದಲ್ಲಿ ಒದಗಿಸತಕ್ಕದ್ದು.

ದಿನಾಂಕ:

ಸ್ಥಳ: ಸಕ್ಷಮ ಅಧಿಕಾರಿಯ ಸಹಿ

ನಮೂನೆ – ಈ

ಮೇಲ್ಮನವಿ ಆದೇಶದ ನಮೂನೆ

(ಸಕ್ಷಮ ಅಧಿಕಾರಿ/ಮೇಲ್ಮನವಿ ಪ್ರಾಧಿಕಾರ)

ದಿನಾಂಕ:----------------ರಂದು ಸ್ವೀಕೃತ ರಸೀದಿ ಸಂಖ್ಯೆ--------- ಹೊಂದಿರುವ ಅರ್ಜಿದಾರರು ಕೇಳಿರುವ ಅನುಸೂಚಿತ ಸೇವೆಗಳಲ್ಲಿ ವಿಳಂಬ/ವಿಫಲತೆಯನ್ನು ದೃಢೀಕರಿಸಿರುವುದರಿಂದ ಅರ್ಜಿದಾರರಿಗೆ ರೂ.------------ಗಳ ಪರಿಹಾರ/ಶುಲ್ಕವನ್ನು ಪಾವತಿಸಲಾಗಿರುತ್ತದೆ. ಈ ಬಗ್ಗೆ ಹೆಸರಿಸಲಾದ ಅಧಿಕಾರಿಯಿಂದ ಸ್ಪಷ್ಟವಾದ ವಿವರಣೆಯನ್ನು ಏಳು ದಿನಗಳೊಳಗಾಗಿ ಕೇಳಲಾಗಿತ್ತು. ಈ ಬಗ್ಗೆ ಹೆಸರಿಸಲಾದ ಅಧಿಕಾರಿ ಹಾಗೂ ಅರ್ಜಿದಾರರ ಅಹವಾಲುಗಳನ್ನು ವಿಚಾರಣೆ ಮಾಡಲಾಗಿದೆ. ವಿಚಾರಣೆ ಸಮಯದಲ್ಲಿ ಅಹವಾಲುಗಳನ್ನು/ಸಂಬಂಧಿಸಿದ ದಾಸ್ತಾವೇಜುಗಳನ್ನು ಹಾಗೂ ಇನ್ನಿತರ ಮಾಹಿತಿಗಳನ್ನು ಆಧರಿಸಿ, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರ ನಿಯಮ (9) ರಂತೆ ಶ್ರೀ-------------------ರವರು ಸದರಿ-------------ಸೇವೆಗಳನ್ನು ಒದಗಿಸಲು ವಿಫಲವಾಗಿರುತ್ತಾರೆ/ ವಿಳಂಬ ಮಾಡಿರುತ್ತಾರೆಂದು ದೃಢಪಟ್ಟಿರುತ್ತದೆ. ಆದುದರಿಂದ ಅವರ ಮುಂಬರುವ ವೇತನದಿಂದ ರೂ.------------ಗಳನ್ನು ಕಡಿತಗೊಳಿಸಿ, ಇಲಾಖೆಗೆ ಸಂಬಂಧಪಟ್ಟ ಲೆಕ್ಕಶೀರ್ಷಿಕೆಯಡಿ ಜಮಾ ಮಾಡಲು ವೇತನ ಬಟವಾಡೆ ಅಧಿಕಾರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕ: ಸಹಿ/-
ಸ್ಥಳ: ಸಕ್ಷಮ ಅಧಿಕಾರಿ/ಮೇಲ್ಮನವಿ ಪ್ರಾಧಿಕಾರ

(State Emblem)

ನಮೂನೆ-ಅ
ಮಾದರಿ ಸೂಚನಾ ಫಲಕ
(ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ – 2011)

ಕಚೇರಿ:
ಗ್ರಾಮ/ತಾಲ್ಲೂಕು/ಜಿಲ್ಲೆಯ ಹೆಸರು

ಅನುಸೂಚಿತ ಸೇವೆಗಳು

ಕ್ರ.ಸಂ.	ಸೇವೆಗಳ ಪಟ್ಟಿ	ನಿಗದಿತ ಶುಲ್ಕ	ಲಗತ್ತಿಸಬೇಕಾದ ದಾಖಲೆಗಳ ಪಟ್ಟಿ (ಚೆಕ್-ಲಿಸ್ಟ್)	ಹೆಸರಿಸಲಾದ ಅಧಿಕಾರಿಯ ಪದನಾಮ	ಹೆಸರಿಸಲಾದ ಅಧಿಕಾರಿಗಳಿಗೆ ಗೊತ್ತು ಮಾಡಿದ ಕಾಲಮಿತಿ	ಸಕ್ಷಮ ಅಧಿಕಾರಿ	ಸಕ್ಷಮ ಅಧಿಕಾರಿಗೆ ಗೊತ್ತು ಮಾಡಿದ ಕಾಲಮಿತಿ	ಮೇಲ್ಮನವಿ ಪ್ರಾಧಿಕಾರ	ಮೇಲ್ಮನವಿ ಪ್ರಾಧಿಕಾರಕ್ಕೆ ಗೊತ್ತು ಮಾಡಿದ ಕಾಲಮಿತಿ

ಸೇವೆಗಳ ಅರ್ಜಿ ನಮೂನೆ ನೀಡುವ ಹಾಗೂ ಅರ್ಜಿ ಸ್ವೀಕರಿಸುವ ಅಧಿಕೃತ ಅಧಿಕಾರಿ

ನಾಗರೀಕರಿಗೆ ಸೂಚನೆ

ಸ್ವೀಕೃತಿ ಪತ್ರ ಕಡ್ಡಾಯವಾಗಿ ಪಡೆಯಿರಿ
ಸೇವೆಗಳು ವಿಳಂಬವಾದರೆ/ಸಿಗದಿದ್ದರೆ ನಿಮ್ಮ ಸ್ವೀಕೃತಿ ರಸೀತಿಯೊಂದಿಗೆ ಸಕ್ಷಮ ಅಧಿಕಾರಿ/
ಮೇಲ್ಮನವಿ ಪ್ರಾಧಿಕಾರವನ್ನು ಸಂಪರ್ಕಿಸಿ.
ಅರ್ಜಿಗಳ ಸ್ಥಿತಗತಿಗಳ ನಿರ್ವಹಣೆಗಾಗಿ ಸಂಪರ್ಕಿಸಿ: 080-44554455 ಇ-ಮೇಲ್ : kgsc@nic.in
(ವೀಕ್ಷಿಸಿ: www.kgsc.kar.nic.in)

ಸೇವೆಗಳನ್ನು ನೀಡದ ಸರ್ಕಾರಿ ನೌಕರರು ರೂ.20/- ರಂತೆ ಪ್ರತಿ ಸೇವೆಗೆ ಪ್ರತಿದಿನದ ವಿಳಂಬಕ್ಕೆ ಪರಿಹಾರ ಶುಲ್ಕ ತಮ್ಮ ಸಂಬಳದಿಂದ ನೀಡುವುದು

ನಮೂನೆ – ಉ-1

ಹೆಸರಿಸಲಾದ ಅಧಿಕಾರಿಯು ನಿರ್ವಹಿಸಬೇಕಾದ ರಿಜಿಸ್ಟರ್

(ಹೆಸರು, ಪದನಾಮ ಮತ್ತು ವಿಳಾಸ)

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು ಮತ್ತು ವಿಳಾಸ ಅರ್ಜಿಯ ಸ್ವೀಕೃತ ಸಂಖ್ಯೆ	ಕೋರಿದ ಸೇವೆಗಳ ವಿವರ	ಅರ್ಜಿಯೊಡನೆ ಲಗತ್ತಿಸಲಾದ ಸಂಬಂಧಿಸಿದ ದಾಖಲೆಗಳ ವಿವರ	ಸೇವೆಗಳ ಸಂಖ್ಯೆ		
				ಒದಗಿಸಿರುವುದು	ತಿರಸ್ಕಾರ (ತಿರಸ್ಕಾರಕ್ಕೆ ಕಾರಣಗಳು)	ವಿಳಂಬ (ವಿಳಂಬವಾದ ದಿನಗಳ ಸಂಖ್ಯೆ)
1	2	3	4	5	6	7

ನಮೂನೆ-ಉ -2

ಸಕ್ಷಮ ಪ್ರಾಧಿಕಾರವು ನಿರ್ವಹಿಸಬೇಕಾದ ರಿಜಿಸ್ಟರ್

(ಹೆಸರು, ಪದನಾಮ ಮತ್ತು ವಿಳಾಸ)

ಕ್ರಮ ಸಂಖ್ಯೆ	ಮೇಲ್ಮನವಿದಾರನ ಹೆಸರು ಮತ್ತು ವಿಳಾಸ	ಸ್ವೀಕೃತ ಸಂಖ್ಯೆಯೊಡನೆ ಅರ್ಜಿಯ ದಿನಾಂಕ	ಕೋರಲಾದ ಸೇವೆಗಳ ವಿವರ	ಯಾರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆಯೋ ಅಂತಹ ಹೆಸರಿಸಲಾದ ಅಧಿಕಾರಿಯ ಹೆಸರು ಮತ್ತು ಪದನಾಮ	ಮೇಲ್ಮನವಿಯೊಡನೆ ಲಗತ್ತಿಸಲಾದ ಸಂಬಂಧಿತ ದಾಖಲೆಗಳ ವಿವರ	ಮೇಲ್ಮನವಿಗೆ ಆಧಾರ	ಕೋರಿದ ಪರಿಹಾರ	ಮೇಲ್ಮನವಿ ಯನ್ನು ವಿಲೆ ಮಾಡಿದ ದಿನಾಂಕ	ಸೇವೆಗಳ ಸಂಖ್ಯೆ	
									ಪರಿಹಾರ ವೆಚ್ಚ ಪಾವತಿ ಮಾಡಿದ ದಿನಾಂಕ	ಪರಿಹಾರ ವೆಚ್ಚವನ್ನು ವಸೂಲಿ ಮಾಡಿದ ದಿನಾಂಕ
1	2	3	4	5	6	8	9	10	11	12

ನಮೂನೆ-ಉ-3

ಮೇಲ್ಮನವಿ ಪ್ರಾಧಿಕಾರವು ನಿರ್ವಹಿಸಬೇಕಾದ ರಿಜಿಸ್ಟರ್

ಕ್ರಮ ಸಂಖ್ಯೆ	ಮೇಲ್ಮನವಿದಾರನ ಹೆಸರು ಮತ್ತು ವಿಳಾಸ	ಸ್ವೀಕೃತ ಸಂಖ್ಯೆಯೊಡನೆ ಮೊದಲ ಅರ್ಜಿಯ ದಿನಾಂಕ	ಕೋರಲಾದ ಸೇವೆಯ ಹೆಸರು	ಎರಡನೇ ಮೇಲ್ಮನವಿಯ ಅರ್ಜಿಯೊಡನೆ ಸಲ್ಲಿಸಲಾದ ದಾಖಲೆಗಳ ವಿವರ	ಮೇಲ್ಮನವಿಯನ್ನು ಸಲ್ಲಿಸುವುದಕ್ಕೆ ಇರುವ ಆಧಾರಗಳು	ಹೆಸರಿಸಲಾದ ಅಧಿಕಾರಿಯ ಹೆಸರು ಮತ್ತು ಪದನಾಮ	ಯಾವ ಸಕ್ಷಮ ಅಧಿಕಾರಿಯ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆಯೋ ಆ ಅಧಿಕಾರಿಯ ಹೆಸರು ಮತ್ತು ಪದನಾಮ	ವಿಲೆಯ ದಿನಾಂಕ
1	2	3	4	5	6	7	8	9

ನಮೂನೆ ಉ–4

ನಮೂನೆ ಉ–1ರಲ್ಲಿ ವಿವರಿಸಿದಂತೆ, ನೀವು ಕರ್ನಾಟಕ ನಾಗರೀಕರಿಗೆ ಸೇವೆ ಖಾತ್ರಿ ಅಧಿನಿಯಮ 2011ರಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಪೈಕಿ .... ಸಂಖ್ಯೆ ಪ್ರಕರಣಗಳಲ್ಲಿ ನಾಗರೀಕರು ಕೇಳಿರುವ ಸೇವೆಯನ್ನು ಸಕಾಲಕ್ಕೆ ಒದಗಿಸಲು ವಿಫಲರಾಗಿರುತ್ತೀರಿ ಎಂದು ಗಮನಿಸಲಾಗಿದೆ. ಆದುದರಿಂದ ಈ ವಿಫಲತೆಗೆ ಕಾರಣ ಏನು ಹಾಗೂ ಇನ್ನು ಮುಂದೆ ಹೀಗೆ ಆಗದಂತೆ ತೆಗೆದುಕೊಂಡ ಕ್ರಮ ಏನು? ಈ ಬಗ್ಗೆ 7 ದಿವಸದೊಳಗೆ ನಿಮ್ಮ ವಿವರವನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಸಕ್ಷಮ ಅಧಿಕಾರಿ/ಮೇಲ್ಮನವಿ ಪ್ರಾಧಿಕಾರ

ನಮೂನೆ ಉ–5

ನೀವು ಕರ್ನಾಟಕ ನಾಗರೀಕರಿಗೆ ಸೇವೆ ಖಾತ್ರಿ ಅಧಿನಿಯಮ 2011ರ ಅಡಿಯಲ್ಲಿ ಸ್ವೀಕರಿಸಿದ .... ಸಂಖ್ಯೆ ಮೇಲ್ಮನವಿ ಅರ್ಜಿಗಳನ್ನು ಅಧಿನಿಯಮದ ಅನುಸೂಚಿಯಲ್ಲಿ ನಿರ್ಧರಿಸಿದ ಸಮಯ ಮಿತಿಯ ಒಳಗೆ ವಿಲೆಗೊಳಿಸಲು ವಿಫಲರಾಗಿರುತ್ತೀರಿ ಎಂದು ಗಮನಿಸಲಾಗಿದೆ. ಈ ಬಗ್ಗೆ 7 ದಿವಸದೊಳಗೆ ನಿಮ್ಮ ವಿವರಣೆಯನ್ನು ನೀಡಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಮೇಲೆ ಮುಂದಿನ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಶಿಸ್ತು ಪ್ರಾಧಿಕಾರ.

ನಮೂನೆ ಉ–6

ಇಲಾಖೆ ಹೆಸರು	ಸ್ವೀಕೃತ ಅರ್ಜಿಗಳ ಒಟ್ಟು ಸಂಖ್ಯೆ	7 ಪ್ರಕರಣಕ್ಕಿಂತ ಹೆಚ್ಚು ವಿಫಲಗೊಂಡ ಅಧಿಕಾರಿಗಳ ಸಂಖ್ಯೆ	ಶಿಸ್ತಿನ ಕ್ರಮ ಜರುಗಿಸಿದ ಸಂಖ್ಯೆ	ವಿಫಲತೆಗೆ ವಿಶ್ಲೇಷಿಸಿದ ಸಾಮಾನ್ಯ ಕಾರಣಗಳು	ಸುಧಾರಣೆಗೆ ತೆಗೆದುಕೊಂಡ ಕ್ರಮಗಳು
1	2	3	4	5	6

ನಮೂನೆ ಉ–7

ಕರಡು ಪ್ರಶಂಸನಾ ಪತ್ರ

ಕರ್ನಾಟಕ ನಾಗರೀಕರಿಗೆ ಸೇವೆ ಖಾತ್ರಿ ಅಧಿನಿಯಮ–2011ರ ಅಡಿಯಲ್ಲಿ ತಾವು ನಾಗರೀಕರಿಗೆ ವರ್ಷಾದ್ಯಂತ ಸಕಾಲಿಕ ಸೇವೆಯನ್ನು ನೀಡಿರುತ್ತೀರಿ ಎಂಬುದು ಹೆಮ್ಮೆಯ ವಿಷಯ. ತಮ್ಮ ಉತ್ತಮ ಸೇವೆ ನಿರ್ವಹಣೆಯಿಂದ ಇಲಾಖೆಗೆ ಹಾಗೂ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದಿದೆ, ಹಾಗೂ ನಾಗರೀಕರಲ್ಲಿ ಈ ಅಧಿನಿಯಮ ಹಾಗೂ ಸರ್ಕಾರದ ಆಡಳಿತ ಸುಧಾರಣೆಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿಶ್ವಾಸ ಮೂಡಿದೆ. ತಮ್ಮ ಸೇವೆಯ ಮಾದರಿಯಿಂದ ತಮ್ಮ ಸಹೋದ್ಯೋಗಿಗಳು ಉತ್ತೇಜನ ಹಾಗೂ ಪ್ರೇರಣೆ ಪಡೆಯುತ್ತಾರೆ ಎಂದು ಭಾವಿಸಿದೆ. ಮುಂದಿನ ದಿವಸಗಳಲ್ಲಿ ಇಲಾಖೆಯ ಎಲ್ಲಾ ಸಿಬ್ಬಂದಿಗಳೂ, ಸರ್ಕಾರ ಹಾಗೂ ನಾಗರೀಕರ ಪ್ರಶಂಸೆಗೆ ಪಾತ್ರರಾಗುತ್ತಾರೆ ಎಂದು ಆಶಿಸುತ್ತಾ, ತಮ್ಮ ಸೇವಾವಧಿಯಲ್ಲಿ ತಮಗೆ ಹೆಚ್ಚಿನ ಯಶಸ್ಸು ಸಿಗಲಿ ಎಂದು ಅಪೇಕ್ಷಿಸುತ್ತಾ ಸರ್ಕಾರದ ಪರವಾಗಿ ತಮಗೆ ಅಭಿನಂದನೆಗಳು.

ಇಲಾಖಾ ಕಾರ್ಯದರ್ಶಿಗಳು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಜಿ. ಶಶಿಕಲಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಆಸು–ನಾಗರೀಕ ಸೇವೆಗಳು)

ವಿಶೇಷ ಪತ್ರಿಕೆ

ಭಾಗ - I	ಬೆಂಗಳೂರು, ಶುಕ್ರವಾರ, ಮಾರ್ಚ್ ೨, ೨೦೧೨ (ಫಾಲ್ಗುಣ ೧೨, ಶಕ ವರ್ಷ ೧೯೩೩)	ನಂ. ೧೪೬

ಕರ್ನಾಟಕ ಸರ್ಕಾರದ ನಡವಳಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ನಿಧಿ ಸಂಘದ ಗವರ್ನಿಂಗ್ ಕೌನ್ಸಿಲ್‌ಗೆ ಸದಸ್ಯರನ್ನಾಗಿ ಅಧಿಕಾರಿಗಳು/ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷರುಗಳನ್ನು ನಾಮ ನಿರ್ದೇಶನ ಮಾಡುವ ಬಗ್ಗೆ.

ಓದಲಾಗಿದೆ:

1. ಕೇಂದ್ರ ಸರ್ಕಾರದ ಪತ್ರ ಸಂ:ಅಸಪ,ಂ.12011/9/2007-ಎನ್‌ಆರ್‌ಇಜಿಎ, ದಿನಾಂಕ: 19.03.2008, 09-07-2008, 25-11-2008, 24-12-2008.
2. ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮ 2008, ಬೆಂಗಳೂರು ದಿನಾಂಕ:31.07.2008
3. ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ (ತಿದ್ದುಪಡಿ) ನಿಯಮ 2009, ಬೆಂಗಳೂರು, ದಿನಾಂಕ: 11-03-2009.
4. ರಾಜ್ಯ ಉದ್ಯೋಗ ಖಾತರಿ ಪರಿಷತ್ ಸಭೆ ದಿನಾಂಕ: 07.01.2009.
5. ಕರ್ನಾಟಕ ಸರ್ಕಾರದ ಆದೇಶ ಸಂ.ನಂ.ಗ್ರಾಅಪ:37:ಉಖಾಯೋ-2008, ದಿನಾಂಕ: 16.03.2009.
6. ಕರ್ನಾಟಕ ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 182 ಉಖಾಯೋ 2009, ಬೆಂಗಳೂರು, ದಿ: 31.08.2009.

ಪ್ರಸ್ತಾವನೆ:

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005ರ ಕಲಂ 21(1) ರ ಅನ್ವಯ 'ರಾಜ್ಯ ನಿಧಿ' ಯನ್ನು ಸ್ಥಾಪಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ 1 ರಲ್ಲಿ ಸೂಚಿಸಲಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ ನಿಯಮವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ 2 ಮತ್ತು 3ರಂತೆ ರಚಿಸಲಾಗಿರುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನವನ್ನು ನೇರವಾಗಿ ರಾಜ್ಯಕ್ಕೆ ಪಡೆದು ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಸಮರ್ಪಕವಾಗಿ ಉಸ್ತುವಾರಿ ಮಾಡುವುದರಿಂದ ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದೆಂದು, ಮೇಲೆ ಓದಲಾದ ಕ್ರಮ ಸಂ.4ರ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಉದ್ದೇಶದಿಂದ ಸಹಕಾರ ಸಂಘಗಳ ಅಧಿನಿಯಮದ ಪ್ರಕಾರ ಸಂಘವನ್ನು ರಚಿಸಿ ನೋಂದಣಿ ಮಾಡಲಾಗಿರುತ್ತದೆ.

